TIGHT BINDING BOOK

UNIVERSAL LIBRARY
OU_198679
UNIVERSAL LIBRARY

# ತೀರ್ಥ-ಯಾತ್ರೆಗಳು.

1925

ಲೇಖಾಂಕ—೧

## ವಿಷಯಪ್ರವೇಶ.

ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾ
ತೇ ಪುನಂತ್ಯುರು ಕಾಲೇನ ದರ್ಶನಾ ದೇವಸಾಧವಃ ||

ಈ ಮೇಲಿನ ಶ್ಲೋಕವು ವಿಶೇಷ ಭಾವಗರ್ಭಿತವಾಗಿರುವದು. ತೀರ್ಥಾದಿಗಳು ಅಪ್ರಯೋಜಕವೆಂದು ಇದು ಸಾರುತ್ತಿದ್ದರೂ ನಿಜವಾದ ತೀರ್ಥವಾವುದೆಂಬದನ್ನು ತೋರಿಸಿಕೊಡುವದು. ಆಧುನಿಕರಾದ ನಮ್ಮ ಸ್ವಭಾವಾದಿಗಳನ್ನು ಪರೀಕ್ಷಿಸಿದರೆ ಮೇಲೆ ಉದಾಹೃತವಾದ ಶ್ಲೋಕವು ಯಾವ ಕಾಲದಲ್ಲಿ ಪ್ರಕಟವಾಗಿರಬಹುದೆಂಬದು ಕಂಡು ಬರುತ್ತದೆ. ನಿಜವಾಗಿಯೂ ಈಗಿನ ಕಾಲದಲ್ಲಿ ನಮ್ಮಲ್ಲಿ ತೀರ್ಥಾದಿಗಳ ವಿಷಯವಾಗಿ ದೃಢವಿಶ್ವಾಸವಿಲ್ಲ, ಸದ್ಭಾವನೆಯಿಲ್ಲ, ನಾವು ಪ್ರತಿನಿತ್ಯ ಉಪಯೋಗಿಸುವ ನೀರಿನಂತೆಯೇ ಯಾವದೊಂದು ಪವಿತ್ರ ತೀರ್ಥದಲ್ಲಿಯ ನೀರೂ ಇರುವದೆಂದು ಭಾವಿಸುವೆವು. ಇದರಂತೆ ದೇವಪ್ರತಿಮೆಗಳ ವಿಷಯವಾಗಿಯೂ ಸಾಮಾನ್ಯ ಭಾವನೆಯನ್ನು ತಾಳುವೆವು. ಈ ಅಭಾವಿಕತನದಿಂದ ನಮ್ಮ ತೀರ್ಥಾಟನೆಯ ಶ್ರಮವು ನಿರರ್ಥಕವಾಗತೊಡಗಿದಾಗ ಲೋಕಹಿತಬುದ್ಧಿಯುಳ್ಳ ಮಹಾತ್ಮರ ವಾಣಿಯು ಮೇಲಿನ ದಿವ್ಯ ಶ್ಲೋಕರೂಪದಿಂದ ಹೊರಬಿದ್ದು, ನಿಜವಾಗಿಯೂ ನಮಗೆ ಜ್ಞಾನವನ್ನುಂಟು ಮಾಡುವ ಸಾಧುದರ್ಶನವನ್ನು ಬೋಧಿಸಿತು. ಸಾಧು ದರ್ಶನದಿಂದ ಸದ್ಬೋಧ ಶ್ರವಣವಾಗುತ್ತದೆ.

ಸದ್ಬೋಧ ಶ್ರವಣದಿಂದ ದುರ್ಬುದ್ಧಿಯು ನಾಶವಾಗಿ ಸದ್ಭಾವನೆಯುಂಟಾಗುತ್ತದೆ. ಅಣುರೇಣು ತೃಣಕಾಷ್ಠಗಳಲ್ಲಿ ಪರಮಾತ್ಮನು ವ್ಯಾಪಿಸಿರುವನೆಂಬ ಭಾವನೆಯು ನಮಗಾಗುವದಲ್ಲದೆ ಯಾವ ಯಾವ ಸ್ಥಳಗಳಲ್ಲಿ ಪರಮಾತ್ಮನ ವಿಭೂತಿಯು ಹ್ಯಾಗೆ ಹ್ಯಾಗೆ ಇರುತ್ತದೆಂಬದೂ ತಿಳಿದು ಬರುತ್ತದೆ. ಅರ್ಥಾತ್ ನಮಗೆ ಜ್ಞಾನೋದಯವಾಗಿ ತೀರ್ಥ-ಯಾತ್ರೆಗಳನ್ನು ಮಾಡುವ ಅಧಿಕಾರವು ಪ್ರಾಪ್ತವಾಗುತ್ತದೆ. ಅಂದರೆ ಯಾವದೊಂದು ತೀರ್ಥದಲ್ಲಿ ದೇವತ್ವ ಭಾವವನ್ನು ತಾಳಲಿಕ್ಕೆ ಬರುತ್ತದೆ.

ಎಲ್ಲಿಯ ವರೆಗೆ ನಮಗೆ ತೀರ್ಥ ಸ್ನಾನದಿಂದ ಪುನೀತರಾದೆವು, ನಿಷ್ಪಾಪರಾದೆವು ಎಂಬ ಭಾವನೆಯುಂಟಾಗುವದಿಲ್ಲವೋ ಅಲ್ಲಿಯ ವರೆಗೆ ನಾವು ತೀರ್ಥಸ್ನಾನಕ್ಕೆ ಅಯೋಗ್ಯರೆಂದು ಹೇಳಬಹುದು. ಹೊಟ್ಟೆ ತುಂಬದೆ ಇದ್ದ ಭೋಜನವೂ, ಸ್ಮರಣೆಯಲ್ಲಿ ನಿಲ್ಲದ ವಾಚನವೂ ಹ್ಯಾಗೆ ನಿರರ್ಥಕಗಳಾಗುವವೋ ಹಾಗೆ ಸದ್ಭಾವನೆ ಹುಟ್ಟದೆ ಇದ್ದ ತೀರ್ಥಾಟನವೂ ನಿರರ್ಥಕವಾಗುವದು ಆದ್ದರಿಂದಲೇ ಶಿರೋಭಾಗದಲ್ಲಿ ಉಲ್ಲೇಖಿಸಿದ ಶ್ಲೋಕದಲ್ಲಿ ತೀರ್ಥಾದಿಗಳನ್ನು ಗೌಣೀಕರಿಸಿ ವಿವರಿಸಿರುವರು. ಇದರಿಂದ ತೀರ್ಥಾದಿಗಳು ಸರ್ವಸ್ವೀ ತ್ಯಾಜ್ಯಗಳೆಂದು ಯಾರೂ ಭಾವಿಸಲಾಗದು. ಗೋಕ್ಷೀರವು ಭೂಲೋಕದ ಅಮೃತವೆನಿಸಿದ್ದರೂ ಜ್ವರಪೀಡಿತನಿಗೆ ಅಪಾನೀಯ್ಯವಾಗುವದು. ಇದರಿಂದ ಸದ್ವಸ್ತುಗಳನ್ನು ಸೇವಿಸಲಿಕ್ಕಾದರೂ ಪಾತ್ರತೆಯು ಬೇಕೆಂಬದು ಸಿದ್ಧವಾಗುವದು ಈ ಪಾತ್ರಾಪಾತ್ರ ವಿಚಾರದ ಪ್ರಸ್ತಾವನೆಯನ್ನೇ ಮೇಲಿನ ಶ್ಲೋಕವು ಮಾಡಿರುತ್ತದೆ. ತೀರ್ಥಗಳು, ಮೃಣ್ಮಯ-ಶಿಲಾಮಯ ದೇವ ಮೂರ್ತಿಗಳು ಬಹುಕಾಲಕ್ಕಾದರೂ ಪ್ರಾಣಿಗಳನ್ನು ಪುನೀತರನ್ನಾಗ ಮಾಡುವವೋ ಎಂಬದು ಸಂಶಯಾಸ್ಪದವು; ಸಾಧುಗಳ ದರ್ಶನಮಾತ್ರದಿಂದ ಪ್ರಾಣಿಮಾತ್ರರು ಪುನೀತರಾಗುವರು ಎಂಬದೇ ಆ ಶ್ಲೋಕಾಭಿಪ್ರಾಯವು; ಆದ್ದರಿಂದ ಸಾಧುಗಳ ದರ್ಶನವೇ ನಿಜವಾದ ತೀರ್ಥಸ್ನಾನವೆನಿಸುವದು. ಇದೇ ಅರ್ಥವನ್ನೇ ಈ ಕೆಳಗಿನ ಶ್ಲೋಕವೂ ಪುಷ್ಟೀಕರಿಸುತ್ತದೆ.

''ಗಂಗಾಪಾಪಂ ಶಶೀತಾಪಂ ದೈನ್ಯಂ ಕಲ್ಪತರುಸ್ತಥಾ |
ಪಾಪಂ ತಾಪಂಚ ದೈನ್ಯಂಚ ಸದ್ಯಸ್ಸಾಧುಸಮಾಗಮಃ ||

ಗಂಗಾನದಿಯು ಪ್ರಾಣಿಮಾತ್ರರ ಪಾಪವನ್ನು ನಿವಾರಿಸುವದು; ಚಂದ್ರಮನು ತಾಪವೊಂದನ್ನು ಕಳೆಯುವನು. ಕಲ್ಪತರುವು ದಾರಿದ್ರ್ಯವನ್ನು ಹಿಂಗಿಸುವದು. ಆದರೆ ಈ ಮೂರನ್ನೂ ಸಾಧುಸಮಾಗಮವು ನಿವಾರಿಸುವದು. ಹ್ಯಾಗಂದರೆ ಪಾಪ, ತಾಪ, ದೈನ್ಯಗಳು ಅಜ್ಞಾನ ಜನಿತ ಫಲಗಳು. ಜ್ಞಾನೋದಯವಾ

ದರೆ ಅಜ್ಞಾನವು ಪಲಾಯನಸೂಕ್ತವನ್ನು ಹಿಡಿಸುವದು. ಅಜ್ಞಾನವೇ ನಿವೃತ್ತಿಯಾದ ಬಳಿಕ ಅದರಿಂದುಂಟಾಗುವ ಪಾಪ, ತಾಪ, ದೈನ್ಯಾದಿಗಳು ಇಲ್ಲದಂತಾಗುವದು ಸ್ವಾಭಾವಿಕವಾಗಿದೆ; ಈ ಜ್ಞಾನವು ಸಾಧು ಸಮಾಗಮದಿಂದ ಲಭಿಸತಕ್ಕದ್ದು.

ಪ್ರಿಯ ಪಾಠಕರೇ ತೀರ್ಥಯಾತ್ರೆಯ ವಿಷಯದಲ್ಲಿ ಸಾಧುಗಳ ಮಾಹಾತ್ಮ್ಯೆಯ ವರ್ಣನೆ ಯಾಕೆಂದು ಕದಾಚಿತ್ ನಿಮಗೆ ಶಂಕೆಯುಂಟಾಗಬಹುದು. ತೀರ್ಥಗಳ ಉತ್ಪತ್ತಿಗೆ ಸಾಧುಗಳೇ ಕಾರಣರು. ತೀರ್ಥಾದಿಗಳ ಮಹತ್ವವನ್ನು ತಿಳಿಸಲಿಕ್ಕೆ ಸಾಧುಗಳೇ ಬೇಕು. ಸಾಧು ದರುಶನದಿಂದ ತೀರ್ಥಗಳೂ ಪವಿತ್ರವಾಗುವವು. ಅಂದಬಳಿಕ ಸಾಧುಗಳು ಎಂಥ ತೀರ್ಥಸ್ವರೂಪರೆಂಬದನ್ನು ನೀವೇ ಊಹಿಸಿಕೊಳ್ಳಿರಿ. ಪ್ರಸ್ತುತ ಪ್ರಬಂಧದಲ್ಲಿ ತೀರ್ಥ ಸ್ವರೂಪರಾದ ಸಾಧುಗಳ ಮಹತ್ವವನ್ನು ಗ್ರಥನ ಮಾಡಬೇಕಾದ್ದರಿಂದಲೇ ಈ ವಿಷಯವನ್ನು ಕೈಕೊಳ್ಳ ಬೇಕಾಯಿತು. ಇರಲಿ.

ಈ ಮೇಲಿನ ವಿವರಣೆಯಿಂದ ಸಾಧು ದರ್ಶನವು ತೀರ್ಥಾಟನದಲ್ಲಿ ಮೊದಲನೇ ನಂಬರಿನ ಸ್ಥಾನವನ್ನೂ ಜಲಮಯ ತೀರ್ಥಗಳು, ೨ನೇ ನಂಬರಿನ ಸ್ಥಳವನ್ನೂ ಹೊಂದುವವೆಂಬದು ಸ್ಪಷ್ಟವಾಗುತ್ತದೆ. ಆದ್ದರಿಂದ ತೀರ್ಥಾಟನದಿಂದ ಧನ್ಯರಾಗಬೇಕೆಂದು ಬಯಸುವವರು ಮೊದಲು ಈ ಮಾತನ್ನು ವಿಚಾರಿಸತಕ್ಕದ್ದು; ಮನಸ್ಸಿನಲ್ಲಿ ಸಮಾಧಾನವಿಲ್ಲದೆ ಬರಿಯ ಯಾತ್ರೆ, ತೀರ್ಥಗಳಿಗೆ ಹೋದರೂ ಅದರಿಂದ ಫಲ ನಿಷ್ಪತ್ತಿಯಾಗುವದಿಲ್ಲ. ನಮ್ಮ ಹಿರಿಯರು ತೀರ್ಥ ಯಾತ್ರೆಗಳನ್ನು ಮಾಡಿದರು. ಅಲ್ಲಿ ಹೇರಳ ಹಣವನ್ನು ವೆಚ್ಚಮಾಡಿ ಅಕ್ಷಯ್ಯ ಕೀರ್ತಿಯನ್ನು ಪಡೆದರು. ಅದರಂತೆ ನಾವೂ ಮಾಡಿಯೇ ತೀರಬೇಕೆಂಬ ಹುರುಪು ಎಷ್ಟೋ ಜನರಿಗೆ ಬರುವದು; ಆದರೆ ಹಿರಿಯರ ಮನಸ್ಸಿನಂತೆ ಇವರಮನಸ್ಸು ಪರಿಪಕ್ವ ದಶೆಯನ್ನು ಹೊಂದಿರುವದಿಲ್ಲಾದ್ದರಿಂದ ಆ ಹುರುಪು ಬಹಳ ಹೊತ್ತಿನವರೆಗೆ ನಿಲ್ಲುವದಿಲ್ಲ. ಅದು ಆಕೂಡಲೆ ಸ್ಮೃತಿ ಪಥದಿಂದ ಚ್ಯುತಿಯನ್ನು ಹೊಂದಿ ಎಂದೂ ಗೋಚರಿಸದಷ್ಟು ದೂರ ಅಡಗಿಕೊಳ್ಳುವದು. ಹೀಗೆ ಮಾಡದೆ ತಮ್ಮ ಹಿರಿಯರ ಮಾರ್ಗಾನುಸರಣಮಾಡಿ ತೀರ್ಥ ಯಾತ್ರೆಗಳನ್ನು ಮಾಡಲಿಕ್ಕೆ ಅಧಿಕಾರ ಪಡೆಯುವದು ವಿಹಿತವು.

ತೀರ್ಥಯಾತ್ರೆಗಳನ್ನು ಮಾಡುವದಕ್ಕೆ ಬೇಕಾಗುವ ಪಾತ್ರತೆಯು ಮೂರು ಬಗೆಯದಾಗಿರುವದು. ಒಂದನೆಯದು ಮನಸ್ಸಿನ ಪಾತ್ರತೆಯು; ಇದು ಎಲ್ಲಕ್ಕೂ ಮುಖ್ಯವಾಗಿರುವದು. "ಇಂದ್ರಿಯಾಣಾಂ ಮನಶ್ಚಾಸ್ಮಿ" ಎಂದು ಭಗವಂತನೇ ಹೇಳಿರುವನಾದ್ದರಿಂದ ಮನಸ್ಸನ್ನು ಬಿಟ್ಟು ಯಾವ ಕೆಲಸವನ್ನು ಮಾಡಿದರೂ ಭಗವದಧಿಷ್ಠಾನವಿಲ್ಲದೆ ಕಾರ್ಯಮಾಡಿದ ಹಾಗಾಗುತ್ತದೆಂಬದು ಸ್ಪಷ್ಟವಾಗುತ್ತದೆ.

ಆದ್ದರಿಂದ ಯಾವ ಕಾರ್ಯಕ್ಕಾದರೂ ಮನಸ್ಸು ಮುಖ್ಯವಾಗಿರುವದು. ಆ ಮನಸ್ಸು ಪವಿತ್ರವೂ ಭಾವನಾಪ್ರಧಾನವೂ ಆಗಿದ್ದರೆ ತೀರ್ಥದರ್ಶನದಿಂದ-ಸ್ನಾನದಿಂದ ಸಮಾಧಾನವನ್ನು ಹೊಂದಿ ಅನಂತ ಫಲಗಳಿಗೆ ಭಾಗಿಯಾಗುವದು. ಆದರೆ ಅದೇ ಮನಸ್ಸು ಅಪವಿತ್ರವೂ ಭಾವನಾವಿರಹಿತವೂ ಆಗಿದ್ದರೆ ತೀರ್ಥದರ್ಶನ-ಸ್ನಾನಾದಿಗಳಿಂದ ಶಾಂತಿಯನ್ನು ಹೊಂದದೆ ಪುನಃ ಅಪವಿತ್ರ ವಿಚಾರಗಳಲ್ಲಿ ಮಗ್ನವಾಗುವದು. ಯಾವಾತನ ಮನಸ್ಸು ಪುನಃ ಪುನಃ ಅಪವಿತ್ರ ಕಾರ್ಯಗಳಲ್ಲಿ ಸೇರಿಕೊಳ್ಳುವದೋ ಮತ್ತು ಅಪವಿತ್ರ ಪದಾರ್ಥಗಳನ್ನು ಮುಟ್ಟಿ-ಮುಟ್ಟಿ ಬರುವದೋ ಅವನ ದೇಹವು ತೀರ್ಥಸ್ನಾನದಿಂದ ಹ್ಯಾಗೆ ಪವಿತ್ರವಾಯಿತೆಂದು ತಿಳಿಯಬೇಕು? ಮನೆಯ ಯಜಮಾನನು ಸ್ವಚ್ಛತೆಯ ಪ್ರಿಯನಿದ್ದರೆ ಮನೆಯ ನೈರ್ಮಲ್ಯವು ಸ್ವಾಭಾವಿಕವಾಗಿಯೇ ಉಳಿಯುವದು. ಅದರಂತೆ ದೇಹದ ಯಾಜಮಾನ್ಯವು ಮನಸ್ಸಿನ ಕಡೆಗೆ ಇರುವದರಿಂದ ಅದು ಪವಿತ್ರವಾಗಿದ್ದ ಹೊರತು ದೇಹದ ನೈರ್ಮಲ್ಯವು ಉಳಿಯುವದಿಲ್ಲ. ಇದೇ ತತ್ವದಿಂದಲೇ ಸ್ಪೃಶ್ಯಾ-ಸ್ಪೃಶ್ಯದ ವಿಚಾರವು ಬಳಿಕೆಯಲ್ಲಿ ಬಂದಿರುತ್ತದೆ ಇರಲಿ. ಇಷ್ಟು ಪ್ರಮುಖವಾಗಿರುವ ಮನಸ್ಸು ಪವಿತ್ರವಾಗಿದ್ದರೆ ಮನುಷ್ಯನಿಗೆ ತೀರ್ಥಾಟನ ಮಾಡಲಿಕ್ಕೆ ಒಂದು ಪ್ರಕಾರದ ಪಾತ್ರತೆಯುಂಟಾಗುವದು. ಇನ್ನು ಎರಡನೆಯದು ದೇಹದಾರ್ಢ್ಯವು. ಮನುಷ್ಯನ ಮನಸ್ಸು ಪವಿತ್ರವಿದ್ದರೂ ದೇಹದಾರ್ಢ್ಯವಿರದಿದ್ದರೆ ಅವನು ತೀರ್ಥಾಟನಕ್ಕೆ ಅಯೋಗ್ಯನು [illegible] ತೀರ್ಥೋತ್ಸವಗಳನ್ನು ವಿಷಯಗಳಿಗೆ ದತ್ತಮನಸ್ಕರಾದ ನಾವು ತೀರ್ಥಯಾತ್ರೆಗೆ ಹೊರಡುವದು ಡಾಂಭಿಕವಲ್ಲದೆ ಮತ್ತೇನು?

ಇದೂ ಅಲ್ಲದೆ ತೀರ್ಥ ಯಾತ್ರೆಗಳಿಗೆ ಹೋದಾಗ ವಿಷಯಲಂಪಟಿಗಳನೇಕರು ಅನೇಕ ಬಗೆಯ ಅನನ್ವಿತ ಕೃತ್ಯಗಳನ್ನು ಮಾಡುವರು. ಸ್ವ ಗ್ರಾಮದಲ್ಲಿ ಅವರು ನಿಂದ್ಯ ಕೆಲಸಗಳನ್ನು ಮಾಡಲು ಲೋಕಾಪವಾದಕ್ಕಾದರೂ ಅಂಜಿ ಹಿಂಜರಿಯಬಹುದು; ಆದರೆ ಗುರುತು ಪರಿಚಯವಿಲ್ಲದ ದೇಶಾಂತರಕ್ಕೆ ಹೋದಬಳಿಕ ಅವರು ನಿರ್ಭಯರಾಗುವರು. ಆಗ ನಿಂದ್ಯ ಕರ್ಮಗಳನ್ನು ಮನಸೋಕ್ತವಾಗಿ ಆಚರಿಸಿ ಊರಿಗೆ ಬಂದು ಸಂಭಾವಿತರ ಸೋಗಿನಿಂದ ಮೆರೆಯುವರು. ಇಂಥ ವಿಷಯಲಂಪಟಿಗಳಿಗೆ ತೀರ್ಥಯಾತ್ರೆಗಳು ಅನುಕೂಲವಾಗುವವು. ಅದಕ್ಕಾಗಿಯೇ ವಿಷಯಲಂಪಟಿಗಳು ತೀರ್ಥಾಟನಕ್ಕೆ ಬಾಹ್ಯರಿರುವರು. ಯಾಕೆಂದರೆ "ಅನ್ಯಕ್ಷೇತ್ರೇ ಕೃತಂ

ಯನ್ನು ಕಾಯ್ದುಕೊಳ್ಳತಕ್ಕದ್ದು.

ಇನ್ನು ತೀರ್ಥಾಟನಕ್ಕೆ ಬೇಕಾಗುವ ಮೂರನೆಯ ಪಾತ್ರತೆಯಲ್ಲಿ ಬಹಿಪ್ರಾಣವೆನಿಸುವ ದ್ರವ್ಯವು ಬರುವದು. ಇದು ಮೇಲಿನ ಎರಡು ಕಾರಣಗಳಷ್ಟು ಸಬಲವಿರದಿದ್ದರೂ ಕೇವಲ ತ್ಯಾಜ್ಯವೆಂದು ತಿಳಿಯಲಿಕ್ಕೆ ಬರುವದಿಲ್ಲ. ಯಾಕಂದರೆ ಭಿಕ್ಷಾಂದೇಹಿ ಎಂದು ಭಿಕ್ಷೆ ಬೇಡಲಿಕ್ಕೆ ಯಾರಿಗೆ ಅಧಿಕಾರವಿದೆಯೋ ಅವರು ಮಾತ್ರ ದ್ರವ್ಯಸಂಗ್ರಹ ಮಾಡಿಕೊಂಡೇ ತೀರ್ಥಾಟನ ಮಾಡಬೇಕೆಂದು ತಿಳಿಯುವದಿಲ್ಲ. ಅವರಿಗೆ ಎಲ್ಲಿ ಹೋದಲ್ಲಿ ಭಿಕ್ಷಾರೂಪೀ ಕಾಮಧೇನುವಿನಿಂದ ದ್ರವ್ಯವು ಸಿಕ್ಕೇ ಸಿಗುತ್ತದೆ. ಆದರೆ ಯಾರಿಗೆ ಭಿಕ್ಷೆಯ ಅಧಿಕಾರವಿಲ್ಲವೋ ಅವರು ದ್ರವ್ಯಸಂಚಯ ಮಾಡಿಕೊಂಡೇ ತೀರ್ಥಾಟನಕ್ಕೆ ಪಾತ್ರತೆಯನ್ನು ತಂದುಕೊಳ್ಳಬೇಕಾಗುತ್ತದೆ.

ಈ ಪ್ರಕಾರವಿರುವ ಈ ಮೂರೂ ಬಗೆಯ ಪಾತ್ರತೆಗಳು ಯಾವ ಮನುಷ್ಯನಿಗೆ ಲಭಿಸುವವೋ ಅವನು ಸಹಜವಾಗಿ ಧನ್ಯನೆನಿಸುತ್ತಾನೆ. ಅವನು ತೀರ್ಥಾಟನದಂಥ ಮಹತ್ತರವಾದ ಕೆಲಸವನ್ನು ಲೀಲೆಯಿಂದ ನೆರವೇರಿಸಿ ಜಗತ್ತಿಗೆ ಆದರ್ಶಪ್ರಾಯನಾಗುತ್ತಾನೆ.

ತೀರ್ಥ ಯಾತ್ರೆಗಳ ಮುಖ್ಯ ಉದ್ದೇಶವೇ ಈಗ ನಾಮಶೇಷವಾದ್ದರಿಂದ ಅದೊಂದು ಐಷಆರಾಮಿಯ ಕೆಲಸವಾಗಿ ಕುಳಿತಿರುವದು. ಜನರ ತಪ್ಪು ತಿಳವಳಿಕೆಯು ಆಚರಣೆಯನ್ನು [illegible] ತೀರ್ಥಾಟನೆಗೆ ಉಚ್ಚಾಟವೆ ಬರು

ಕರವಲ್ಲವೇ? ನಮ್ಮಲ್ಲಿ ಪ್ರಬಲವಾಗುತ್ತಿರುವ ದುರ್ಗುಣಗಳನ್ನು ಕಂಡು "ಯಾಕೆ ಯಾತ್ರೆಯ ಮಾಡುತಿರ್ಪರಲ್ಲೇನಿಹುದು" ಎಂದು ತೀರ್ಥ ಯಾತ್ರೆಗಳನ್ನು ಅಲ್ಲಗಳೆಯುವ ಪ್ರಸಂಗವು ಸರ್ಪಭೂಷಣ ಕವಿಗಳಂಥವರ ಪಾಲಿಗೆ ಬಂದಿರುವದು. ನಿಜವಾಗಿ ನೋಡಿದರೆ ಇದು ತೀರ್ಥಗಳ ದೂಷಣೆಯಲ್ಲ ನಮ್ಮಗಳ ದೂಷಣೆಯು; ನಮ್ಮಲ್ಲಿ ತೀರ್ಥಾಟನಕ್ಕೆ ಅಧಿಕಾರವಿಲ್ಲದ್ದರಿಂದಲೇ ಸಜ್ಜನರು ನಮ್ಮ ಮುಂದೆ ಈ ರೀತಿ ತೀರ್ಥಗಳನ್ನು ಜರೆದಿರುವರು. ತೀರ್ಥಗಳು ಹಿಂದೆ ಹ್ಯಾಗೆ ಇದ್ದವೋ ಈಗಲೂ ಹಾಗೆಯೇ ಇವೆ. ಮುಂದೆಯೂ ಇರುತ್ತವೆ. ಆದರೆ ನಾವು ಮಾತ್ರ ನಮ್ಮ ಪೂರ್ವಜರಂತೆ ಇರುವದಿಲ್ಲ; ಡಾಂಭಿಕ ಪ್ರಿಯರಾಗಿ ಯಾವ ಕೆಲಸ ಮಾಡಿದರೂ ಜನರ ಹೊಗಳಿಕೆಗಾಗಿ ಮಾಡುವೆವು. ಜನರು ನಮಗೆ ದೊಡ್ಡವರೆನ್ನಲಿ, ಕಾಶೀ ರಾಮೇಶ್ವರಾದಿ ಮಹಾ ಯಾತ್ರೆಗಳನ್ನು ಮಾಡಿದ ಪುಣ್ಯಪುರುಷನೀತನೆಂದು ಕೊಂಡಾಡಲಿ, ಎಂದು ನಾವು ಬಯಸಿ ತೋರಿಕೆಗಾಗಿ ಯಾತ್ರೆಗೆ ಹೊರಡುವೆವು. ಯಾತ್ರೆಗೆ ಹೋದಾಗ ನಮ್ಮ ಮನಸ್ಸು ಅಲ್ಲಿಯ ತೀರ್ಥಸ್ನಾನದಲ್ಲಿ-ದೇವತಾದರ್ಶನದಲ್ಲಿ,-ಪವಿತ್ರ ಸ್ಥಳಗಳ ದರ್ಶನದಲ್ಲಿ ಮಗ್ನವಾಗುವದಿಲ್ಲ. ಮನೆಯೊಳಗಿನ ಎಮ್ಮೆಗೆ ಮುಸುರಿ ನೀರು ಕುಡಿಸಿದರೋ ಇಲ್ಲವೋ, ರಾತ್ರಿಯಲ್ಲಿ ಬಾಗಿಲಕ್ಕೆ ಚಿಲಕ ಹಾಕಿದರೋ ಇಲ್ಲವೋ. ಇಂಥವರ ಮೇಲೆ ಮಾಡಿದ ಖೊಟ್ಟಿ ಪ್ರಾಮಿಸರಿ ನೋಟಿನ ದಾವೆಯು ನಮಗನುಕೂಲವಾಗಿ ತೀರ್ಮಾನವಾಯಿತೋ ಇಲ್ಲವೋ ಎಂಬ ನನ್ನು ವಿಚಾರಿಸುತ್ತಿರುತ್ತದೆ. ಹಾಯ್! ಹಾಯ್! ದುರ್ಗುಣಗಳಿಗೆ ಹಾಗು

ಪಾಪಂ, ಪುಣ್ಯ ಕ್ಷೇತ್ರೇ ವಿನಸ್ಯತಿ | ಪುಣ್ಯ ಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ ||ಎಂದು ಸುಭಾಷಿತಕಾರರು ಅಂದಂತೆ ಪುಣ್ಯ ಕ್ಷೇತ್ರಗಳಲ್ಲಿ ಆಚರಿಸಿದ ಪಾಪವು ವಜ್ರ ಲೇಪವಾಗಿ ಪರಿಣಮಿಸುವದು. ಡಾಂಭಿಕರೂ, ವಿಷಯಲಂಪಟಿಗಳೂ ಯಾತ್ರಾರ್ಥವಾಗಿ ಹೊರಟರೆ ಅವರಿಗೆ ಪುಣ್ಯದ ಬದಲು ಪಾಪವೇ ಪದರಿನಲ್ಲಿ ಬೀಳುತ್ತ ಹೋಗುವದೆಂದು ತಿಳಿಯಬೇಕು.

ಈ ಮೇರೆಗೆ ವಿಷಯ ಲಂಪಟಿಗಳಿಗೆ ತೀರ್ಥಾಟನದಿಂದ ಪುಣ್ಯ ಬರುವದರ ಬದಲು ಪಾಪ ಸಂಗ್ರಹವಾಗಹತ್ತಲು ಅವರು ಮತ್ತಿಷ್ಟು ರಸಾತಳಕ್ಕೆ ಇಳಿಯುವರೆಂದು ಜ್ಞಾನಿಗಳು "ಸ್ನಾನವ ಮಾಡಿರೋ ಜ್ಞಾನ ತೀರ್ಥದಲಿ" ಎಂದು ಉಪದೇಶ ಮಾಡಿರುವರು. ಜ್ಞಾನಿಗಳು ಹೀಗೇಕೆ ಉಪದೇಶ ಮಾಡಿರಬಹುದು ? ಎಂಬದನ್ನು ವಿಚಾರಿಸದೆ "ಗತಾನು ಗತಿಕೋ ಲೋಕಃ | ನ ಲೋಕಃ ಪಾರಮಾರ್ಥಿಕಃ||" ಎಂಬಂತೆ ತಮ್ಮ ಯೋಗ್ಯತೆಯನ್ನು ನೋಡಿಕೊಳ್ಳದೆ ಒಬ್ಬರನ್ನು ಕಂಡು ಮತ್ತೊಬ್ಬರು ತೀರ್ಥಾಟನಕ್ಕೆಂದು ಹೊರಡುವದು ಅಸಮಂಜಸವಾಗುವದು.

ಒಂದು ವೇಳೆ ಇಲ್ಲಿ ವಾಚಕರಿಗೆ ಹೀಗೆ ಸಂಶಯ ಉತ್ಪನ್ನವಾಗುವ ಸಂಭವವಿರುವದು. ಏನೆಂದರೆ—"ಪುಣ್ಯ ಸಂಪಾದನೆಗಾಗಿಯೇ ಅರ್ಥಾತ್ ಪವಿತ್ರತೆಯನ್ನು ಸಂಪಾದಿಸುವದಕ್ಕಾಗಿಯೇ ಜನರು ತೀರ್ಥಾಟನ ಮಾಡುತ್ತಿರಲು, ಅವರಲ್ಲಿ ಪವಿತ್ರ ಭಾವನೆಯಿಲ್ಲದೆ ಮಾಡುವ ತೀರ್ಥಾಟನವು ಅಸಮಂಜಸವೆಂದು ಅನ್ನುವದು ನ್ಯಾಯವಾಗದು." ಇದಕ್ಕೆ ಸಮಾಧಾನವೇನಂದರೆ ತೀರ್ಥಾಟನೆಯಿಂದ ಪುಣ್ಯ ಬರುತ್ತದೆಂಬ ದೃಢಭಾವನೆಯೇ ಮೊದಲು ಬೇಕು. ಈ ಭಾವನೆಯೊಂದಿದ್ದರೆ ಪುಣ್ಯವು ಹ್ಯಾಗಾದರೆ ಬರುತ್ತದೆಂಬ ವಿಚಾರವನ್ನು ಅವರು ಮಾಡಬೇಕಾಗುತ್ತದೆ. ವಿಚಾರ ಮಾಡಲಿಕ್ಕೆ ಹತ್ತಿದಬಳಿಕ ಪುಣ್ಯಕ್ಕೆ ಭಂಗಬರುವ ಕಾರ್ಯಗಳ ವಿಷಯದಲ್ಲಿ ಅವರು ಬಹು ಎಚ್ಚರದಿಂದ ನಡೆಯಬೇಕಾಗುತ್ತದೆ. ಇದೇ ತೀರ್ಥಾಟನೆಯ ತಳಹದಿಯು; ಅಸ್ತಿವಾರವಿಲ್ಲದಿದ್ದರೆ ಇಮಾರತು ಹ್ಯಾಗೆ ನಿಲ್ಲಲಾರದೋ ಹಾಗೆ ಈ ತಳಹದಿಯಿಲ್ಲದಿದ್ದರೆ ತೀರ್ಥಾಟನೆಯ ವಿಷಯವು ಫಲದಾಯಕವಾಗದು.

ಈ ಎಲ್ಲ ಸಂಗತಿಗಳನ್ನು ಕುರಿತು ಸಾಂಗೋಪಾಂಗವಾಗಿ ವಿವೇಚಿಸುವದೇ "ತೀರ್ಥ-ಯಾತ್ರೆಗಳ"ೆಂಬ ಈ ಪ್ರಬಂಧದ ಉದ್ದೇಶವಾಗಿದೆ. ತೀರ್ಥಗಳ

ಉತ್ಪತ್ತಿ, ಪ್ರಾಚೀನ ತೀರ್ಥಾಟನೆಯ ಕ್ರಮ, ಅರ್ವಾಚೀನಕಾಲದಲ್ಲಾದ ರೂಪಾಂತರ, ತೀರ್ಥಾಟನೆಯ ಉದ್ದೇಶ ಮೊದಲಾದ ವಿಷಯಗಳು ಇದರಲ್ಲಿ ವಿವೇಚಿಸಲ್ಪಡುವವು. ಆಧುನಿಕ ಕಾಲದಲ್ಲಿ ಎಲ್ಲ ಧಾರ್ಮಿಕ ಕೆಲಸಗಳಿಗೆ ಒಂದು ಬಗೆಯ ವೈಲಕ್ಷಣ್ಯವುಂಟಾದಂತೆ ತೀರ್ಥಯಾತ್ರೆಗಳ ವಿಷಯವೂ ವಿಲಕ್ಷಣ ಸ್ವರೂಪವನ್ನು ಹೊಂದಿರುತ್ತದೆ. ಕಾಲಮಾನಕ್ಕನುಸರಿಸಿ ಆದ ಈ ವ್ಯತ್ಯಾಸವು ಅಪರಿಹಾರ್ಯವಿದ್ದರೂ ಅದರಿಂದಾಗುವ ಲಾಭವನ್ನಾಗಲಿ, ಹಾನಿಯನ್ನಾಗಲಿ ಸ್ವೀಕರಿಸುವದು ನಮ್ಮ ಕಡೆಗಿರುತ್ತದೆ ನಾವು ವಿಚಾರಶೀಲರಾದರೆ ಲಾಭದಲ್ಲಿ ಬೀಳುವೆವು; ಅವಿಚಾರಿಗಳಾದರೆ ಘೋರವಾದ ನಂಕಕ್ಕೆ ಗುರಿಯಾಗುವೆವು.

ಒಟ್ಟಿಗೆ ತೀರ್ಥಾಟನವು ಮನುಷ್ಯನ ಆಯುಷ್ಯದಲ್ಲಿ ಒಂದು ಮಹತ್ವದ ಬಾಬು ಇದ್ದು, ಅದನ್ನು ಯಾವ ಯಾವ ಹೇತುಗಳಿಂದ ಸಾಧಿಸಿಕೊಳ್ಳಬೇಕೆಂಬದು ಯೋಚಿಸತಕ್ಕ ಮಾತಾಗಿರುವದು. ವಿಷಯ ಬುದ್ಧಿಯುಳ್ಳ ನಾವು ತೀರ್ಥಾಟನಕ್ಕೆ ಅಯೋಗ್ಯರಾಗಿ ಹ್ಯಾಗೆ ಆತ್ಮಘಾತ ಮಾಡಿಕೊಳ್ಳುತ್ತಿರುವೆವೆಂಬದನ್ನು ಮುಂದೆ ಕ್ರಮವಾಗಿ ವಿವರಿಸಲಾಗುವದು.

## ಲೇಖಾಂಕ. ೨

## ತೀರ್ಥೋತ್ಪತ್ತಿಯ ಸಾಮಾನ್ಯ ವಿಚಾರ.

"ತೀರ್ಥ" ವೆಂಬ ಶಬ್ದವು ಉದ್ಧಾರ ಮಾಡತಕ್ಕ ಶಕ್ತಿಯುಳ್ಳದ್ದೆಂಬ ವಿಶಿಷ್ಟಾರ್ಥದಿಂದ ಗ್ರಥಿತವಾದದ್ದಿರುತ್ತದೆ. ಆದ್ದರಿಂದ ಈ ಶಬ್ದ ಶ್ರವಣಮಾತ್ರದಿಂದ ಮನುಷ್ಯನಲ್ಲಿ ಪವಿತ್ರಭಾವನೆಯುಂಟಾಗುವದು ಸ್ವಾಭಾವಿಕವಾಗಿದೆ. ಮತ್ತು ಇದರಂತೆ ತೀರ್ಥವೆಂದಕೂಡಲೆ ಅದು ಯಾವದೊಂದು ಪವಿತ್ರ ನದಿ—ಸರೋವರ ಕುಂಡಗಳಲ್ಲಿಯ ನೀರಾಗಲಿ, ಸಾಲಿಗ್ರಾಮಾದಿ ದೇವಪ್ರತಿಮೆಗಳನ್ನು ಪೂಜಿಸಿದ ನೀರಾಗಲಿ ಅಥವಾ ಸಾಧುಗಳ ಚರಣ ಪ್ರಕ್ಷಾಲನ ಮಾಡಿದ ನೀರಾಗಲಿ ಇರಬಹುದೆಂದು ತಿಳುವಳಿಕೆಯುಂಟಾಗುವದಾದರೂ ಸಹಜವೇ ಸರಿ; ಇದರಿಂದ ಸಿದ್ಧವಾಗುವದೇನಂದರೆ—ಪವಿತ್ರ ಯೋಗವುಳ್ಳ ಜಲವೇ ತೀರ್ಥವೆಂದು ಸಂಬೋಧಿಸಲ್ಪಡುತ್ತದೆ ಒಟ್ಟಿಗೆ ದೇವತಾಸಾನ್ನಿಧ್ಯದಿಂದಾಗಲಿ ಸಜ್ಜನರ ಸಾನ್ನಿಧ್ಯದಿಂದಾಗಲಿ ಯಾವ ಜಲಾಶಯವು ಅಥವಾ ಜಲವು ಪವಿತ್ರವಾಗಿರುವದೋ ಅದೇ ತೀರ್ಥವೆಂದು ತಿಳಿಯಲ್ಪಡುವದು

ಪವಿತ್ರ ನದಿ ಅಥವಾ ಸರೋವರ ಕುಂಡಗಳೆಂದು ಯಾವವು ಪುರಾತನ ಕಾಲದಿಂದ ಪ್ರಸಿದ್ಧಿಯನ್ನು ಪಡೆದಿರುವವೋ ಅವುಗಳಲ್ಲಿ ಸ್ನಾನ ಮಾಡುವದಕ್ಕೋಸ್ಕರ ಜನಸಮುದಾಯವು ತವಕಿಸುತ್ತಿರುವದು ಸ್ವಾಭಾವಿಕವಾಗಿದೆ. ಯಾಕಂದರೆ ಅವುಗಳಲ್ಲಿ ಪವಿತ್ರತೆಯ ಯೋಗವಿರುವದೆಂಬ ಭಾವನೆಯು ಎಲ್ಲಿಯ ವರಗೆ ನಮ್ಮಲ್ಲಿ ಸ್ಥಿರವಿರುವದೋ ಅಲ್ಲಿಯ ವರೆಗೆ ನಮಗೆ ಅವುಗಳ ದರ್ಶನದ ವಿಷಯವಾಗಿ ಆದರವುಂಟಾಗುವದರಲ್ಲಿ ಆಶ್ಚರ್ಯವಿಲ್ಲ. ಇತ್ತೀಚೆಗೆ ನಾಸ್ತಿಕ್ಯವಾದವು ಬೆಳೆಯ ಹತ್ತಿ ತೀರ್ಥಗಳಲ್ಲಿ ಏನು ಮಹತ್ವವಿದೆ? ಅವುಗಳಿಗೆ ಹೋಗುವ ಕಾರಣವೇನು? ಎಂಬ ಕುತರ್ಕಗಳು ಸುಧಾರಿಸಿದ ತರುಣರ ಮನಸ್ಸಿನಲ್ಲಿ ಬರಹತ್ತಿವೆ. ಇಂಥ ಸುಧಾರಕ ತರುಣರು ಕೇವಲ ಪಾಶ್ಚಾತ್ಯ ಶಿಕ್ಷಣದಿಂದ ಪಕ್ಷಾಂಧರಾದವರೆಂದೇ ತಿಳಿಯಬೇಕಲ್ಲದೆ ಇದಕ್ಕೂ ಹೆಚ್ಚಿನ ಮಹತ್ವವನ್ನು ಅವರಿಗೆ ಕೊಡಕೂಡದು. ಪರರ ಸಂಸ್ಕೃ

ತಿಯಿಂದ ಮೆರೆಯುವವನಿಗೆ ಸ್ವಸಂಸ್ಕೃತಿಯಂತೂ ಸಂಪೂರ್ಣ ಲೋಪವಾಗಿರುತ್ತದೆ. ಪರಸಂಸ್ಕೃತಿಯು ಕಾಲಿಗೆಡುವಷ್ಟಿಗೆ ಉಂಟಾಗಿರುತ್ತದೆ. ಒಂದು ವೇಳೆ ಅವನಿಗೆ ಅದರಲ್ಲಿ ಸಾಕಷ್ಟು ಪರಿಜ್ಞಾನವುಂಟಾಗಿದ್ದರೂ ಅದು ನಿಷ್ಫಲವೇ ಸರಿ. ಇರಲಿ. ತೀರ್ಥಗಳೆಂದೆನಿಸಿಕೊಂಡ ಜಲಾಶಯಗಳು ನಿಜವಾಗಿಯೂ ಪವಿತ್ರವಾಗಿರುತ್ತವೆ. ಈ ವಿಷಯದ ಸ್ಪಷ್ಟೀಕರಣವನ್ನು ಹಲವು ಬಗೆಯಿಂದ ಮಾಡಬಹುದಾಗಿದೆ.

ತೀರ್ಥಗಳಲ್ಲಿ ಸ್ನಾನ ಮಾಡಿದರೆ ಪುಣ್ಯಬರುವದೆಂಬ ಮಾತು ಸತ್ಯವಿದ್ದರೂ ಅದು ಕಣ್ಣಿಗೆ ಕಾಣದ ಮಾತಾದ್ದರಿಂದ ಅದನ್ನು ಸ್ವಲ್ಪ ತಡೆದು ಯೋಚಿಸೋಣ; ಆದರೆ ಈ ಅಪ್ರತ್ಯಕ್ಷ ಮಾತನ್ನು ಬಿಟ್ಟರೂ ಎಷ್ಟೋ ತೀರ್ಥಗಳ ಮಹತ್ವವು ಪ್ರತ್ಯಕ್ಷ ಅನುಭವಕ್ಕೆ ಬರುತ್ತದೆಂದಬಳಿಕ ಅದನ್ನು ನಂಬಲೇ ಬೇಕಾಗುತ್ತದೆ. ಕೆಲವು ತೀರ್ಥಗಳಲ್ಲಿ ಸ್ನಾನ ಮಾಡಿದರೆ ಅಸಾಧ್ಯ ಬೇನೆಗಳು ಹೋಗುವವು; ಕೆಲವು ತೀರ್ಥಗಳ ಸ್ನಾನದಿಂದ ಛಳಿಜ್ವರಗಳು ವಾಸಿಯಾಗುವವು; ಭಾಗೀರಥಿಯ ನೀರನ್ನು ಎಷ್ಟು ದಿವಸಗಳ ವರೆಗೆ ಇಟ್ಟರೂ ಅದು ವಿಕಾರಹೊಂದುವದಿಲ್ಲ. ಕ್ರಿಮಿಗಳಿಗೆ ಆಸ್ಪದ ಕೊಡುವದಿಲ್ಲ. ಇವೆಲ್ಲ ಪ್ರತ್ಯಕ್ಷ ಪ್ರಮಾಣಗಳನ್ನು ನೋಡಿದರೆ ನಮ್ಮ ಪೂರ್ವಜರು ಯಾವದೊಂದು ಜಲಾಶಯಕ್ಕೆ ಮಹತ್ವ ಕೊಡಬೇಕಾದರೆ ಆ ಜಲಾಶಯದ ಗುಣಧರ್ಮಗಳನ್ನು ತಿಳಿಯದೆ ಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಭೂಮಿಯ ಗುಣಧರ್ಮ, ಖನಿಜದ್ರವ್ಯಗಳ ಸತ್ವ, ಅವು ನೀರಿನಲ್ಲಿ ಬೆರೆತುಕೊಂಡ ಪ್ರಮಾಣ ಇವುಗಳನ್ನು ನೋಡಿ ನಮ್ಮ ಪ್ರಾಚೀನ ಋಷಿಗಳು ಅಲ್ಲಿ ವಾಸಮಾಡಿ ಸೃಷ್ಟಿನಿಯಮದಿಂದ ಆರೋಗ್ಯಕರವಿರುವ ಆ ಜಲಾಶಯಗಳನ್ನು ತಮ್ಮ ತಪಃಪ್ರಭಾವದಿಂದ ಪವಿತ್ರಗಳನ್ನಾಗ ಮಾಡಿದರು!

ಹೀಗೆ ತೀರ್ಥಗಳು ದೇಹಾರೋಗ್ಯಕ್ಕೆ ತಕ್ಕ ಖನಿಜ ದ್ರವ್ಯಗಳನ್ನು ಒಳಕೊಂಡಿರುವದಲ್ಲದೆ ಮನಸ್ಸಿನ ನೈರ್ಮಲ್ಯಕ್ಕೆ ಬೇಕಾಗುವ ಪವಿತ್ರತೆಯನ್ನೂ ಹೊಂದಿರುವದರಿಂದ ಅವುಗಳ ಉತ್ಪತ್ತಿಯು ಎಷ್ಟು ಲೋಕಕಲ್ಯಾಣಕರವಿರುತ್ತದೆಂಬದನ್ನು ಬಣ್ಣಿಸುವ ಕಾರಣವಿಲ್ಲ. ನಮ್ಮ ಭಂತಖಂಡದಲ್ಲಿ ಅನಾದಿಕಾಲದಿಂದಲೂ ತೀರ್ಥಗಳು ಉದಯ ಹೊಂದುತ್ತ ಬಂದಿವೆ. ಪುರಾಣಕಾಲದಲ್ಲಿ ಹೇರಳ ತೀರ್ಥಗಳು ಉತ್ಪನ್ನವಾದಂತೆ ಅರ್ವಾಚೀನ ಕಾಲದಲ್ಲೂ ಅಸಂಖ್ಯ ತೀರ್ಥಗಳು ಹುಟ್ಟಿವೆ. ಅವತಾರಿಕರು, ಸತ್ಪುರುಷರು ಇವರೇ ಮೊದಲಾದವರು ತಮ್ಮ ಪ್ರಭಾವದಿಂದ ತೀರ್ಥಗಳನ್ನು ಉಂಟುಮಾಡಿರುತ್ತಾರೆ. ಈ ತೀರ್ಥಗಳ ಉಲ್ಲೇಖವು ಪುರಾಣ

ಗಳಲ್ಲಿಂದಿದ್ದರೂ ಪುರಾಣಕಾಲದ ತೀರ್ಥಗಳಷ್ಟೇ ಮಹತ್ವ ಉಳ್ಳವುಗಳಿರುತ್ತವೆ. ಆದರೂ ಪುರಾಣ ಪ್ರಸಿದ್ಧ ತೀರ್ಥಗಳಿಗೆ ಹೋಗುವಷ್ಟು ಜನ ಸಮುದಾಯವು ಅರ್ವಾಚೀನ ತೀರ್ಥಗಳಿಗೆ ಹೋಗುವದಿಲ್ಲ. ಇದಕ್ಕೆ ಆ ತೀರ್ಥಗಳ ವಿಷಯವಾಗಿ ಜನತೆಯ ಅಜ್ಞಾನವೇ ಕಾರಣವಲ್ಲದೆ ಬೇರಿಲ್ಲವೆಂದು ಹೇಳಬಹುದು.

ಪ್ರಾಚೀನಕಾಲದ ತೀರ್ಥಗಳು ಅನಾದಿಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿರುವವು. ಹಲವು ಪುರಾಣಗಳಲ್ಲಿ ಅವುಗಳ ವರ್ಣನೆಯಿರುವದು. ಕೆಲಕೆಲವು ಪುರಾಣಗಳಲ್ಲಿ ಇಂಥ ಇಂಥ ಮಾಸಗಳಲ್ಲಿ ಇಂಥ ಇಂಥ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಇಂಥ ಫಲವು ಪ್ರಾಪ್ತವಾಗುವದೆಂದು ಸಹ ಉಲ್ಲೇಖವಿರುವದು.* ಆದ್ದರಿಂದ ಪುರಾಣೋಕ್ತ ಪ್ರಸಿದ್ಧ ತೀರ್ಥಗಳ ಪರಿಚಯವು ಜನತೆಗೆ ಬಹು ಬೇಗ ಆಗುವದು. ಅರ್ವಾಚೀನ ತೀರ್ಥಗಳ ಪರಿಚಯಕ್ಕೆ ಇಷ್ಟು ಸುಲಭ ಸೌಲಭ್ಯವಿರದ್ದರಿಂದ ಅವುಗಳ ವಿಷಯವಾಗಿ ಅಜ್ಞಾನ ಉಳಿಯುವದು ಸ್ವಾಭಾವಿಕವಾಗಿದೆ. ಯಾವದೊಂದು ಪ್ರಸಿದ್ಧ ತೀರ್ಥದ ನೆರೆಯಲ್ಲಿ ಅಸಂಖ್ಯ ಉಪತೀರ್ಥಗಳಿರುವವು; ಆ ಉಪತೀರ್ಥಗಳಾದರೂ ಮಹಾತ್ಮರ ಸಾನ್ನಿಧ್ಯದಿಂದ ಪವಿತ್ರತೆಯನ್ನು ಪಡೆದಿರುತ್ತವೆ. ಆ ಉಪತೀರ್ಥಗಳ ಉಲ್ಲೇಖವು ಪುರಾಣಗಳಲ್ಲಿ ಇರದಿದ್ದರೂ ಅವುಗಳ ದರ್ಶನವು ಯಾತ್ರಿಕರಿಗೆ ಅನಾಯಾಸವಾಗಿ ಲಭಿಸುತ್ತದೆ. ಇರಲಿ.

ಬಹುತರವಾಗಿ ನಮ್ಮ ಪುರಾಣಗಳಲ್ಲಿ ತೀರ್ಥೋತ್ಪತ್ತಿಯ ವಿಷಯವಾಗಿ ಬಹು ವಿಸ್ತೃತ ಕಥಾನಕಗಳೇ ಇರುತ್ತವೆ. ಇಂಥದೊಂದು ತೀರ್ಥವು ಹೀಗೆ ಹುಟ್ಟಿತೆಂದು ಹೇಳಬೇಕಾದರೆ, ಇಂಥದೊಂದು ವ್ಯಕ್ತಿಯು ಹೀಗೆ ತಪಶ್ಚರ್ಯ ಮಾಡಿತು. ಆ ವ್ಯಕ್ತಿಗೆ ಆರಾಧ್ಯದೇವತೆಯಿಂದ ಹೀಗೆ ವರಪ್ರದಾನವಾಯಿತು. ಇತ್ಯಾದಿ ಸಮಸ್ತ ವಿಷಯಗಳೂ ಬಂದು ಹೋಗುವವು ಈ ಸಂಗತಿಗಳನ್ನು ಸೂಕ್ಷ್ಮವಾಗಿ ವಿಚಾರಿಸಿದರೆ ವ್ಯಕ್ತಿಯ ತಪಸ್ಸಾಗಲಿ, ಬಹುಜನರ ತಪಸ್ಸಾಗಲಿ ಪವಿತ್ರ ತೀರ್ಥೋತ್ಪತ್ತಿಗೆ ಕಾರಣಗಳಿರುತ್ತವೆಂದು ಕಂಡು ಬರುತ್ತದೆ. ಉದಾಹರಣಾರ್ಥವಾಗಿ ಭರತಖಂಡದಲ್ಲಿ ಪವಿತ್ರ ನದಿಯೆನಿಸಿದ ಯಮುನಾ ನದಿಯ ಉತ್ಪ

---

* ಜ್ಯೇಷ್ಠಮಾಸೆ ಸಿತೆಪಕ್ಷೆ ದಶಮೀ ಬುಧ ಹಸ್ತಯೋಃ॥ ಗರಾನಂದೇ ವ್ಯತೀಪಾತೇ ಕನ್ಯಾ ಚಂದ್ರೆ ವೃಷೇರವೌ॥ ದಶಯೋಗೆ ನರಸ್ನಾತ್ವಾ ಸರ್ವಪಾಪೈಃ ಪ್ರಮುಚ್ಯತೆ ॥

೨ ಕುಂಭರಾಶಿ ಗತೆಜೀವೆ ಯದಿ ನೆ ಮೇಷಗೇರವೌ ॥ ಹರಿದ್ವಾರೆ ಕೃತಂಸ್ನಾನಂ ಪುನರಾವೃತ್ತಿ ವರ್ಜನಂ ॥

(ಪ್ರಯಾಗ ಮಾಹಾತ್ಮ್ಯ)

ತ್ತಿಯು ವಿಷಯವನ್ನು ತಕ್ಕೊಳ್ಳೋಣ; ಈ ವಿಷಯದಲ್ಲಿ ಪುರಾಣದಲ್ಲಿರತಕ್ಕ ವರ್ಣನೆಯೇನಂದರೆ—"ಪೂರ್ವದಲ್ಲಿ ಸೂರ್ಯನ ಹೆಂಡತಿಯಾದ ಸಂಜ್ಞಾದೇವಿಯು ಪುತ್ರಾಪೇಕ್ಷೆಯಿಂದ ಬ್ರಹ್ಮದೇವನನ್ನು ಕುರಿತು ತಪಸ್ಸನ್ನೆಸಗಿದಳು. ಆಕೆಯ ಕಠಿಣವಾದ ತಪಸ್ಸಿಗೆ ಮೆಚ್ಚಿದವನಾದ ಬ್ರಹ್ಮದೇವನು ಪ್ರಸನ್ನನಾಗಿ ಆಕೆಯನ್ನು ಕುರಿತು ವರವನ್ನು ಬೇಡಿಕೋ ಎಂದು ನುಡಿದನು. ಸಂಜ್ಞಾದೇವಿಯು ಸಂತೋಷಪಟ್ಟು, ಅಷ್ಟಾಂಗ ಲಕ್ಷಣಯುಕ್ತ ಧರ್ಮವನ್ನು ಶಾಶ್ವತವಾಗಿ ಆಚರಿಸುವ ಮಗನನ್ನು ತನಗೆ ದಯಪಾಲಿಸಬೇಕೆಂದು ಬೇಡಿಕೊಂಡಳು. ಆಕೆಯ ಈ ಬೇಡಿಕೆಗೆ ಬ್ರಹ್ಮದೇವನು ತಥಾಸ್ತು ಎಂದು ನುಡಿದು ಹೊರಟು ಹೋದನು. ಬಳಿಕ ಸಂಜ್ಞೆಯು ಬ್ರಹ್ಮದೇವನ ವರಪ್ರದಾನದಂತೆ ಗರ್ಭವನ್ನು ತಾಳಿದಳು. ಆಕೆಯ ಪುಣ್ಯಶಾಲಿಯಾದ ಆ ಗರ್ಭವು ದಿನೇ ದಿನೇ ಅಭಿವೃದ್ಧವಾಗತೊಡಗಿತು. ಹೀಗಿರಲು ಒಂದು ದಿವಸ ಸೂರ್ಯನು ಹೆಂಡತಿಯ ಸಮೀಪಕ್ಕೆ ಬಂದು ನೋಡುವಷ್ಟರಲ್ಲಿ ಆಕೆಯು ಗರ್ಭವತಿಯಾಗಿದ್ದು, ಕಠಿಣ ತಪಸ್ಸಿನಿಂದ ಕೃಶಳಾಗಿರುವಳೆಂದು ಕಂಡುಬಂದಿತು. ಕೂಡಲೆ ಸೂರ್ಯನು ಹೆಂಡತಿಯನ್ನು ಕುರಿತು ಕಡುಕೋಪದಿಂದ ನುಡಿದನೇನಂದರೆ—"ಗರ್ಭಿಣಿಯಿರುವ ನೀನು ಹೀಗೆ ಕಠಿಣ ತಪಸ್ಸನ್ನಾಚರಿಸುವದು ಅನುಚಿತವು; ಈ ಗರ್ಭವನ್ನು ಈಗಿಂದೀಗಲೇ ತ್ಯಜಿಸತಕ್ಕದ್ದು."

ಈ ಪ್ರಕಾರ ಪತಿಯು ಆಜ್ಞಾಪಿಸಲು ಸಂಜ್ಞಾದೇವಿಯು ಕೂಡಲೆ ಗರ್ಭವನ್ನು ತ್ಯಜಿಸಿದಳು. ಆಗ ಆ ಗರ್ಭದಲ್ಲಿ ಒಂದು ಘನರೂಪ ಒಂದು ದ್ರವರೂಪಗಳಿಂದ ಎರಡು ಭಾಗಗಳಾದವು. ಘನರೂಪದ ಭಾಗದಿಂದ ಧರ್ಮರಾಜನು (ಯಮಧರ್ಮನು) ಉತ್ಪನ್ನನಾದನು. ದ್ರವರೂಪ ಭಾಗವು ಯಮುನೆಯೆಂಬ ಹೆಣ್ಣು ಶಿಶುವಿನ ರೂಪವ ತಾಳಿ ಪ್ರವಹಿಸಲಿಕ್ಕೆ ಪ್ರಾರಂಭಿಸಿತು."

ಈ ರೀತಿಯಾಗಿ ಯಮುನೆಯ ಉತ್ಪತ್ತಿ ಇರುತ್ತದೆ. ಇದರಂತೆ ಲೋಕಪಾವನಳಾದ ಗಂಗೆಯು ಪೃಥ್ವಿಯಲ್ಲಿ ಪ್ರವಹಿಸಲಿಕ್ಕೆ ಭಗೀರಥರಾಜನ ಅದ್ಭುತವಾದ ತಪಶ್ಚರ್ಯವೇ ಕಾರಣವೆಂಬದು ಗಂಗಾಮಾತೆಗೆ ಭಾಗೀರಥಿ ಎಂಬ ಹೆಸರು ಬಂದಿರುವದರಿಂದ ಜಗಪ್ರಸಿದ್ಧವಾಗಿರುತ್ತದೆ. ಒಟ್ಟಿಗೆ ಹೇಳತಕ್ಕ ತಾತ್ಪರ್ಯವಿಷ್ಟೇ; ಯಾವದೊಂದು ವ್ಯಕ್ತಿಯ ತಪಃಪ್ರಭಾವದಿಂದ ಪವಿತ್ರ ತೀರ್ಥಗಳುಂಟಾಗಿರುತ್ತವೆಂಬದು ನಿರ್ವಿವಾದವು.

ಪೌರಾಣಿಕ ಕಥೆಗಳು ನಮಗೆ ಈಗಿನ ಕಾಲದಲ್ಲಿ ಅದ್ಭುತವಾಗಿ ತೋರುವವು. ಮನುಷ್ಯನು ನದೀ ರೂಪದಿಂದ ಪ್ರವಹಿಸುವದೂ ರತಿಕ್ರೀಡಾ ಸಂಬಂಧ

ವಿಲ್ಲದೆ ಸ್ತ್ರೀಯು ಗರ್ಭವತಿಯಾಗುವದೂ ನಮಗೆ ವಿಲಕ್ಷಣಗಳಾಗಿ ತೋರುವದು ಆಶ್ಚರ್ಯವಲ್ಲ. ಯಾಕಂದರೆ ಈಗಿನ ಕಾಲದಲ್ಲಿ ಅಂಥ ಅದ್ಭುತ ಕಾರ್ಯಗಳು ನಮ್ಮ ಕಣ್ಣೆದುರಿಗೆ ಜರಗುವದಿಲ್ಲ. ಪ್ರತ್ಯಕ್ಷ ಪ್ರಮಾಣದ ಹೊರತು ಅನ್ಯ ಪ್ರಮಾಣಗಳು ಈಗ ನಮಗೆ ಮಾನ್ಯವಾಗುವದಿಲ್ಲ. ಒಂದು ವೇಳೆ ಇಂಥ ಅದ್ಭುತಕಾರ್ಯಗಳನ್ನು ಕುಶಾಗ್ರಬುದ್ಧಿಯ ಪಾಶ್ಚಾತ್ಯ ಶೋಧಕರು ಮಾಡಿ ತೋರಿಸಿದರೆ ಆಗ ನಿಜವೆಂದು ಗೋಣು ಅಲ್ಲಾಡಿಸುವೆವು. ತಪೋಹೀನರೂ ಹತಬುದ್ಧರೂ ಆದ ನಾವು ನಮ್ಮ ಶಕ್ತಿಗೆ-ಕಲ್ಪನೆಗೆ ಮೀರಿದ ಸಂಗತಿಗಳಿಗೆ ಹೀಗೆ ಅಲ್ಲಗಳೆಯುವದು ಸಹಜವೇ ಸರಿ!

ನಾಸ್ತಿಕರಾದ ನಾವು ಕ್ಷುದ್ರರಾದರೆ ಅಥವಾ ನಾವು ಕ್ಷುದ್ರಬುದ್ಧಿಯಿಂದ ಪುಣ್ಯಕರವು ತೀರ್ಥಗಳಿಗೆ ದೋಷ ಕೊಟ್ಟರೆ ನಿಜವಾಗಿ ಆ ತೀರ್ಥಗಳು ದೂಷಿತಗಳೆನಿಸಬಹುದೇ? ಹಾಗಾದರೆ ಎಲ್ಲವೂ ನಮ್ಮ ಕೈಯಲ್ಲಿಯೇ ಇದ್ದಹಾಗಾಯಿತು. ಇಂಥ ತಿಳುವಳಿಕೆಯಿಂದ ಯಾವ ಪ್ರಯೋಜನವೂ ಇಲ್ಲ. ಮನುಷ್ಯನಿಗೆ ನಮ್ಮ ಪೂರ್ವಜರು ಬರೆದಿಟ್ಟ ಆಪ್ತವಾಕ್ಯದ ಮೇಲೆ ವಿಶ್ವಾಸವು ಇದ್ದರೇ ಅದು ಅವನ ಮನುಷ್ಯತ್ವಕ್ಕೆ ಶೋಭಿಸುತ್ತದೆ. ಯಾವ ರಾಷ್ಟ್ರದಲ್ಲಿ ಪೂರ್ವಜರ ಆಪ್ತವಾಕ್ಯಗಳಿಗೆ ಆದರವಿಲ್ಲವೋ ಆ ರಾಷ್ಟ್ರವು ಹ್ಯಾಗೆ ಕ್ಷೇಮವನ್ನು ಹೊಂದುವದು? ಆದ್ದರಿಂದ ನಾವು ಪವಿತ್ರ ತೀರ್ಥಕ್ಷೇತ್ರಗಳ ವಿಷಯವಾಗಿ ಯಾವ ಬಗೆಯ ಕುಶಂಕೆಗಳನ್ನೂ ತಕ್ಕೊಳ್ಳಬಾರದು. ಸಾಧ್ಯವಾದ ಮಟ್ಟಿಗೆ ನಮ್ಮ ಆಯುಷ್ಯದಲ್ಲಿ ಅಂಥ ಮಹತ್ತರ ತೀರ್ಥಗಳ ಸ್ನಾನವನ್ನು ಒಂದೆರಡು ಸಾರೆಯಾದರೂ ಮಾಡಬೇಕು.

ಭೂಗರ್ಭಶಾಸ್ತ್ರ ದೃಷ್ಟಿಯಿಂದ ವಿಚಾರ ಮಾಡಿದರೆ ಪೃಥ್ವಿಯಲ್ಲಿ ಎಂಥ ಎಂಥ ಅಮೂಲ್ಯ ವಸ್ತುಗಳಿರುವವೆಂಬದು ಹೇಳಲಿಕ್ಕೆ ಕೂಡಾ ಅಶಕ್ಯವಿರುತ್ತದೆ. ಆದಕ್ಕಾಗಿ "ಬಹುರತ್ನಾ ವಸುಂಧರಾ" ಎಂದು ಅನ್ನುವ ಪರಿಪಾಠ ಬಿದ್ದಿರುವದು. ಒಂದು ಪ್ರದೇಶಕ್ಕಿಂತ ಮತ್ತೊಂದು ಪ್ರದೇಶದ ಭೂಗುಣವು ಬಹು ಶ್ರೇಷ್ಠವಿರುವದು. ಹವಾಮಾನ-ನೀರಿನ ಗುಣ ಮೊದಲಾದವುಗಳು ಈ ಭೂಗುಣವನ್ನೇ ಅವಲಂಬಿಸಿರುತ್ತವೆ. ಮಹತ್ತರ ಗುಣವುಳ್ಳ ತೀರ್ಥಗಳು ಶ್ರೇಷ್ಠತರಗತಿಯ ಭೂಗುಣವುಳ್ಳ ಪ್ರದೇಶಗಳಲ್ಲಿ ಉಗಮ ಹೊಂದಿರುತ್ತವೆ ಆಕಾಶ ಚಿದಂಬರ ಕ್ಷೇತ್ರದ ಮಾಹಾತ್ಮ್ಯೆಯಲ್ಲಿ ಒಂದು ಆಖ್ಯಾನವುಂಟು; ಏನಂದರೆ— ಒಬ್ಬ ರಾಜನು ಗಲಿತ ಕುಷ್ಠವುಳ್ಳವನಾಗಿ ಬಹುಕಾಲ ಔಷಧೋಪಚಾರ ನಡಿಸಿದರೂ ಗುಣಹೊಂದದೆ ಕೊನೆಗೆ ರಾಮೇಶ್ವರಕ್ಕೆ ಹೋಗಿ ಅಲ್ಲಿ ದೇಹಬಿಡಬೇಕೆಂದು

ನಿರ್ಧರಿಸಿದನು. ಮತ್ತು ಅದರಂತೆ ಸರಂಜಾಮಿನೊಡನೆ ರಾಮೇಶ್ವರದ ಕಡೆಗೆ ಸಾಗಿದನು. ದಾರಿಯಲ್ಲಿ ಅವನು ಒಂದು ಅರಣ್ಯದಲ್ಲಿ ವಾಸ ಮಾಡಬೇಕಾಯಿತು; ಮಧ್ಯಾಹ್ನದ ಬಿಸಿಲಿನಲ್ಲಿ ರಾಜನು ತನ್ನ ರಾಹುಟಿಯಲ್ಲಿ ಕುಳಿತು ಮ್ಲಾನಮುಖದಿಂದ ಆ ವನಶೋಭೆಯನ್ನು ನೋಡುತ್ತಿದ್ದನು. ರಾಜನ ರಾಹುಟಿಯಿಂದ ಕೆಲ ಅಂತರದಲ್ಲಿ ಅವನ ಸೈನಿಕರು ಇಳಿದುಕೊಂಡಿದ್ದರು; ರಾಜನ ದೃಷ್ಟಿಯು ಅರಣ್ಯದ ಕಡೆಗೆ ಇರುವಾಗ ಒಂದು ಚಮತ್ಕಾರವು ವರ್ತಿಸಿತು. ಒಂದು ಕಾಡಹಂದಿಯು ಓಡುತ್ತ ಬಂದು ಆ ಅರಣ್ಯದಲ್ಲಿರುವ ಒಂದು ರಾಡಿನೀರಿನ ಗುಂಡಿಯಲ್ಲಿ ಬಿದ್ದು ಹೊರಳಾಡಿತು. ಮತ್ತು ಕ್ಷಣಹೊತ್ತಿನಲ್ಲಿ ಬೈಲಿಗೆ ಬಂದು ಮೈಯನ್ನು ಕೊಡವಿತು. ಆಗ ಅದರ ಮೈಯು ಸುವರ್ಣದಂತೆ ತೇಜಃಪುಂಜವಾಯಿತು. ಈ ಸಂಗತಿಯನ್ನು ಕಣ್ಮುಟ್ಟ ನೋಡಿ ರಾಜನಿಗೆ ಸೋಜಿಗವಾಯಿತು. ಈ ಗುಂಡಿಯಲ್ಲಿ ಏನೋ ಒಂದು ಅದ್ಭುತ ಶಕ್ತಿ ಇರುವದೆಂದು ತಿಳಿದು ಮೆಲ್ಲಗೆ ರಾಹುಟಿಯಿಂದ ಹೊರಟು ಆ ಗುಂಡಿಯ ಸಮೀಪಕ್ಕೆ ಬಂದನು. ನೋಡಲಿಕ್ಕೆ ಆ ಗುಂಡಿಯು ಬಹು ಅಸಹ್ಯವಾಗಿತ್ತು. ಅದರಲ್ಲಿಯ ನೀರು ರಾಡಿಯಾಗಿದ್ದವು, ಕೆಸರು ವಿಶೇಷವಾಗಿತ್ತು. ರಾಜನು ಅದರ ದಂಡೆಯ ಮೇಲೆ ನಿಂತು ವಿಚಾರ ಮಾಡಿದನು. ಅಂಥ ರಾಡಿ ನೀರಿನಲ್ಲಿ ಕಾಲಿಡಲಿಕ್ಕೆ ಅವನ ಮನಸ್ಸು ಒಪ್ಪದಾಯಿತು. ಕಡೆಗೆ ಅವನು ಗಟ್ಟಿ ಮನಸ್ಸು ಮಾಡಿ ರೋಗಿಯು ಕಹಿ ಔಷಧವನ್ನು ಕಣ್ಣುಮುಚ್ಚಿ, ಮೋರೆ ಕಿವುಚಿ ಕುಡಿಯುವಂತೆ ಒಮ್ಮೆ ಆ ಗುಂಡಿಯಲ್ಲಿಳಿದು ಆ ರಾಡಿನೀರಿನಲ್ಲಿ ಹೊರಳಾಡಿದನು. ಆಗ ಆ ಗುಂಡಿಯೊಳಗಿನ ರಾಡಿ ನೀರೇ ಅವನ ಗಲಿತ ಕುಷ್ಠ ರೋಗಕ್ಕೆ ಔಷಧವಾಗಿ ಪರಿಣಮಿಸಿತು. ರಾಜನು ಮೇಲೆ ಬರಲು ಅವನ ದೇಹವು ಚೊಕ್ಕಚಿನ್ನದಂತೆ ಥಳಥಳಿಸ ಹತ್ತಿತು. ಮತ್ತು ನಿರ್ವ್ಯಾಧಿಯಾಯಿತು. ರಾಜನು ತುಂಬಾ ಸಂತೋಷಬಟ್ಟು ಈ ಗುಂಡಿಯು ಸಾಮಾನ್ಯವಾದದ್ದಲ್ಲ. ಇದು ಒಂದು ಮಹತ್ತರ ತೀರ್ಥವಾಗಿರಬೇಕು; ಎಂದು ನಿರ್ಧರಿಸಿ ತನ್ನ ರಾಹುಟಿಗೆ ಹೋದನು. ಹೇಳತಕ್ಕ ತಾತ್ಪರ್ಯವೇನಂದರೆ—ತೀರ್ಥಸ್ನಾನವು ದೇಹಾರೋಗ್ಯಕ್ಕೆ ಒಂದು ಬಗೆಯ ಔಷಧಿಯಾಗಿರುವದು. ಕೆಲವು ತೀರ್ಥಗಳ ಸ್ನಾನದಿಂದ ಪಿತ್ಥವು ಉಪಶಮನವಾಗುವದು, ಕೆಲವುಗಳಿಂದ ಉಷ್ಣವು ನಿವಾರಣವಾಗುವದು. ಕೆಲವುಗಳಿಂದ ಶೀತಬಾಧೆಯು ತೊಲಗುವದು.

ಒಟ್ಟಿಗೆ ವಿಚಾರಮಾಡಿ ನೋಡಿದರೆ ತೀರ್ಥಗಳಲ್ಲಿ ಯಾವದೋ ಒಂದು ಗುಪ್ತ ಶಕ್ತಿಯು ಇರುವಂತೆ ಕಂಡು ಬರುವದು. ಆ ಶಕ್ತಿಯು ಇಂತಹದೆಂಬದು

ನಮಗೆ ತಿಳಿಯದಿದ್ದರೂ ಅದು ತನ್ನ ಕೆಲಸವನ್ನು ತಪ್ಪದೆ ಮಾಡುವದು. ತೀರ್ಥಗಳಲ್ಲಿದ್ದ ಆ ಗುಪ್ತ ಶಕ್ತಿಯ ವಿವರಣೆಯು ಪುರಾಣಗಳಲ್ಲಿ ವಿಶದವಾಗಿ ಕಂಡು ಬರುವದು. ಕೆಲವು ತೀರ್ಥಗಳಿಗೆ ಮಹತ್ತರ ವರವಿರುವದು,§ ಕೆಲವುಗಳಿಗೆ ಋಷಿಗಳ ತಪೋತೇಜದಿಂದ ಸಿದ್ಧಿಯುಂಟಾಗಿರುವದು. ಕೆಲವುಗಳು ಇಂಥ ವರ ಹಾಗು ಸಿದ್ಧಿಗಳನ್ನು ಹೊಂದಿರುವದಲ್ಲದೆ ಉತ್ತಮೋತ್ತಮ ಖನಿಜದ್ರವ್ಯಗಳಿಂದ ಕೂಡಿಕೊಂಡಿರುವವು. ಹೀಗೆ ತೀರ್ಥಗಳಲ್ಲಿ ಸ್ವಾಭಾವಿಕ ಶಕ್ತಿ-ಆವಾಹಿತ ಶಕ್ತಿಗಳೆಂಬ ಎರಡು ಶಕ್ತಿಗಳಿದ್ದು ಅವು ಅವುಗಳ ಉತ್ಪತ್ತಿಯ ಸಂಗಡ ಉಂಟಾಗಿರುತ್ತವೆ.

ಕೆಲವು ತೀರ್ಥಗಳ ಉತ್ಪತ್ತಿಯು ಇದಕ್ಕೂ ವಿಲಕ್ಷಣವಿರುವದು. ಕೆಲ ಜನ ಪುಣ್ಯವ್ಯಕ್ತಿಗಳು ಕೆಲವೊಂದು ಕಾರಣದಿಂದ ಶಾಪಗ್ರಸ್ತರಾಗಿ ನದೀ—ತೀರ್ಥ ರೂಪಗಳಿಂದ ಭೂಲೋಕದಲ್ಲಿ ವಾಸ ಮಾಡಿದಂತೆ ಪುರಾಣಗಳಿಂದ ತಿಳಿದು ಬರುತ್ತದೆ. ಶಾಪಗ್ರಸ್ತರಾಗಿಯೇ ಆಗಲೊಲ್ಲದೇಕೆ ಆ ವ್ಯಕ್ತಿಗಳು ಪರೋಪಕಾರ ಕಾರ್ಯದಲ್ಲಿ ಆಸಕ್ತವಾದ್ದರಿಂದ ಪಾಪಿಗಳ ಮೇಲೆ ಅವರು ಒಂದು ಬಗೆಯಿಂದ ಉಪಕಾರ ಮಾಡಿದಂತೆಯೇ ಸರಿ.

ಪುರಾಣಗಳಲ್ಲಿ ವರ್ಣಿತವಾದ ತೀರ್ಥೋತ್ಪತ್ತಿಯ ವಿಷಯವು ಹ್ಯಾಗೇ ಇರಲಿ; ಅದರಲ್ಲಿರತಕ್ಕ ರಹಸ್ಯವನ್ನು ತಿಳಿದು ನಡೆಯುವದು ನಮ್ಮ ಕರ್ತವ್ಯವು. ವ್ಯಕ್ತಿಯು ಶಾಪಗ್ರಸ್ತವಾದರೆ ಹ್ಯಾಗೆ ತೀರ್ಥವಾಗುವದು, ಎಂಬಿವೇ ಕುತರ್ಕಗಳನ್ನು ಮಾಡುತ್ತ ಕುಳಿತುಕೊಳ್ಳುವದು ಸರಿಯಲ್ಲ. ಮುಖ್ಯವಾಗಿ ತೀರ್ಥಗಳು ಪ್ರಾಣಿಮಾತ್ರರ ಪಾಪಕ್ಷಾಲನಕ್ಕೋಸ್ಕರ ನಿರ್ಮಿತವಾಗಿರುತ್ತವೆ. ಮಾನಸಿಕ ಪಾಪ, ಶಾರೀರಿಕ ಪಾಪಗಳು ತೀರ್ಥಸ್ನಾನದಿಂದ ಕಳೆಯಲ್ಪಡುತ್ತವೆ. ಹೀಗೆಂದು ತಿಳಿದು ದಿನಾಲು ಮಾನಸಿಕ-ಶಾರೀರಿಕ ಪಾಪಗಳನ್ನು ಎಗ್ಗಿಲ್ಲದೆ ಆಚರಿಸುವದರ ಕಡೆಗೆ ಮನಸ್ಸು ಮಾಡಿದರೆ ತಪ್ಪಾಗುವದೆಂದು ಸುವಿಚಾರಿಗಳಿಗೆ ಬರೆದು ತಿಳಿಸುವ ಕಾರಣವಿಲ್ಲ. ಉತ್ತಮವಾದ ಔಷಧವು ರೋಗವನ್ನು ನಿವಾರಿಸುವದೆಂದು ಯಾರಾದರೂ ಬುದ್ಧಿಪೂರ್ವಕವಾಗಿ ರೋಗವನ್ನುಂಟು ಮಾಡಿಕೊಳ್ಳಲಿಕ್ಕೆ ಹೋಗುವದಿಲ್ಲ. ಅದರಂತೆಯೇ ಪಾಪಕೃತ್ಯಗಳನ್ನಾಚರಿಸುವವರ ಸ್ಥಿತಿಯಿರುತ್ತದೆ.

---

§ ಯಮುನಾ ಪ್ರಚ್ಯುತೆ ನೈವ ಸಂಸ್ಕೃತಾಥ ಸುಶಿಕ್ಷಿತಾ । ಶಂಖಾಂಬುನಾಭಿಷಿಚ್ಯೈವ ನಾಂ ತ್ವತ್ತೋ ನಾನ್ಯಾಸ್ತಿ ಪಾವನೀ ॥ ೧ ॥

ಗಚ್ಛತ್ವಿತೋತಿ ಪಾಪಾಯ ತಾನ್ಪ್ರಸೀಹಿ ಕೃಪಾವತಿ ॥ ಜಲೆಸ್ಥಲೆಚಲೆ ವ್ಯೋಮ್ನಿ ಪಾತಳೆಷ್ವ ನಿಲೆ ನಿಲೆ ॥ ೨ ॥ (ಯಮುನಾ ಮಾಹಾತ್ಮ್ಯ.)

ನಡೆಯುವ ಮನುಷ್ಯನು ಎಡವುವುದು ಸ್ವಾಭಾವಿಕವಿರುವಂತೆ ಸಾಂಸಾರಿಕ ಮನುಷ್ಯನಿಂದ ಅಪ್ಪಿತಪ್ಪಿ ಒಮ್ಮೊಮ್ಮೆ ಪಾಪಾಚರಣೆಗಳು ತಿಳಿಯದೆ ಸಂಭವಿಸಿ ಹೋಗುವವು. ಇಂಥ ಪಾಪಾಚರಣೆಗಳು ಸಂಭವಿಸಿದಾಗ ಆ ಮನುಷ್ಯನಿಗೆ ಅತ್ಯಂತ ಪಶ್ಚಾತ್ತಾಪವಾಗುತ್ತದೆ. ಹೀಗೆ ಯಾವನಿಗೆ ಪಶ್ಚಾತ್ತಾಪವಾಗವದೋ ಅವನನ್ನು ತೀರ್ಥವು ಪವಿತ್ರನನ್ನಾಗ ಮಾಡುತ್ತದೆ. ಇಂಥ ಜನರ ಸಲುವಾಗಿಯೇ ತೀರ್ಥಗಳ ನಿರ್ಮಾಣವಾಗಿರುತ್ತದೆ. ಯಾಕಂದರೆ ತೀರ್ಥೋತ್ಪತ್ತಿಯ ನಿಜವಾದ ಉದ್ದೇಶವು ಇಂಥವರಿಂದಲೇ ಸಾಧಿಸುತ್ತದೆ. ಇರಲಿ.

ಇಲ್ಲಿಯ ವರೆಗೆ ತೀರ್ಥೋತ್ಪತ್ತಿಯ ಬಗ್ಗೆ ಸಾಮಾನ್ಯ ವಿಚಾರವನ್ನು ಮಾಡಿದಂತಾಯಿತು. ಇನ್ನು ಮುಂದೆ ಪೌರಾಣಿಕ ಪ್ರಸಿದ್ಧ ತೀರ್ಥಗಳ ಮಹತ್ವವನ್ನೂ, ಆ ತೀರ್ಥವಿಧಿಯನ್ನು ಆಚರಿಸುವ ಶಾಸ್ತ್ರವಿಹಿತವಾದ ಪದ್ಧತಿಯನ್ನೂ ಹಾಗೆ ಮಾಡಬೇಕಾದ ಕಾರಣವನ್ನೂ ಹೇಳತಕ್ಕದ್ದಿರುವದು. ಇವನ್ನು ಕ್ರಮವಾಗಿ ಮುಂದಿನ ಲೇಖಾಂಕಗಳಲ್ಲಿ ವಿವರಿಸಲಾಗುವದು.

## ಲೇಖಾಂಕ ೩.

## ತೀರ್ಥ ಕ್ಷೇತ್ರಗಳ ಮಹತ್ವ.

ತೀರ್ಥಾಂತರೆ ಗವಾಂಕೋಟಿಂ ವಿಧಿವದ್ಯಃಪ್ರಯಚ್ಛತಿ |
ಏಕಾಹಂ ಯೋವಸೇತ್ಕಾಶ್ಯಾಂ ಕಾಶೀವಾಸೀತಯೋರ್ವರಃ ||
ತಪ್ತ್ವಾ ತಪಾಂಸಿ ಸರ್ವಾಣಿ ಬಹುಕಾಲಂಜಿತೇಂದ್ರಿಯಃ |
ಯತ್ಫಲಂ ಲಭತೇನ್ಯತ್ರ ತತ್ಕಾಶ್ಯಾಮೇಕರಾತ್ರತಃ||

(ಕಾಶೀಖಂಡ)

ಪೌರಾಣಿಕ ಪ್ರಸಿದ್ಧ ತೀರ್ಥಗಳಲ್ಲಿ ಇಂಥ ತೀರ್ಥವೇ ಸಮಸ್ತ ತೀರ್ಥಗಳಲ್ಲಿ ಶ್ರೇಷ್ಠವೆಂದು ಹೇಳಲಿಕ್ಕೆಬರುವಂತಿಲ್ಲ; ಯಾಕಂದರೆ ಯಾವ ತೀರ್ಥ ಮಾಹಾತ್ಮ್ಯಯನ್ನು ನೋಡಿದರೂ ಅದರಲ್ಲಿ ಆ ತೀರ್ಥವನ್ನು ಉಳಿದ ತೀರ್ಥಗಳಿಗಿಂತ ಅಧಿಕವೆಂದು ವರ್ಣಿಸಿದ್ದು ಕಂಡು ಬರುವದು. ಪ್ರಸಿದ್ಧ ಕಾಶೀಕ್ಷೇತ್ರವು ಸಮಸ್ತ ತೀರ್ಥಗಳಿಗೆ ಮುಕುಟಮಣಿಯೆಂದು ಹೇಳಹೋದರೆ ಮತ್ತೊಂದು ತೀರ್ಥಮಾಹಾತ್ಮ್ಯಯಲ್ಲಿ ಕಾಶಿಗಿಂತಲೂ ಇದು ಗುಂಜಿತೂಕ ಹೆಚ್ಚಿನದೆಂಬ ವರ್ಣಿತವಾದ ಅಂಶವು ಮುಂದೆ ಬಂದು ನಿಲ್ಲುವದು. ಹೇಳತಕ್ಕ ತಾತ್ಪರ್ಯವೇನಂದರೆ ಮಾವಿನ ಹಣ್ಣು, ಬಾಳೆಯಹಣ್ಣು ಇವುಗಳಲ್ಲಿ ಯಾವದು ಶ್ರೇಷ್ಠವೆಂದು ಕೇಳಿದರೆ ಹ್ಯಾಗೆ ಹೇಳಲಿಕ್ಕೆ ಬರುವದಿಲ್ಲವೋ ಹಾಗೆ ತೀರ್ಥಗಳಲ್ಲಿ ಇಂಥ ತೀರ್ಥವೇ ಶ್ರೇಷ್ಠವೆಂದು ಹೇಳಲಿಕ್ಕೆ ಬರುವ ಹಾಗಿಲ್ಲ. ಆದರೂ ಹವಾಗುಣ, ಭೂಗುಣಗಳ ಮೇಲಿಂದ ಕೆಲ ಕೆಲವು ತೀರ್ಥಗಳು ಶ್ರೇಷ್ಠಗಳೆಂದೆನಿಸಿಕೊಳ್ಳುವವು. ಈ ಲೇಖದ ಶಿರೋಭಾಗದಲ್ಲಿ ಉಲ್ಲೇಖಿಸಿದ ಶ್ಲೋಕಗಳು ಕಾಶೀಕ್ಷೇತ್ರದ ಮಹತಿಯನ್ನು ಚನ್ನಾಗಿ ವಿಶದಗೊಳಿಸುತ್ತವೆ. ವಸ್ತುತಃ ಈ ಕ್ಷೇತ್ರವು ಸ್ತೋತ್ರಾರ್ಹವಾಗಿಯೇ ಇದೆಯೆಂದು ಹೇಳಬಹುದು. "ನಾಸ್ತಿ ಗಂಗಾಸಮಂ ತೀರ್ಥಂ ಕಲಿಕಲ್ಮಷ ನಾಶನಂ | ನಾಸ್ತಿ ಮುಕ್ತಿಪ್ರದಂ ಕ್ಷೇತ್ರಮವಿಮುಕ್ತ ಸಮಂಹರೇ" || ಎಂದು ಕಾಶೀಮಾಹಾತ್ಮ್ಯಯಲ್ಲಿ ವರ್ಣಿತವಾದಂತೆ ಕಲಿಕಲ್ಮಷನಾಶಕವಾದ ಗಂಗಾತೀರ್ಥವುಳ್ಳದ್ದು, ಮುಕ್ತಿಪ್ರದ ಕ್ಷೇತ್ರವೆನಿಸಿಕೊಂಡದ್ದು ಅದ ಕಾಶೀಕ್ಷೇತ್ರವು ಶ್ರೇಷ್ಠವಾದದ್ದೇ ಸರಿ ಎಲ್ಲಿ ಕೈಲಾಸಪತಿಯಾದ ಶಂಕರನು ವಿಶ್ವೇಶ್ವರ ನಾಮವನ್ನು ಧರಿಸಿ ವಾಸಮಾಡಿ

ಕೊಂಡಿರುವನೋ ಅಂಥ ಕ್ಷೇತ್ರದ ಮಹತಿಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಇರುತ್ತದೆ. ಪರ್ವತರಾಜನಾದ ಹಿಮಾಚಲನಿಗೆ ಅನತಿದೂರದಲ್ಲಿದ್ದ ಈ ಪುರಾತನ ಕ್ಷೇತ್ರವು ಬಹು ಜನ ಸಾಧು ಸತ್ಪುರುಷರನ್ನು ಒಳಗೊಂಡಿರುತ್ತದೆ.

ಈ ಕ್ಷೇತ್ರದ ಶ್ರೇಷ್ಠತೆಗೆ ಇನ್ನೊಂದು ಕಾರಣವಿದೆ, ಅದೇನೆಂದರೆ ವೈದಿಕ ಧರ್ಮಾಭಿಮಾನಿಯೆನಿಸಿದ ಯಾವ ಹಿಂದುವಾದರೂ ಈ ಕ್ಷೇತ್ರದ ದಿವ್ಯವಾಸವನ್ನು ಬಯಸದೆ ಇರಲಾರನು. ಶೈವ ವೈಷ್ಣವ ಪಂಥಗಳು ಸಮನಾಗಿಯೇ ಈ ಕ್ಷೇತ್ರವನ್ನು ಪ್ರೀತಿಸುವವೆಂದ ಬಳಿಕ ಇದರ ಘನತೆಯು ಎಷ್ಟೆಂಬದು ವ್ಯಕ್ತವಾಗುತ್ತದೆ. ಋಷಿಗಳ ತಪಶ್ಚರ್ಯ, ದೈವಸಾನ್ನಿಧ್ಯಗಳು ಪುರಾಣ ಪ್ರಸಿದ್ಧಗಳಾದ ಎಲ್ಲ ತೀರ್ಥ-ಕ್ಷೇತ್ರಗಳಲ್ಲಿ ಸರಿಪ್ರಮಾಣದಿಂದಿದ್ದರೂ ಸ್ಥಾನಮಾಹಾತ್ಮ್ಯವು ಈ ಕ್ಷೇತ್ರದಲ್ಲಿ ವಿಶೇಷವಿರುತ್ತದೆ. ಬಹುತರವಾಗಿ ಗಂಗಾತಟಾಕದಲ್ಲಿದ್ದ ಎಲ್ಲ ಕ್ಷೇತ್ರಗಳಿಗೆ ಈ ವಿಷಯದಲ್ಲಿ ಮಾನ್ಯತೆಯು ವಿಶೇಷವಾಗಿ ಸಿಕ್ಕುತ್ತದೆ. ಇರಲಿ.

ಯಾವದೊಂದು ಕ್ಷೇತ್ರವನ್ನು ವರ್ಣಿಸಬೇಕಾದರೆ ಆ ಕ್ಷೇತ್ರದ ಸ್ಥಳವರ್ಣನೆ-ಸ್ಥಳಕ್ಕೆ ಬಂದ ಮಾಹಾತ್ಮ್ಯದ ವರ್ಣನೆ. ಆ ಮಾಹಾತ್ಮ್ಯದ ಅನುಭವ ಪಡೆದವರ ವರ್ಣನೆ ಮಾಡುವದು ಸ್ವಾಭಾವಿಕವಷ್ಟೇ; ಸ್ಥಳವರ್ಣನೆ ಹಾಗು ಸ್ಥಳಕ್ಕೆ ಬಂದ ಮಾಹಾತ್ಮ್ಯದ ವರ್ಣನೆಗಳಲ್ಲಿ ಹೆಚ್ಚು ಕಡಿಮೆಯಾಗುವಹಾಗಿಲ್ಲ. ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಸಂಗತಿಗಳನ್ನೇ ಮುಂದರಿಸುತ್ತ ಹೋಗಬೇಕಾಗುತ್ತದೆ. ಆದರೆ ಆ ತೀರ್ಥ-ಕ್ಷೇತ್ರಗಳ ಮಹತ್ವದ ಅನುಭವವನ್ನು ಪಡೆದವರ ವರ್ಣನೆಯು ಮಾತ್ರ ಬೇರೆ ಬೇರೆಯಾಗಿರುತ್ತದೆ. ಪೌರಾಣಿಕ ಕಾಲದಲ್ಲಿಯ ಜನರ ಗುಣ-ಶೀಲಗಳಿಗೂ ಈಗಿನ ಜನರ ಗುಣ-ಶೀಲಗಳಿಗೂ ಭೂಮ್ಯಾಕಾಶದಷ್ಟು ಅಂತರವಾಗಿರುತ್ತದೆ. ಆದ್ದರಿಂದ ಆಗಿನ ಕಾಲದ ಜನರು ಯಾವ ಭಾವನೆಯಿಂದ ತೀರ್ಥಕ್ಷೇತ್ರಗಳಲ್ಲಿ ವಾಸಿಸಿ ಫಲವನ್ನು ಪಡೆದರೋ ಆ ಭಾವನೆಯಿಂದ ವಾಸಿಸಲಿಕ್ಕೆ ಈಗಿನವರಾದ ನಮಗೆ ಸಾಧಿಸುವದಿಲ್ಲೆಂದ ಬಳಿಕ ಅವರು ಪಡೆದ ಫಲಗಳಿಗೂ ನಮಗೆ ದೊರೆಯುವ ಫಲಗಳಿಗೂ ಅಂತರವಾಗುವದು ಸ್ವಾಭಾವಿಕವಾಗಿರುತ್ತದೆ. ಆದ್ದರಿಂದ ಸತ್ಫಲಗಳನ್ನು ಹೊಂದಿದವರ ಉದಾಹರಣೆಯನ್ನು ಕೊಡಬೇಕೆಂದರೆ ಪುರಾಣಗಳಲ್ಲಿ ವರ್ಣಿತವಾದ ವ್ಯಕ್ತಿಗಳ ಉದಾಹರಣೆಯನ್ನೇ ಕೊಡಬೇಕಾಗುತ್ತದೆ. ಆಧುನಿಕ ಕಾಲದಲ್ಲಿ ಸತ್ಫಲಗಳನ್ನು ಹೊಂದಿದವರ ಉದಾಹರಣೆಯು ಉಪಲಬ್ಧವಾಗುವದು ದುಸ್ತರವೇ ಸರಿ! ಈಗಿನ ಕಾಲದಲ್ಲಿಯಾದರೂ ಸದ್ಭಾವನೆಯುಳ್ಳ ಜನರು ಇರುವರು. ಅವರು ಉಳಿದ ಜನರಂತೆ ದೇವಲಂಡರಾಗಿ ವರ್ತಿಸುವದಿಲ್ಲ.

ತೀರ್ಥ-ಯಾತ್ರೆಗಳಲ್ಲಿ ಭಂಡತನ ಮಾಡುವದಿಲ್ಲ. ಸ್ವಾರ್ಥಪರಾಯಣತೆಯನ್ನು ವ್ಯಕ್ತಗೊಳಿಸುವದಿಲ್ಲ. ಅಂಥವರಿಗೆ ಸತ್ಫಲಗಳು ಸಿಕ್ಕಲಾರವೆಂದು ಹೇಳಲಾಗುವದಿಲ್ಲ. ಆದರೆ ಬಹು ಸಂಖ್ಯಾಕವಾದ ಜನಾಂಗವು ಆ ಸತ್ಫಲಗಳಿಗೆ ಹೊರತಾಗಿರುತ್ತದೆ. ಅವರಿಗೆ ತೀರ್ಥ-ಯಾತ್ರೆಗಳ ನಿಜವಾದ ಬೆಲೆಯು ಗೊತ್ತಾಗುವದಿಲ್ಲ. ಇಂಥವರು ಕೇವಲ ಇಂದ್ರಿಯಗಳ ತೃಪ್ತಿಗಾಗಿ ತೀರ್ಥ ಕ್ಷೇತ್ರಗಳಲ್ಲಿ ವಾಸಿಸುವರೆಂದು ಕಷ್ಟದಿಂದ ಹೇಳಬೇಕಾಗುತ್ತದೆ ಗೋಮಾತೆಯ ಕೆಚ್ಚಲದಲ್ಲಿದ್ದ ಉಣ್ಣೆಯು ಕ್ಷೀರ ಸೇವನೆಯನ್ನು ಮಾಡದೆ ರುಧಿರಪ್ರಿಯವಾಗಿರುವದು ಅದರಂತೆಯೇ ಈಗಿನ ಕಾಲದಲ್ಲಿ ಅಧಾರ್ಮಿಕರ ಕ್ಷೇತ್ರವಾಸದ ಸ್ಥಿತಿಯಿರುತ್ತದೆ ಇಂಥ ಅರ್ಥಾತ್ ಅಧಾರ್ಮಿಕರ ದೃಷ್ಟಿಯು ಕೇವಲ ಕುತ್ಸಿತವಿರುತ್ತದೆ. ಇಂಥವರು ಪವಿತ್ರ ಕ್ಷೇತ್ರಗಳಿಗೆ ಹೋಗುವದಕ್ಕಿಂತ ತಮ್ಮ ಮನೆಯಲ್ಲಿಯೇ ವಾಸವಾಗಿರುವದು ಸರ್ವೋತ್ಕೃಷ್ಟವಾಗಿರುವದು.

ಕಾರ್ಯಾಕಾರ್ಯಗಳು, ಧರ್ಮಾ-ಧರ್ಮಗಳು, ಯೋಗ್ಯಾಯೋಗ್ಯಗಳು ತಿಳಿಯುತ್ತಿದ್ದರೂ ಆ ಕಡೆಗೆ ಬುದ್ಧಿಪೂರ್ವಕವಾಗಿ ದುರ್ಲಕ್ಷಿಸಿ ಮಾಡಬಾರದ ಕೆಲಸಗಳನ್ನು ಮಾಡ ಹೋಗುವ ಯಾತ್ರಿಕರಿಗೆ ಯಾತ್ರೆಯ ಸತ್ಫಲಗಳು ದೊರೆಯದಿದ್ದರೆ ಇದರಲ್ಲಿ ತೀರ್ಥ-ಕ್ಷೇತ್ರಗಳ ದೋಷವೇನ ? ಇಂಥ ಯಾತ್ರಿಕರಿಗೆ ಯಾವ ಉಪಮೆಯೂ ಸಲ್ಲುವದಿಲ್ಲ. ಯಾತ್ರೆಗಳಿಗೆ ಹೋದಾಗ ಅವರು ಆಚರಿಸುವ ಸಂಗತಿಗಳ ಕಡೆಗೆ ಲಕ್ಷ್ಯಗೊಟ್ಟರೆ ಧಾರ್ಮಿಕ ಪುರುಷನ ಮೈಮೇಲೆ ರೋಮಾಂಚಗಳೇಳುತ್ತವೆ. ಇರಲಿ ಈ ಯಾತ್ರಿಕರ ಗುಣದೋಷಗಳನ್ನು ಪ್ರಸಂಗ ಬಂದಾಗ ವಿವೇಚಿಸೋಣ.

ಪರಿಸ್ಥಿತಿಯು ಎಷ್ಟೇ ಬದಲಾಯಿಸಿದರೂ, ತೀರ್ಥ-ಕ್ಷೇತ್ರಗಳಲ್ಲಿ ವಾಸಿಸುವ ಜನರು ಎಷ್ಟೇ ದುರ್ಗುಣ ಪೂರಿತರಾದರೂ ತೀರ್ಥ-ಕ್ಷೇತ್ರಗಳ ಸ್ವಾಭಾವಿಕ ಪವಿತ್ರತೆಯು ಇರುವಂತೆ ಇದ್ದೇ ಇರುತ್ತದೆ. ಸುವರ್ಣವು ಬಹಿಃಕಾರಣಗಳಿಂದ ಮಲಿನವಾದಂತೆ ಕಂಡು ಬಂದರೂ ಅದರ ಶುದ್ಧ ಕಾಂತಿಯು ಗುಪ್ತವಾಗಿರುವಂತೆ ದುರ್ಜನರ ಸಂಘಟನೆಯಿಂದ ಒಂದು ವೇಳೆ ತೀರ್ಥ-ಕ್ಷೇತ್ರಗಳು ತೇಜೋಹೀನವಾದಂತೆ ಕಂಡು ಬಂದರೂ ಅವುಗಳ ಪ್ರಖರವಾದ ತೇಜಸ್ಸು ಗುಪ್ತವಾಗಿ ಇದ್ದೇ ಇರುತ್ತದೆ. ಯಾವನು ಸತ್ವಸ್ಥನಿರುವನೋ ಅವನು ಇದರ ಪ್ರತೀತಿಯನ್ನು ನಿಶ್ಚಯವಾಗಿ ಹೊಂದುವನು. ಪುರಾಣಗಳು, ತೀರ್ಥಗಳಲ್ಲಿ ಸಮಸ್ತ ದೇವತೆಗಳ ವಾಸ್ತವ್ಯವಿರುತ್ತದೆಂದು ವರ್ಣಿಸುತ್ತವೆ. ಇದರ ರಹಸ್ಯವನ್ನು ವಿಚಾರಿಸಿ ನೋಡಿದರೆ

ತೀರ್ಥಾದಿಗಳ ವಿಷಯವಾಗಿ ಮನುಷ್ಯನು ಎಷ್ಟು ಭಯಭಕ್ತಿಯುಳ್ಳವನಾಗಿರಬೇಕೆಂಬದು ವ್ಯಕ್ತವಾಗುತ್ತದೆ.

ಮನುಷ್ಯನು ದೊರಕಿಸತಕ್ಕ ಮುಖ್ಯ ಸಂಗತಿಯೆಂದರೆ ಪವಿತ್ರತೆಯು. ವಿದ್ಯೆ, ದ್ರವ್ಯ ಮೊದಲಾದವುಗಳು. ಇದರ ಮುಂದೆ ಕಡಿಮೆಯ ತರಗತಿಯವೆನಿಸುತ್ತವೆ. ಈ ಪವಿತ್ರತೆ ಯಿದ್ದ ಮಾನದಿಂದ ಮನುಷ್ಯನ ಮಾನ ಅಥವಾ ಗೌರವ, ಹೆಚ್ಚಾಗುತ್ತದೆ. ಇದೇ ಮನುಷ್ಯನ ಅಂತಃಸತ್ವ; ಇಂಥ ಸತ್ವವನ್ನು ಸಂಪಾದಿಸುವದಕ್ಕಾಗಿಯೇ ಮನುಷ್ಯನು ತೀರ್ಥಾಟನೆ ಮಾಡಬೇಕಾಗುತ್ತದೆ; ಯಾಕೆಂದರೆ ತೀರ್ಥಗಳಲ್ಲಿ ದೊಡ್ಡ ದೊಡ್ಡ ಸತ್ಪುರುಷರಿರುತ್ತಾರೆ ಸತ್ಪುರುಷರ ಸಂದರ್ಶನದಿಂದ ಸಂಭಾಷಣ ಶ್ರವಣದಿಂದ ಮನುಷ್ಯನಲ್ಲಿ ಪವಿತ್ರತೆಯುಂಟಾಗುತ್ತದೆ. ಪವಿತ್ರತೆಯೆಂದರೆ ಪಾಪವಿಚಾರಗಳು ಹುಟ್ಟದಿರವಿಕೆಯು; ಯಾವನ ಹೃದಯದಲ್ಲಿ ಪಾಪವಿಚಾರಗಳು ಉತ್ಪನ್ನವಾಗುವದಿಲ್ಲವೋ ಆವನ ಹೃದಯವು ಪವಿತ್ರವಾಗಿರುತ್ತದೆಂದು ತಿಳಿಯಬೇಕು. ಮನುಷ್ಯನು ಬೇಕಾದಷ್ಟು ವಿದ್ಯ ಸಂಪಾದಿಸಬಹುದು, ಬಹಳವೇಕೆ ಹದಿನಾಲ್ಕು ವಿದ್ಯೆ ಅರವತ್ತುನಾಲ್ಕು ಕಲೆಗಳಲ್ಲಿ ಕೂಡ ಪ್ರಾವಿಣ್ಯತೆಯನ್ನು ಪಡೆಯ ಬಹುದು. ಕುಬೇರನಷ್ಟು ದ್ರವ್ಯ ಸಂಪಾದಿಸ ಬಹುದು. ಆದರೆ ಪಾಪವಿಚಾರಗಳು ಅಂಕುರಿಸದಂಥ ಪವಿತ್ರತೆಯನ್ನು ಕಾಯ್ದುಕೊಳ್ಳುವದು ಪರಮ ದುಸ್ತರವಿರುತ್ತದೆ

ನಿಜವಾದ ಸಜ್ಜನರಿಗೊಂದು ಮಾತ್ರ ಈ ವಿಷಯವು ಸಾಧಿಸುತ್ತದೆ. ಅವರ ಹೃದಯ ಭೂಮಿಕೆಯು ಅತ್ಯಂತ ಪರಿಶುದ್ಧವಿರುತ್ತದೆ ಪರಧನದ ವಿಷಯವಾಗಿ ಅವರಲ್ಲಿ ಚೌರ್ಯಬುದ್ಧಿಯುತ್ಪನ್ನವಾಗುವದಿಲ್ಲ. ಇಂಥ ಮಹಾತ್ಮರ ಚರಣತೀರ್ಥವನ್ನು ಯಾವನು ಸೇವಿಸುವನೋ ಅವನಿಗೇ ಧನ್ಯನೆನ್ನಬೇಕು. ಇಂಥ ಸತ್ಪುರುಷರನ್ನು ಹುಡುಕುವದೇ ತೀರ್ಥಾಟನದ ಉದ್ದೇಶವಿರುತ್ತದೆ ಪವಿತ್ರಜನರು ಪವಿತ್ರ ಸ್ಥಳಗಳಲ್ಲಿ ಇರುವರೇ ಹೊರತು, ಜಕಾದ ಅಂಗಡಿಗಳಲ್ಲಿ ಸಿಕ್ಕುವದಿಲ್ಲ. ಇರಲಿ.

ಪೌರಾಣಿಕ ತೀರ್ಥ-ಕ್ಷೇತ್ರಗಳಿಗೆ ಬಂದ ಮಹತ್ವವು ಈ ಪವಿತ್ರತೆಗೋಸ್ಕರವಾಗಿಯೇ ಇರುತ್ತದೆ. ಇಂಥ ಪವಿತ್ರ ಸ್ಥಳಗಳಲ್ಲಿ ವಾಸಿಸುವದರಿಂದ ಭಾವಿಕರಾದವರ ಮನಸ್ಸು ಪರಿಶುದ್ಧವಾಗುತ್ತದೆ. ಈ ಬರಹವನ್ನು ನೋಡಿ ನಮ್ಮ ವಾಚಕರಲ್ಲಿ ಒಂದು ಬಗೆಯ ಸಂಶಯವುತ್ಪನ್ನವಾಗಬಹುದು. ಏನೆಂದರೆ—ಪುರಾಣೋಕ್ತ ಪ್ರಸಿದ್ಧ ತೀರ್ಥ-ಕ್ಷೇತ್ರಗಳಲ್ಲಿ ಈಗಿನ ಕಾಲದಲ್ಲಿ ಲಕ್ಷಾಂತರ ಜನರು ವಾಸಿಸುತ್ತಿದ್ದು, ಅವರೆಲ್ಲರ ಮನಸ್ಸುಗಳು ಯಾಕೆ ಪರಿಶುದ್ಧವಾಗಿರುವದಿಲ್ಲ? ಈ

ಪ್ರಶ್ನೆಗೆ ಉತ್ತರವು ನಮ್ಮ ಬರಹದಲ್ಲಿಯೇ ಇರುತ್ತದೆ. ಭಾವಿಕರ ಅಂದರೆ ಮನಸ್ಸಿನ ಶುದ್ಧೀಕರಣಕ್ಕೆ ಪ್ರಯತ್ನಪಡುವವರ ಮನಸ್ಸು ಮಾತ್ರ ಪರಿಶುದ್ಧವಾಗುತ್ತದೆ. ಆದ್ದರಿಂದ ಈ ಶುದ್ಧೀಕರಣಕ್ಕೆ ವಿಮುಖರಾದವರ ಮನಸ್ಸು ಹ್ಯಾಗೆ ಶುದ್ಧವಾಗಬೇಕು? ಬೀಜವಿದ್ದರೆ ಅಂಕುರೋತ್ಪತ್ತಿಯಷ್ಟೇ; ಯಾರ ಮನಸ್ಸಿನಲ್ಲಿ ಪರಿಶುದ್ಧರೂಪೀ ಬೀಜವು ವಾಸಿಸಿರುವದೋ ಅವರ ಮನಸ್ಸು ಸಾಧುಸಮಾಗಮದಿಂದ, ತೀರ್ಥ-ಕ್ಷೇತ್ರಗಳ ವಾಸದಿಂದ ವಿಕಾಸವಾಗಿ ಪೂರ್ಣ ಪರಿಶುದ್ಧತೆಯನ್ನು ಪಡೆಯುತ್ತದೆ. ಹ್ಯಾಗಂದರೆ—ಕಳವು ಮಾಡತಕ್ಕವನು ಪ್ರಸಿದ್ಧ ಕಳ್ಳರೆಂದೆನಿಸಿಕೊಂಡವರ ಚರಿತ್ರಗಳನ್ನು ಆಸ್ಥೆಯಿಂದ ಕೇಳುವನು. ಮತ್ತು ಅವರು ಯಾವ ಯಾವ ಗಂಡಾಂತರಗಳಲ್ಲಿ ಹ್ಯಾಗೆ ಹ್ಯಾಗೆ ಪಾರಾದರು. ಯಾವ ಯುಕ್ತಿಗಳನ್ನು ನಿಯೋಜಿಸಿದರು. ಎಂಬದನ್ನು ಸೂಕ್ಷ್ಮವಾಗಿ ತಿಳಿದುಕೊಂಡು ತನ್ನ ನ್ಯೂನತೆಯನ್ನು ದೂರಪಡಿಸಿಕೊಳ್ಳಲಿಕ್ಕೆ ಅಂದರೆ ತಾನೂ ನಾಮಾಂಕಿತ ಕಳ್ಳನಾಗಲಿಕ್ಕೆ ಪ್ರಯತ್ನ ಮಾಡುವನು. ಅದರಂತೆ ಜಾರನಾದವನು ಜಾರರ ಕಥೆಗಳನ್ನೇ ಮನವಿಟ್ಟು ಕೇಳಿ ಅದರಲ್ಲಿ ಪ್ರಾವಿಣ್ಯತೆಯನ್ನು ಪಡೆಯಲು ಹವಣಿಸುವನು. ಇದರಂತೆ ಪ್ರತಿಯೊಂದು ಕಲೆಯುಳ್ಳವರ ಸ್ಥಿತಿಯಿರುತ್ತದೆ. ಗಾಯನ ಬಲ್ಲವನು, ಚಿತ್ರ ಕಲೆಯುಳ್ಳವನು ಆಯಾ ಕಲೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದವರ ನೆರವನ್ನೇ ಅಪೇಕ್ಷಿಸುತ್ತಿರುತ್ತಾರೆ. ಅರಸಿಕನಿಗೆ ಎಂಥ ಗಾಯನ ಪಟುವು ಬಳಿಯಲ್ಲಿದ್ದರೂ ಪ್ರಯೋಜನವಾಗುವದಿಲ್ಲ. ಇದು ಹ್ಯಾಗೆ ಸಂಭವವೋ ಹಾಗೆ ಸಾಧುಸಮಾಗಮ-ತೀರ್ಥಾದಿಗಳವಾಸ ಮೊದಲಾದವುಗಳ ಸ್ಥಿತಿಯೂ ಇರುತ್ತದೆ. ಮನಸ್ಸಿನ ಪವಿತ್ರತೆಯ ಯೋಗವುಳ್ಳವನಿಗೆ ಅರ್ಥಾತ್ ಸಜ್ಜನವೃತ್ತಿಯವನಿಗೆ ತೀರ್ಥ ಕ್ಷೇತ್ರಾದಿಗಳ ಮಹತ್ವವು ತಟ್ಟನೆ ಒಡೆದು ಕಾಣುತ್ತದೆ. ಹಾಗು ಸತ್ಪುರುಷರ ವಿಷಯವಿರಾಗವು ಅವನನ್ನು ಮತ್ತಿಷ್ಟು ಸತ್ವಸ್ಥನನ್ನಾಗಿ ಮಾಡುತ್ತದೆ.

ಒಂದು ಸಮಯದಲ್ಲಿ ಸಾಧುಶಿಖಾಮಣಿಗಳಾದ ತುಕಾರಾಮ ಸಾಧುಗಳು ಭಗವದ್ಭಜನೆಯಲ್ಲಿ ನಿರತರಾಗಿದ್ದರು. ಅವರ ಸಂಪೂರ್ಣ ಮನಸ್ಸು ಭಗವಂತನ ಸಗುಣರೂಪದಲ್ಲಿ ತಲ್ಲೀನವಾಗಿತ್ತು. ಅವರ ಕೈಗಳು ತಾಳಹಾಕುತ್ತಿದ್ದವು; ಕಾಲುಗಳು ನರ್ತನ ಮಾಡುತ್ತಿದ್ದವು; ಮುಖವು ನಾಮೋಚ್ಚಾರವನ್ನು ಮಾಡುತ್ತಿತ್ತು. ಇಂಥ ಸಮಯದಲ್ಲಿ ಓರ್ವ ಸುಂದರಾಂಗಿಯು ಅವರ ಬಳಿಗೆ ಬಂದಳು. ಆಕೆಯು ನೂತನ ತರುಣಿಯು: ಮೇಲೆ ಜಗನ್ಮೋಹಿನಿಯಂಥ ಚಲ್ವಿಕೆ; ಅದರಲ್ಲೂ ಬೆಲೆಯುಳ್ಳ ವಸ್ತ್ರಾಲಂಕಾರಗಳನ್ನಿಟ್ಟುಕೊಂಡು ಸ್ವರ್ಗದಲ್ಲಿರುವ ಅಪ್ಸರೆಯರನ್ನು

ನಾಚಿಸುವಷ್ಟು ಸೌಂದರ್ಯವನ್ನು ಪಡೆದಿದ್ದಳು. ಆಕೆಯು ಸಾಧುಗಳ ತೀರ ಹತ್ತಿರಕ್ಕೆ ಬಂದು ನಿಂತಳು ಆಕೆಯು ಮುಡಿದ ಪೂಮಾಲೆಗಳ ಹಾಗು ತೊಡೆದ ಸೌಗಂಧಿಕ ದ್ರವ್ಯಗಳ ಪರಿಮಳವು ಆ ಪ್ರದೇಶವನ್ನೆಲ್ಲ ವ್ಯಾಪಿಸಿದರೂ ಸಾಧುಗಳ ಮೇಲೆ ಅದರ ಪರಿಣಾಮವಾಗಲಿಲ್ಲ. ಬಳಿಕ ಆ ಸುಂದರಿಯು ಕೋಮಲ ಕಂಠ ದಿಂದ ಗಾನಮಾಡಲಿಕ್ಕಾರಂಭಿಸಿದಳು. ಅವಳ ಆ ಮನೋಹರ ಗಾನಾಲಾಪ ವನ್ನು ಕೇಳಿ ಗಂಧರ್ವರು ಕೂಡಾ ವಿಮಾನಾರೂಢರಾಗಿ ಆಕಾಶದಲ್ಲಿ ನಿಂತುಕೊಂ ಡಿರಬಹುದು. ಆದರೆ ನಮ್ಮ ಸಾಧುಗಳು ಆ ಗಾನಕಕ್ಕೆ ಲುಬ್ಧರಾಗಲಿಲ್ಲ. ಅವರ ನರ್ತನವು ಇಮ್ಮಡಿಸಿತು. ಸುಂದರಿಯು ತಾಸೆರಡು ತಾಸುಗಳವರೆಗೆ ನಿರೀ ಕ್ಷಿಸಿದಳು. ಆದರೆ ಸಾಧುಗಳ ಲಕ್ಷ್ಯವು ತನ್ನ ಕಡೆಗೆ ಸೆಳೆಯಲ್ಪಡದ್ದರಿಂದ ನಿರು ಪಾಯಳಾಗಿ—"ಭೋ ಸ್ವಾಮಿನ್, ಶರಣು ಬಂದಿದ್ದೇನೆ" ಎಂದು ನುಡಿದಳು. ಶರಣು ಎಂಬ ಶಬ್ದವು ಕಿವಿಗೆ ಬೀಳಲು ಸಾಧುಗಳು ಕಣ್ಣುತೆರೆದರು. ಆಗ ಆ ಸ್ತ್ರೀಯು ಮುಂದೊರೆದು ಸಂಭೋಗ ಸುಖಕ್ಕಾಗಿ ಅವರನ್ನು ಪ್ರಾರ್ಥಿಸಿದಳು! ಯಾರು ಜಗತ್ತಿನಲ್ಲಿಯ ಎಲ್ಲ ಸ್ತ್ರೀಯರನ್ನು ರಖುಮಾಯಿ ಸ್ವರೂಪರೆಂದೂ ಎಲ್ಲ ಪುರುಷರನ್ನು ಪಾಂಡುರಂಗ ಸ್ವರೂಪರೆಂದೂ ಭಾವಿಸಿರುವರೋ ಅವರಿಗೆ ವಿಕಾರವು ಹ್ಯಾಗೆ ಪ್ರಾದುರ್ಭವಿಸುವದು? ಆಗ ಸಾಧುಗಳು ಮತ್ತಿಷ್ಟು ನರ್ತನಮಾಡಲಾ ರಂಭಿಸಿದರು. ಸ್ತ್ರೀಯು ಬೆಪ್ಪಳಾಗಿ ಹೀಗೇಕೆ ಕುಣಿಯುವಿರೆಂದು ಕೇಳಿದಳು. ಅದಕ್ಕೆ ಅವರು—ಇಷ್ಟೊತ್ತಿನವರೆಗೆ ಪಾಂಡುರಂಗನೊಬ್ಬನೇ ನನ್ನ ಧ್ಯಾನದಲ್ಲಿ ದ್ದನು. ಈಗ ರಖುಮಾಯಿಯು ಬಂದದ್ದರಿಂದ ನನಗೆ ಹಿಡಿಯಲಾರದಷ್ಟು ಆನಂದ ವಾಗಿದೆ, ಎಂದು ಪ್ರತ್ಯುತ್ತರ ಕೊಟ್ಟರು. ಸಾಧುಗಳವರನ್ನು ಪರೀಕ್ಷಿಸಬೇಕೆಂಬ ದುರ್ಬುದ್ಧಿಯುಳ್ಳ ಕೆಲ ಜನರು ದೂರದಲ್ಲಿ ಮರೆಗೆ ನಿಂತುಕೊಂಡಿದ್ದರು. ಅವರಲ್ಲಿ ಒಬ್ಬನಿಗೆ ಸಜ್ಜನ ವೃತ್ತಿಯು ಬೀಜಭೂತವಾಗಿದ್ದಿತು. ಅವನೊಬ್ಬನು ಮಾತ್ರ ಸಾಧುಗಳವರ ಈ ವೈರಾಗ್ಯವನ್ನು ಸ್ಮರಿಸಿ ಪಶ್ಚಾತ್ತಾಪಪಟ್ಟು ಅವರ ಶಿಷ್ಯನಾ ದನು. ಉಳಿದವರು—ಇಂಥ ಸುಂದರಿಯು ತಾನಾಗಿಯೇ ಪ್ರಾರ್ಥಿಸುವಾಗ ಈ ರೀತಿ ಮಾತನಾಡಿದ್ದಕ್ಕೆ ಸಾಧುಗಳನ್ನು ಬಗೆ ಬಗೆಯಿಂದ ಜರೆದಾಡಿ ಮನೆಗೆ ಹೋದರು. ಹೇಳತಕ್ಕ ತಾತ್ಪರ್ಯವಿಷ್ಟೇ; ಸದ್ವೃತ್ತಿಯು ಯಾವನಿಗೆ ಸೇರು ವದೋ ಅವನು ಮಾತ್ರ ಸಾಧುಗಳ ಹಾಗು ತೀರ್ಥಾದಿಗಳ ಬೆಲೆಯನ್ನು ತಿಳಿದು ಕೊಳ್ಳುವನು.

ಪ್ರಿಯ ವಾಚಕರೇ, ಇಂಥ ಘನತರವಾದ ಯೋಗ್ಯತೆಯುಳ್ಳ ಸಾಧುಗಳಿಗೆ ಆಶ್ರಯಕೊಟ್ಟ ತೀರ್ಥ-ಕ್ಷೇತ್ರಗಳ ಯೋಗ್ಯತೆಯನ್ನೇನು ಬಣ್ಣಿಸಬೇಕು? ಆ ಸ್ಥಳಗಳ ದರ್ಶನ ಮಾತ್ರದಿಂದಲೇ ಪ್ರಾಣಿಗಳಲ್ಲಿ ಸದ್ಬುದ್ಧಿಯು ಹುಟ್ಟಬಹುದಲ್ಲವೇ? ಆದರೆ ಅದು ಯಾವಾಗ? ನಮಗೆ ಪವಿತ್ರತೆಯ ಇಚ್ಛೆಯು ಯಾವಾಗ ಆಗುವದೋ ಆಗ್ಗೇ ಅಲ್ಲವೇ ತೀರ್ಥಗಳ ದರ್ಶನದಿಂದ ಸದ್ಬುದ್ಧಿ ಹುಟ್ಟುವದು? ಕಬೀರದಾಸರ ಮಗನಾದ ಕಮಾಲದಾಸನು ತೀರ್ಥ-ಯಾತ್ರೆಗಳನ್ನು ಮಾಡಿದ ವರ್ಣನೆಯು ಭಕ್ತಿವಿಜಯ ಗ್ರಂಥದಲ್ಲಿ ವಿಶದವಾಗಿ ಇರುವದು. ತೀರ್ಥ-ಕ್ಷೇತ್ರಗಳ ದರ್ಶನದಿಂದ ಆತನ ಆನಂದವು ಹ್ಯಾಗೆ ಉಕ್ಕೇರಿತೆಂಬದನ್ನೂ ದೇವದರ್ಶನದಲ್ಲಿ ಆತನ ಕಂಠವು ಬಿಗಿದು ಬಂದದ್ದನ್ನೂ ನೋಡಿದರೆ ಭಾವಿಕರಿಗೆ ತೀರ್ಥಾಟನದ ಮಹತ್ವವೆಷ್ಟಿರುತ್ತದೆಂಬದು ವ್ಯಕ್ತವಾಗುತ್ತದೆ. ಭಾವನೆಯಿಲ್ಲದೆ ಬರಿಯ ತೀರ್ಥದಲ್ಲಿ ಮುಳುಗಿ ಬಂದರೆ ಅಥವಾ ದೇವದರ್ಶನ ತಕ್ಕೊಂಡರೆ ಆಗತಕ್ಕಷ್ಟು ಪ್ರಯೋಜನವಾಗುವದಿಲ್ಲ. ಅಂದರೆ ಪವಿತ್ರತೆಯು ನೆಲೆಗೊಳ್ಳುವದಿಲ್ಲ. ಹೃದಯವು ಶುದ್ಧವಾದರೆ ತೀರ್ಥ-ಯಾತ್ರೆಗಳನ್ನು ಮಾಡಿದ್ದು ಫಲಿಸಿತೆಂದು ತಿಳಿಯತಕ್ಕದ್ದು. ಹೃದಯವು ಶುದ್ಧವಾಗುವದಕ್ಕೋಸ್ಕರವಾಗಿಯೇ ಯಾತ್ರಾಪದ್ಧತಿಯಲ್ಲಿ ಯಾತ್ರೆಗೆ ಹೋದವರು ತಮಗೆ ಅತ್ಯಂತ ಬಾಧಕವಿರುವ ದುರ್ಗುಣವನ್ನು ಬಿಡಬೇಕೆಂದು ನಿಯಮವಿರುವದು. ಈಗ ಆ ನಿಯಮವು ಸುಧಾರಣೆ ಹೊಂದಿ ಯಾವದಾದರೊಂದು ತಮಗೆ ಸೇರದ ಪದಾರ್ಥ ಬಿಡುವದರಲ್ಲಿ ರೂಪಾಂತರಿಸಿರುತ್ತದೆ. ಹೃದಯದಲ್ಲಿಯ ದುರ್ಗುಣ ಬಿಡದೆ ಯಾವದೊಂದು ಕಾಯಿಪಲ್ಲೆ ಬಿಟ್ಟರೆ ಏನು ಪ್ರಯೋಜನವೆಂಬದನ್ನು ಯಾತ್ರಿಕರು ಮನಸ್ಸಿಗೆ ತಂದುಕೊಳ್ಳುವದಿಲ್ಲ; ಪರಸ್ತ್ರೀಗಮನ ಮಾಡುವವರು ಅದುಷ್ಕರ್ಮಕ್ಕೆ ತಿಲಾಂಜಲಿ ಕೊಡಬೇಕು. ಪರಧನ ಎತ್ತಿಹಾಕುವವರು, ಸುಳ್ಳು ಸಾಕ್ಷೀ ನುಡಿಯುವವರು ತಮ್ಮ ತಮ್ಮ ದುಷ್ಕೃತ್ಯಗಳನ್ನು ತ್ಯಜಿಸಿದರೆ, ತೀರ್ಥಗಳ ನಿಜವಾದ ಮಹತ್ವವನ್ನು ತಿಳಿದಂತಾಗುವದು. ಇರಲಿ.

ಇದುವರೆಗೆ ವಿವೇಚಿಸಿದ ಮೇರೆಗೆ ತೀರ್ಥ ಕ್ಷೇತ್ರಗಳು ಭಾವಿಕರ ಭಾವನೆಯನ್ನು ದೃಢಗೊಳಿಸಿ ಅವರನ್ನು ಪಾಪರಹಿತರನ್ನಾಗಿ ಮಾಡಲು ಸಾಧನಗಳಾಗಿರುತ್ತವೆ. ತೀರ್ಥಗಳ ಭವ್ಯ ದರ್ಶನ, ಅಲ್ಲಿಯ ಸ್ಥಳಮಾಹಾತ್ಮ್ಯ, ಮೊದಲಾದವುಗಳು ಭಾವಿಕ ಮನುಷ್ಯನ ಮೇಲೆ ಸತ್ಪರಿಣಾಮವನ್ನುಂಟು ಮಾಡುವವು. ಎಂಥ ನಾಸ್ತಿಕನಾದರೂ ಪವಿತ್ರ ಸ್ಥಳಗಳಿಗೆ ಹೋದರೆ ಆ ಸ್ಥಳದಲ್ಲಿರುವ ವರೆಗಾದರೂ ಅವನ ಮನಸ್ಸು ಶಾಂತವಿರುತ್ತದೆ. ಹೀಗೆ ಆ ಮನುಷ್ಯನು ಮೇಲಿಂದ ಮೇಲೆ ಹೊಸ

ಹೊಸ ತೀರ್ಥ-ಕ್ಷೇತ್ರಗಳನ್ನು ಸಂದರ್ಶಿಸುತ್ತ ನಡೆದರೆ ಅವನ ಮನಸ್ಸಿಗೆ ನಿಜವಾದ ಶಾಂತಿಯು ಸಿಗವದೆಂಬಬಂರಲ್ಲಿ ಸಂಶಯವಿಲ್ಲ ಮನಸ್ಸಿಗೆ ಶಾಂತಿ ದೊರೆಯುವದೇ ಸತ್ಕರ್ಮಗಳನ್ನು ಮಾಡಿದ್ದರ ಹೆಗ್ಗುರುತು. ತೀರ್ಥಾಟನೆಯು ಪ್ರಾಮುಖ್ಯವಾದ ಸತ್ಕರ್ಮವಾದ್ದರಿಂದ ತೀರ್ಥಯಾತ್ರೆಗಳನ್ನು ನಿಜವಾಗಿ ಮಾಡಿದವರಿಗೆ ಅದು ಸಿಗಲೇ ಬೇಕು. ತೀರ್ಥಯಾತ್ರೆಗಳ ಮಹತಿಯು ಇದೇ ಆಗಿರುತ್ತದೆ.

ಒಟ್ಟಿಗೆ ತೀರ್ಥ-ಕ್ಷೇತ್ರಗಳಲ್ಲಿ ಭಗವತ್ ಸಾನ್ನಿಧ್ಯವಿರುತ್ತದೆ. ಅಲ್ಲಿಗೆ ಭಕ್ತಿಯಿಂದ ಹೋಗುವ ಮನುಷ್ಯನಿಗೆ ಏನಾದರೂ ಲಾಭವಾಗದೆ ಹೋಗುವದಿಲ್ಲ. ಯಾತ್ರಿಕರಿಗೆ ನಾನಾ ದೇಶಗಳ ಅವಲೋಕನದಿಂದ ವ್ಯವಹಾರಚತುರತೆಯೂ ಸೃಷ್ಟಿಜ್ಞಾನವೂ ಆಗುವವೆಂಬದು ನಿಶ್ಚಯವು; ಇವೆಲ್ಲವುಗಳಿಗಿಂತ ಮನಸ್ಸಿನ ಪವಿತ್ರತೆಯು ವಿಶೇಷ ಮಹತ್ವದ್ದಿರುತ್ತದೆ. ಈ ಪವಿತ್ರತೆಯು ಸಾಧಿಸಿದರೆ ಮೋಕ್ಷ ಜ್ಞಾನವು ಸಾಧಿಸಿದ್ದರ ಸಾರ್ಥಕ್ಯವಾಗುತ್ತದೆ.

## ಲೇಖಾಂಕ ೪.

### ತೀರ್ಥವಿಧಿಗಳ ವಿಚಾರವು.

ಹಿಂದಿನ ಮೂರು ಲೇಖಾಂಕಗಳಲ್ಲಿ ತೀರ್ಥ ಕ್ಷೇತ್ರಗಳ ಯಥಾರ್ಥ ಸ್ವರೂಪದ ದಿಗ್ದರ್ಶನ ಮಾಡಿರುತ್ತದೆ. ಪ್ರಸ್ತುತದ ಲೇಖದಲ್ಲಿ ತೀರ್ಥವಿಧಿಗಳ ವಿಚಾರವನ್ನು ಮಾಡುವದಿರುತ್ತದೆ.

ನಮ್ಮ ಧರ್ಮಶಾಸ್ತ್ರಗಳಲ್ಲಿ ಮುಖ್ಯವಾಗಿ ಹೇಳಿದ ತೀರ್ಥಕ್ಷೇತ್ರಗಳಲ್ಲಿ ಮಾಡತಕ್ಕ ವಿಧಿಗಳಲ್ಲಿ ಎರಡು ಅಂಗಗಳಿರುತ್ತವೆ. ಒಂದನೇದು ಕ್ಷೌರವಿಧಿ; ಎರಡನೆಯದು ಶ್ರಾದ್ಧವಿಧಿ; ಈ ಎರಡು ಅಂಗಗಳಲ್ಲಿ ಬಹುತರ ತೀರ್ಥ ಕ್ಷೇತ್ರಗಳಲ್ಲಿ ಮಾಡತಕ್ಕ ಎಲ್ಲ ವಿಧಿಗಳು ಸಮಾವೇಶವಾಗುತ್ತವೆ. ಇನ್ನು ಕೆಲವು ಕ್ಷೇತ್ರಗಳಲ್ಲಿ ಕ್ಷೇತ್ರಸ್ಥ ಮುಖ್ಯ ದೇವರಿಗೆ ಅಭಿಷೇಕ-ಅರ್ಚನಾದಿಗಳನ್ನು ಮಾಡುವ-ಮಾಡಿಸುವ ಪದ್ಧತಿಯಿರುತ್ತದೆ. ಇದು ದೇವತಾ ವಿಷಯದ ಕಾರ್ಯವೆಂಬದನ್ನು ಬೇರೆ ಹೇಳುವ ಕಾರಣವಿಲ್ಲ.

ತೀರ್ಥ ವಿಧಿಯ ಮುಖ್ಯ ಉದ್ದೇಶವು ಯಾತ್ರಿಕನ ಸ್ವಂತದ ವಿಷಯವಾಗಿ ಹಾಗು ಅವನ ಪಿತೃಗಳ ವಿಷಯವಾಗಿ ಇರುತ್ತದೆ. ಈ ಉದ್ದೇಶವು ಸಫಲವಾಗುವಂತೆ ಮೇಲೆ ಉಲ್ಲೇಖಿಸಿದ ಎರಡು ಅಂಗಗಳನ್ನೇ ನಮ್ಮ ಪೂರ್ವಜರು ಗ್ರಾಹ್ಯವಾಗಿ ಹಿಡಿದಿರುವರು; ಮೊದಲನೆಯ ಅಂಗದಿಂದ ಯಾತ್ರಿಕನ ಸ್ವಂತ ದೇಹದಲ್ಲಿ ಪವಿತ್ರತೆಯುಂಟಾಗುವದು. ಎರಡನೆಯ ಅಂಗದಿಂದ ಪಿತೃಗಳು ಉದ್ಧೃತರಾಗುವರು. ಆದ್ದರಿಂದ ನಮ್ಮ ವೈದಿಕ ಧರ್ಮವನ್ನು ಮಾನ್ಯ ಮಾಡುವ ಆಸ್ತಿಕರು ತೀರ್ಥಕ್ಷೇತ್ರಗಳಲ್ಲಿ ಇವೆರಡೂ ವಿಧಿಗಳನ್ನು ಆಚರಿಸೇ ತೀರತಕ್ಕದ್ದು. ಕೆಲ ಕೆಲವು ತೀರ್ಥಗಳಲ್ಲಿ ಕ್ಷೌರವಿಧಿಯೇ ಪ್ರಾಮುಖ್ಯವಿರುವದು. ಕೆಲವುಗಳಲ್ಲಿಗೌಣವಾಗಿರುವದು. ಉದಾಹರಣಾರ್ಥವಾಗಿ ಪ್ರಯಾಗ ಕ್ಷೇತ್ರದಲ್ಲಿ ವಪನವೇ ಮುಖ್ಯವಿರುವದು "ಕಿಂ, ಗಯಾ ಪಿಂಡದಾನೇನ ಕಾಶ್ಯಾಂ ವಾ ಮರಣೇನ ಕಿಮ್‌। ಕಿಂ' ಕುರುಕ್ಷೇತ್ರ ದಾನೇನ ಪ್ರಯಾಗೇ ವಪನಂ ಯದಿ ||೧|| ಅಂದರೆ ಗಯೆಯಲ್ಲಿ ಪಿಂಡದಾನ, ಕಾಶಿಯಲ್ಲಿ ಮರಣಹೊಂದೋಣ, ಕುರುಕ್ಷೇತ್ರದಲ್ಲಿ ದಾನ

ಮಾಡೋಣ ಪ್ರಯಾಗದಲ್ಲಿ ವಪನ ವಿಧಿ ಇವು ಮುಖ್ಯಗಳಾಗಿರುವದರಿಂದ ಪ್ರಯಾಗದಲ್ಲಿ ವಪನವಿಧಿಯು ಆದ ಬಳಿಕ ಉಳಿದವುಗಳ ಪ್ರಯೋಜನವೇನೆಂದು ಪ್ರಶ್ನೆ ಮಾಡಿ ಋಷಿಗಳು ಪ್ರಯಾಗದಲ್ಲಿಯ ಈ ವಿಧಿಯ ಶ್ರೇಷ್ಠತ್ವವನ್ನು ವರ್ಣಿಸಿರುತ್ತಾರೆ. ಆದ್ದರಿಂದ ಪ್ರಯಾಗಕ್ಕೆ ಹೋದ ಹೆಂಗಸಾಗಲಿ, ಗಂಡಸಾಗಲಿ, ತರುಣನಾಗಲಿ, ವೃದ್ಧನಾಗಲಿ, ಬಾಲಕನಾಗಲಿ, ವಿಧವೆಯಾಗಲಿ, ಸುಮಂಗಲೆಯಾಗಲಿ, ಕುಮಾರಿಕೆಯಾಗಲಿ ಎಲ್ಲರೂ ಈ ವಿಧಿಯನ್ನು ಆಚರಿಸಲೇ ಬೇಕಾಗುತ್ತದೆ. ಆದರೆ ಆ ವಿಧಿಯನ್ನು ಆಚರಿಸುವ ವಿಧಾನಗಳು ಮಾತ್ರ ಬೇರೆ ಬೇರೆ ಜನರಿಗೆ ಬೇರೆ ಬೇರೆ ಪ್ರಕಾರಗಳಿಂದಿರುತ್ತವೆ.

ಹೀಗೆ ಪ್ರಯಾಗದಲ್ಲಿ ವಪನವೇ ಪ್ರಾಮುಖ್ಯವಾದರೆ ವಪನಕ್ಕೆ ಕೆಲವು ಕ್ಷೇತ್ರಗಳಲ್ಲಿ ನಿಷೇಧವಿರುತ್ತದೆ. "ಮುಂಡನಂಚೋಪವಾಸಂಚ ಸರ್ವಕ್ಷೇತ್ರೇಷ್ವಯಂ ವಿಧಿಃ | ವರ್ಜಯಿತ್ವಾ ಕುರುಕ್ಷೇತ್ರಂ ವಿಶಾಲಾಂ ವಿರಜಾಂ ಗಯಾಂ" || ೧ ||ಅಂದರೆ ಕುರುಕ್ಷೇತ್ರ, ವಿಶಾಲಕ್ಷೇತ್ರ, ವಿರಜಾಕ್ಷೇತ್ರ, ಗಯಾಕ್ಷೇತ್ರ, ಇವುಗಳಲ್ಲಿಮಾತ್ರ ವಪನವಿಧಿ ಮಾಡದೆ ಉಳಿದ ಕ್ಷೇತ್ರಗಳಲ್ಲಿ ಆಚರಿಸಬೇಕು ಎಂದು ಹೇಳಿರುತ್ತದೆ. ಅಂದಬಳಿಕ ತೀರ್ಥವಿಧಿಯಲ್ಲಿ ಮೊದಲನೇ ಅಂಗಕ್ಕೆ ಅಪವಾದಾತ್ಮಕ ಸ್ಥಳಗಳು ನಾಲ್ಕೇ ಆದ್ದರಿಂದ ಉಳಿದ ಸಮಸ್ತ ತೀರ್ಥ ಕ್ಷೇತ್ರಗಳಲ್ಲಿ ಇವೆರಡು ಅಂಗಗಳಿಗೆ ಪ್ರಾಶಸ್ತ್ಯವಿರುತ್ತದೆಂಬದು ಸ್ಪಷ್ಟವಾಗಿ ಧ್ವನಿತವಾಗುತ್ತದೆ.

ತೀರ್ಥವಿಧಿಯ ಮೊದಲನೇ ಅಂಗದಲ್ಲಿ ಕ್ಷೌರ ಹಾಗು ಉಪವಾಸ ಇವು ಬರುವದರಿಂದ ದೇಹದ ಪವಿತ್ರತೆಯ ಕಡೆಗೆ ನಮ್ಮ ಪೂರ್ವಜರು ಎಷ್ಟು ಲಕ್ಷ್ಯ ಕೊಡುತ್ತಿದ್ದರೆಂಬದು ವ್ಯಕ್ತವಾಗುತ್ತದೆ. ಉಪವಾಸದಿಂದ ದೇಹದಲ್ಲಿಯ ಆಮಾಂಶಾದಿ ಅನಿಷ್ಟಕಾರಕ ಪದಾರ್ಥಗಳು ಭಸ್ಮೀಭೂತವಾಗುತ್ತವೆ. ಕ್ಷೌರದಿಂದ ತ್ವಚೆಯ ಮೇಲಿನ ಕಶ್ಮಲವು ಹೊರಟು ಹೋಗುತ್ತದೆ. "ಸರ್ವೇಷುಗಾತ್ರೇಷು ಶಿರಃಪ್ರಧಾನಂ" ಎಂದು ಹೇಳಿರುವದರಿಂದ ತಲೆಗೆ ಕ್ಷೌರವಿಧಿಯು ಶಾಸ್ತ್ರಸಮ್ಮತವಾಗಿರುವದು. ಇದಲ್ಲದೆ ಯಾವ ಯಾವ ಅವಯವಗಳಲ್ಲಿ ಕೌರವನ್ನು ಮಾಡಿಸಬೇಕೆಂಬುದಕ್ಕೆ ಋಷಿವಚನಗಳು ಪ್ರಮಾಣಭೂತವಾಗಿರುತ್ತವೆ "ಮುಂಡನಂ ಸರ್ವಗಾತ್ರೇಷು ಕಕ್ಷೋಪಸ್ಥ ಶಿಖಾಂವಿನಾ" ಇತ್ಯಾದಿ ವಚನಗಳಿರುತ್ತವೆ. ಋಷಿವಚನಗಳೆಂದರೆ ಆಪ್ತವಾಕ್ಯಗಳೆಂದು ತಿಳಿಯುವ ಮಹನೀಯರು ಅವುಗಳಂತೆ ಆಚರಿಸಿಯೇ ತೀರುವರು. ಆದರೆ ನಾಸ್ತಿಕರಾದ ಧರ್ಮಲಂಡರು ಮನಬಂದಂತೆ ವರ್ತಿಸಿ, ತಮ್ಮ ಹಾಗು ಜಗತ್ತಿನ ನಾಶಕ್ಕೆ ಕಾರಣರಾಗುವರು. ತೀರ್ಥವಿಧಿಯಲ್ಲಿ ದೇಹ

ಶುದ್ಧಿಯ ಕಡೆಗೆ ಮೊದಲು ಲಕ್ಷ್ಯಗೊಟ್ಟದ್ದನ್ನು ನೋಡ್ಡಿದರೆ ಪ್ರತಿಯೊಂದು ಧಾರ್ಮಿಕ ಕಾರ್ಯದಲ್ಲಿ ಕಾಯ ಶುದ್ಧಿಯು ಅವಶ್ಯವೆಂಬುದು ವ್ಯಕ್ತವಾಗುತ್ತದೆ. ವಸ್ತುಸ್ಥಿತಿಯು ಹೀಗಿದ್ದು, ಈಗ ನಾವು ನಡೆಯುತಿರುವದನ್ನು ನೋಡಿದರೆ ನಮ್ಮ ಆಚರಣೆಯು ಯಾತಕ್ಕಿಂತಲೂ ಕಡೆಯಾಗುತ್ತದೆ. ದೇಹ ಶುದ್ಧಿ ಎಂಬದು ಎಂತಹದೋ ಅದರ ರಹಸ್ಯವೇ ನಮಗೆ ತಿಳಿಯುವಹಾಗಿಲ್ಲ. ಗೇರಸೋಪ ಮೊದಲಾದ ಉತ್ತಮೋತ್ತಮ ಸೋಪಗಳನ್ನು ಹಚ್ಚಿ ಮೈಉಜ್ಜಿಕೊಂಡು ಜಳಕಮಾಡಿದರೆ ದೇಹಶುದ್ಧಿಯಾಯಿತೆಂದು ತಿಳಿಯಹತ್ತಿದ್ದೇವೆ. ಆದರೆ ಇದರಿಂದ ದೇಹಶುದ್ಧವಾಗಲಾರದೆಂಬದು ನಮ್ಮ ಲಕ್ಷ್ಯದಲ್ಲಿಯೇ ಬರುವದಿಲ್ಲ. ಯಾಕೆಂದರೆ ನಮ್ಮ ನಾಲಿಗೆಯು ರುಚಿಕರ ಪದಾರ್ಥಗಳ ಸೇವನಕ್ಕೆ ಹವಣಿಸಹತ್ತಿದೆ ಜಿಹ್ವಾಚಾಪಲ್ಯದಿಂದ ನಿಷಿದ್ಧ ಪದಾರ್ಥಗಳು ಎಗ್ಗಿಲ್ಲದೆ ಬಳಿಕೆಯಲ್ಲಿ ಬಂದವು. ಸರ್ವರೂ ಅವನ್ನು ಸೇವಿಸಹತ್ತಿದರು; ಯಾವ ಪದಾರ್ಥಗಳ ಸೇವನೆಯಿಂದ ಪ್ರಕೃತಿಯು ಜಡವಾಗಿ ವಿಶೇಷ ಆಮ ಸಂಚಯಕ್ಕೆ ಇಲ್ಲವೆ ಬೇರೆ ದೋಷಗಳಿಗೆ ಒಳಗಾಗುವದೋ ಆ ಪದಾರ್ಥಗಳನ್ನು ಶಾಸ್ತ್ರಕಾರರು ನಿಷಿದ್ಧಿಸಿ ಬಿಟ್ಟಿರುವರು. ಅಂದರೆ ಅವನ್ನು ಯಾರೂ ತಿನ್ನಲಾಗದೆಂದು ನಿಯಮ ಮಾಡಿರುವರು, ಆ ನಿಯಮವಂತೂ ಈಗ ಹೇಳಹೆಸರಿಲ್ಲದೆ ಹೋಗಿರುವದು, ಏಕಾದಶಿ ಮೊದಲಾದ ಉಪವಾಸ ಮಾಡತಕ್ಕ ದಿವಸಗಳು ಮರೆತು ಹೋದವು. ಯಾವ ವಾರವಿದ್ದರೇನು? ಯಾವ ತಿಥಿಯಿದ್ದರೇನು? ಜಠರಾಗ್ನಿಯನ್ನು ತೃಪ್ತಿಬಡಿಸುವ ನಮ್ಮ ಕೆಲಸವು ಸರ್ವದಾ ನಡೆದೇ ಇರುತ್ತದೆ. ಮೊದಲೇ ದುಷ್ಟ ಪದಾರ್ಥಗಳ ಸೇವನ, ಅದರಲ್ಲೂ ಉಪವಾಸಾದಿ ವ್ರತಗಳ ಅಭಾವ; ಅಂದ ಬಳಿಕ ನಮ್ಮ ದೇಹಸ್ಥಿತಿಯು ಅನಾರೋಗ್ಯವನ್ನು ಹೊಂದಬಾರದೆಂದರೆ ಹ್ಯಾಗೆ ಬಿಟ್ಟೀತು? ಆಮಾಂಶವು ಹೆಚ್ಚಾಗಿ ದೇಹವನ್ನು ನಾನಾ ಬಗೆಯ ರೋಗಗಳಿಗೆ ಗುರಿಮಾಡುವದು. ಊರೂರಿಗೆ ವೈದ್ಯರೂ, ಸರಕಾರದವರೂ ಧರ್ಮಾರ್ಥ ಇಟ್ಟ ದವಾಖಾನೆಗಳೂ ಹೆಚ್ಚುತ್ತ ನಡೆದ ಮಾನದಿಂದ ರೋಗಿಗಳ ಸಂಖ್ಯೆಯೂ ಹೆಚ್ಚುತ್ತ ನಡೆದಿರುತ್ತದೆ. ಇದಕ್ಕೆ ಕಾರಣವೇನೆಂಬದನ್ನು ಒಡೆದು ಹೇಳುವ ಕಾರಣವಿಲ್ಲ.

ಈ ಪ್ರಕಾರ ನಾವು ನಿಷಿದ್ಧ ಪದಾರ್ಥಗಳ ಸೇವನ ಮಾಡಿ,ಹಾಗು ಆಹಾರ ಪ್ರತಿಬಂಧವಿದ್ದ ದಿವಸಗಳಲ್ಲಿ ಆಹಾರ ಸ್ವೀಕಾರಮಾಡಿ ದೇಹದ ಪವಿತ್ರತೆಯನ್ನು ಕಳಕೊಂಡಿರುತ್ತೇವೆಂದು ನಿರ್ವಿವಾದವಾಗಿ ಒಪ್ಪಬೇಕಾಗಿರುತ್ತದೆ; ದೇಹದಲ್ಲಿ ಅನಾರೋಗ್ಯಕರ ಪದಾರ್ಥಗಳನ್ನುಂಟುಮಾಡಿಕೊಳ್ಳುವದು ಒಂದು

ಬಗೆಯ ಪಾಪವಿರುತ್ತದೆ. ಹೊಲಸಾದ ಬಟ್ಟೆಗಳನ್ನು ಧರಿಸುವದು ಸಹ ಪಾಪವೆಂದು ಶ್ರೀ ಸಮರ್ಥ ರಾಮದಾಸರು ದಾಸಬೋಧವೆಂಬ ಗ್ರಂಥದಲ್ಲಿ ಹೇಳಿರುವರು. ಬಟ್ಟೆಗೆ ಹೇಳತಕ್ಕ ತಾತ್ಪರ್ಯವೇನಂದರೆ ತೀರ್ಥವಿಧಿಯ ಮೊದಲನೆಯ ಅಂಗವು ದೇಹದ ಪವಿತ್ರತೆಯನ್ನು ಸೂಚಿಸುತ್ತದೆ. ಮತ್ತು ನಿರಂತರ ದೇಹದ ಪವಿತ್ರತೆಯನ್ನು ಕಾಯ್ದುಕೊಳ್ಳಬೇಕೆಂದು ಬೋಧಿಸುತ್ತದೆ.

ಇನ್ನು ಎರಡನೆಯ ಅಂಗವು ಶ್ರಾದ್ಧ ವಿಧಿಯಾಗಿರುವದು; ಈವಿಧಿಯು ಅತ್ಯಂತ ಮಹತ್ವದ್ದಿರುವದು. ಶ್ರಾದ್ಧವು ಪಿತೃಗಳ ಪ್ರೀತ್ಯರ್ಥವಾಗಿ ಇರುತ್ತದೆಂಬದನ್ನು ಬರೆಯುವ ಕಾರಣವಿಲ್ಲ. ಈಗಿನ ಕಾಲದಲ್ಲಿ ಪಿತೃಗಳು ಜೀವದಿಂದಿರುವಾಗಲೆ ಪ್ರೀತಿಸದ ನಾವು ಅವರು ಸತ್ತ ಬಳಿಕ ಅವರನ್ನು ಪ್ರೀತಿಸುತ್ತೇವೆಂದು ಹೇಳುವದಕ್ಕೆ ವಂಧ್ಯಾಪುತ್ರನ ಉಪಮೆಯನ್ನೇ ಕೊಡಬಹುದಾಗಿದೆ. ಯಾವ ತಾಯಿ-ತಂದೆಗಳು ನಮ್ಮ ಜನ್ಮದಾರಭ್ಯ ಕಷ್ಟಪಟ್ಟು ಸಂರಕ್ಷಿಸಿ ನಮ್ಮ ಜೀವನಕ್ಕೆ ತಕ್ಕ ಸಲಕರಣೆಗಳನ್ನು ಕಲ್ಪಿಸಿ ಕೊಡುವರೋ, ಆ ತಾಯಿ-ತಂದೆಗಳನ್ನು ನಾವು, ಅವರು ಸತ್ತಮೇಲೂ ಸಹ ಮರೆಯಬಾರದೆಂದು ಶಾಸ್ತ್ರಕಾರರು ಶ್ರಾದ್ಧವೆಂಬ ಸ್ಮಾರಕ ಪ್ರಸಂಗವನ್ನು ಧರ್ಮದಲ್ಲಿ ಸಮಾವೇಶ ಮಾಡಿರುವರು. ತಾಯಿ-ತಂದೆಗಳು ಇರುವಾಗ ಅವರ ಸಂರಕ್ಷಣೆ ಮಾಡಬೇಕೆಂಬದನ್ನು ಹೇಳಲೇಬೇಡ. ಈ ಶ್ರಾದ್ಧದ ಉದ್ದೇಶವು ಧಾರ್ಮಿಕೋನ್ನತಿಯ ಹಾಗು ವ್ಯಾವಹಾರಿಕ ಉನ್ನತಿಯ ದೃಷ್ಟಿಯಿಂದ ಮಹತ್ವದ್ದಿರುತ್ತದೆ. ಇಂಥ ಮಹತ್ವದ ವಿಧಿಯನ್ನು ತೀರ್ಥವಿಧಿಯಲ್ಲಿ ಸಮಾವೇಶ ಮಾಡಬೇಕಾದರೆ ಶಾಸ್ತ್ರಕಾರರ ಗೂಢ ಹೇತುವು ಏನಾದರೂ ಇರಲಿಕ್ಕೆ ಬೇಕೆಂಬದು ಸ್ವಾಭಾವಿಕವು. ಇದರಿಂದ ತಿಳಿದು ಬರುವದೇನಂದರೆ-ಮನುಷ್ಯನು ಕೇವಲ ತನ್ನ ಸ್ವಾರ್ಥವೊಂದೇ ಸಾಧಿಸುವದಕ್ಕಾಗಿ ತೀರ್ಥಾಟನ ಮಾಡದೆ ಪಿತೃಗಳ ಉದ್ಧಾರಕ್ಕೂ ಅವನು ತೀರ್ಥಾಟನ ಮಾಡಬೇಕಾಗುವದು. ಯಾಕಂದರೆ ತೀರ್ಥಾಟನ ಮಾಡತಕ್ಕವನ ಪಿತೃಗಣದಲ್ಲಿ ಎಲ್ಲರೂ ಸದ್ಗತಿಯನ್ನೇ ಹೊಂದಿರುತ್ತಾರೆಂಬ ನಿಯಮವಿಲ್ಲ. ಯಾರು ಯಾರು ಕ್ಷೀಣ ಪುಣ್ಯರಾಗಿರುವರೋ, ಅವರೆಲ್ಲರಿಗೆ ತೀರ್ಥ ಶ್ರಾದ್ಧದಿಂದ ಸದ್ಗತಿಯಾಗುವದು. "ಅಗ್ನ್ಯಾಹುತೇನ ದೇವಸ್ಥಾಃ ಸ್ವರ್ಗಸ್ಥಾ ವಿಪ್ರಭೋಜನೇ|ಯಮಸ್ಥಾಃ ಪಿಂಡದಾನೇನ ನರಕೇವಿ ಕಿರಂ ಪ್ರಜೇತ್|| ಇತ್ಯಾದಿ ಋಷಿ ವಚನಗಳೂ ಈ ಮಾತನ್ನು ವಿಶೇಷ ಬಲ ಪಡಿಸುತ್ತವೆ.

ಶ್ರಾದ್ಧವೆ ಶ್ರದ್ಧಾ ಯುಕ್ತವಾದದ್ದು; ಇದನ್ನು ಹಿರಣ್ಯ- ಆಮ, ಅನ್ನ ಎಂಬ ಮೂರು ಪ್ರಕಾರಗಳಿಂದ ಆಚರಿಸಲಿಕ್ಕೆ ಬರುತ್ತದೆ. ಇವುಗಳನ್ನು ಸ್ಥಾನಮಾನ, ಕಾಲಮಾನ ಇವುಗಳಿಗನುಸಾರವಾಗಿ ಉಪಯೋಗಿಸಬೇಕಾಗುವದು. ಇದನ್ನು ಶಾಸ್ತ್ರಕಾರರು ವಿಶದವಾಗಿ ವಿವರಿಸಿರುವರು- ಮುಖ್ಯವಾಗಿ ಇದು ಪಿತೃ ಗಣಕ್ಕೆ ತೃಪ್ತಿಯನ್ನುಂಟು ಮಾಡತಕ್ಕಂಥ ಕೆಲಸವಾದ್ದರಿಂದ ಇದನ್ನು ಭಕ್ತಿ ಪುರಸ್ಸರವಾಗಿಯೇ ಆಚರಿಸಬೇಕಾಗುವದು. ಸುಧಾರಕಪಂಥದ ನಾಸ್ತಿಕರು ಈ ಮಾತಿಗೆ ನಗುವರೆಂದು ನಮ್ಮಲ್ಲಿಯು ಎಷ್ಟೋ ಜನರು ಶ್ರಾದ್ಧಾದಿಕರ್ಮಗಳನ್ನೇ ಆಚರಿಸುವದಿಲ್ಲ. ನಾವು ಇಲ್ಲಿ ಶ್ರಾದ್ಧ ನಿಮಿತ್ತವಾಗಿ ಪಿಂಡದಾನ ಮಾಡಿದರೆ ಅಥವಾ ಬ್ರಾಹ್ಮಣರಿಗೆ ಭೋಜನ ಮಾಡಿಸಿದರೆ ಸ್ವರ್ಗದಲ್ಲೋ ಅಥವಾ ಯಮ ಲೋಕದಲ್ಲೋ; ಅಥವಾ ಮತ್ಯಾವ ಲೋಕದಲ್ಲೋ ಇದ್ದ ಪಿತೃಗಳಿಗೆ ಹ್ಯಾಗೆ ಸೌಖ್ಯವಾಗುವದೆಂದು ಅವರು ವಿಚಾರ ಮಾಡುತ್ತಿರುವರು. ಈಶ್ವರೀ ನಿಯಮಗಳ ಅನುಭವವಿಲ್ಲದ ಅವರು ಹೀಗೆ ವಿಚಾರ ಮಾಡುವದಾದರೂ ಸ್ವಾಭಾವಿಕವೇ ಸರಿ. ಈ ಮಾತಿಗೆ ಒಂದು ವ್ಯಾವಹಾರಿಕ ದೃಷ್ಟಾಂತವನ್ನು ಕೊಡಬಹುದು; ಅದೇನಂರೆ, ಒಬ್ಬ ಮನುಷ್ಯನು ಯಾವದೋ ಒಂದು ಅಪರಾಧವ ಮಾಡಿ ಆ ಬಗ್ಗೆ ಸರಕಾರವು ವಿಧಿಸಿದ ದಂಡವನ್ನು ಕೊಡದೆ ಕಾರಾಗೃಹವಾಸವನ್ನು ಭೋಗಿಸುತ್ತಾನೆಂದು ತಿಳಿಯುವಾ; ಆದರೆ ಆತನ ಮಗನು ವಿವೇಕವುಳ್ಳವನಾಗಿ ತಂದೆಗೆ ಒದಗಿದ ದುಃಖವನ್ನು ತಪ್ಪಿಸುವದಕ್ಕಾಗಿ ದಂಡದ ಹಣವನ್ನು ಸರಕಾರದಲ್ಲಿ ತುಂಬಿದರೆ ಕೂಡಲೆ ತಂದೆಯು ಕಾರಾಗೃಹ ವಾಸವು ಮುಗಿಯುವದು. ಈ ಉದಾಹರಣೆಯಲ್ಲಿ ಮಗನು ಹಣ ಕೊಟ್ಟರೆ ತಂದೆಯು ಬಿಡುಗಡೆ ಹ್ಯಾಗೆ ಆಯಿತೆಂದು ಯಾರೂ ಶಂಕೆಯನ್ನು ತಕ್ಕೊಳ್ಳುವದಿಲ್ಲವಷ್ಟೇ; ಇದು ಹ್ಯಾಗೆ ಪ್ರತ್ಯಕ್ಷ ವ್ಯವಹಾರವು ನಡೆಯುವದೋ ಹಾಗೆ ಅಪ್ರತ್ಯಕ್ಷ ವ್ಯವಹಾರವೂ ನಡೆಯುವದು. ಪಾಪಿಷ್ಠ ತಂದೆಯು ಮಗನು ಪುಣ್ಯಕರ್ಮಗಳನ್ನಾಚರಿಸಿದರೆ ಆ ಪುಣ್ಯದಲ್ಲಿ ತಂದೆಗೆ ಭಾಗವು ಸಿಗುವದು. ಇದು ಈಶ್ವರೀ ನಿಯಮವು; ಈ ನಿಯಮವನ್ನು ನಮ್ಮ ಪುರಾಣಗಳು ಬಹಳವಾಗಿ ಸಾರುತ್ತಲಿವೆ ಆದ್ದರಿಂದ ಮಗನು ತೀರ್ಥಶ್ರಾದ್ಧವನ್ನು ಆಚರಿಸಿದರೆ ತಂದೆಗೆ ಸದ್ಗತಿ ದೊರೆಯಲೇ ಬೇಕಾಗುವದು.

ಈಶ್ವರೀಸೃಷ್ಟಿಯಲ್ಲಿ ಯಾವಸಂಗತಿಗಳೂ ನಿಯಮಬಿಟ್ಟು ನಡೆಯುವದಿಲ್ಲ; ಪುಣ್ಯ ಕರ್ಮಗಳಿಗೆ ಸೌಖ್ಯ—ಪಾಪ ಕರ್ಮಗಳಿಗೆ ದುಃಖ ಇವುತಕ್ಕ ಪ್ರತಿಫಲಗಳಾಗಿರುತ್ತವೆ. ಈ ಪ್ರತಿಫಲಗಳನ್ನು ನಾವು ಅನುಭವಿಸಿದರೂ ಯಾವ ಕರ್ಮಗಳನ್ನು

ಆಚರಿಸಬೇಕೆಂಬದು ನಮಗೆ ತೋರುವದಿಲ್ಲ. ಸ್ವಾಭಾವಿಕವಾಗಿ ಮನುಷ್ಯನಿಗೆ ಪಾಪ ಕರ್ಮಗಳು ಬೇಗ ಸಾಧಿಸುತ್ತವೆ. ಯಾಕಂದರೆ ಆಹಾರ-ನಿದ್ರಾ-ಭಯ-ಮೈಥುನ ಇವು ಜೀವಧಾರಣಮಾಡಿದ ಎಲ್ಲಪ್ರಾಣಿಗಳಿಗೆ ಸಮನಾಗಿಯೇ ಇರುವವು. ಇವು ಪ್ರಾಣಿಗಳ ಸ್ವಾಭಾವಿಕ ಒಲವಿನಲಿಂದರೆ ಜನ್ಮಸಿದ್ಧಹಕ್ಕು ಉಳ್ಳಕಾರ್ಯಗಳು; ಈ ಕಾರ್ಯದ ಕಡೆಗೆ ಪ್ರವೃತ್ತಿಯು ಬೇಗ ಆದಹಾಗೆ ಇವುಗಳ ಪ್ರತಿಬಂಧಕಕಾರ್ಯಗಳ ಕಡೆಗೆ ಆಗುವದಿಲ್ಲ, ಸಾಮಾನ್ಯವಾದೀ ಕರ್ಮಗಳನ್ನು ನಿಗ್ರಹಿಸುವದೇ ಮನುಷ್ಯತ್ವದ ಲಕ್ಷಣವು. ಹ್ಯಾಗಂದರೆ ಮನುಷ್ಯನಿಗೆ ಆಹಾರದಲ್ಲಿ ನಿಯಮ, ನಿದ್ರೆಯಲ್ಲಿ ನಿಯಮ, ಮೈಥುನದಲ್ಲಿ ನಿಯಮ ಸಾರಾಂಶ ನಿಯಮಬಿಟ್ಟು ಮನುಷ್ಯನು ಅತ್ತಿತ್ತ ಸರಿದಾಡುವಹಾಗಿಲ್ಲ. ಹಾಗೆ ಸರಿದಾಡಿದಲ್ಲಿ ಅದೇ ಪಾಪಕರ್ಮವೆನಿಸುತ್ತದೆ. ಇಂಲಿ. ಪ್ರಸ್ತುತ ವಿಷಯದಕಡೆಗೆ ಹೊರಳುವಾ.

ಈ ಪ್ರಕಾರ ತೀರ್ಥ ವಿಧಿಯ ಎರಡೂ ಅಂಗಗಳು ಪುಣ್ಯ ಪ್ರದಗಳಾಗಿರುವವು; ಇವುಗಳನ್ನು ಭಾವಿಕರಾದವರು ಮಾತ್ರ ಆಚರಿಸತಕ್ಕದ್ದು. ಯಾಕಂದರೆ ಅಭಾವಿಕರಿಗೆ ಕರ್ಮಗಳಲ್ಲಿ ಶ್ರದ್ಧೆಯಿರುವದಿಲ್ಲ. ಶ್ರದ್ಧೆಯ ವಿನಃ ಕರ್ಮದ ಫಲವು ಲಭಿಸುವದಿಲ್ಲ. ಆದ್ದರಿಂದ ನಿರರ್ಥಕವಾಗಿ ಶ್ರಮ ಪಟ್ಟಂತಾಗುತ್ತದೆ. ನಮ್ಮ ಈ ತಪ್ಪನ್ನು ನಾವು ತಿಳಿದುಕೊಳ್ಳದೆ ಪೂರ್ವಜರು ಹಾಕಿಟ್ಟ ಪದ್ಧತಿಗೆ ದೂಷಿಸುತ್ತೇವೆ. ಇದು ಎಷ್ಟರ ಮಟ್ಟಿಗೆ ಸಮಂಜಸವೆಂಬದನ್ನು ವಾಚಕರೇ ತರ್ಕಿಸತಕ್ಕದ್ದು. ಇರಲಿ.

ಮೇಲೆ ತೀರ್ಥ ವಿಧಿಯ ಮೊದಲನೆಯ ಅಂಗವಾದ ಕ್ಷೌರ ವಿಧಿಯ ವಿಚಾರವನ್ನು ವರ್ಣಿಸುವಾಗ ಸುವಾಸಿನಿಯರು ಸಹ ಈ ವಿಧಿಗೆ ಒಳಗಾಗಬೇಕೆಂಬದನ್ನು ಬರೆದಿರುತ್ತದಷ್ಟೇ; ಆದರೆ ಅದರ ಸ್ಪಷ್ಟೀಕರಣವನ್ನು ಇಲ್ಲಿ ಮಾಡುವದುಚಿತವಿರುತ್ತದೆ. ಎಲ್ಲ ಕ್ಷೇತ್ರಗಳಲ್ಲಿ ಸುಮಂಗಲೆಯರಿಗೆ ಸಾರ್ವತ್ರಿಕವಾಗಿ ಈ ವಿಧಿಯನ್ನು ಆಚರಿಸಬೇಕೆಂಬ ನಿಯಮವಿಲ್ಲ; ಪ್ರಯಾಗಕ್ಷೇತ್ರದಲ್ಲಿ ಮಾತ್ರ ಈ ನಿಯಮವನ್ನು ಆಚರಿಸಬೇಕೆಂಬ ಕಟ್ಟು ಇರುತ್ತದೆ. ಈ ವಿಧಿಯಾದರೂ ಸುಮಂಗಲೆಯರನ್ನು ವಿದ್ರೂಪಸ್ಥಿತಿಗೆ ಮುಟ್ಟಿಸುವಷ್ಟು ಕಠೋರವಾಗಿರುವದಿಲ್ಲ. ಇದಕ್ಕೆ ಮಂಗಲವಾಚಕ ಹೆಸರುಂಟಾಗಿರುವದು. ಶಾಸ್ತ್ರಕಾರರು ಇದಕ್ಕೆ ವೇಣೀದಾನವೆಂದು ಕರೆದಿರುವರು; ಪ್ರಯಾಗಕ್ಷೇತ್ರ ಪ್ರವೇಶಿಸಿದ ಸುಮಂಗಲೆಯರು ಈ ದಾನವನ್ನು ಕೊಡಲೇ ಬೇಕಾಗುವದು. "ಸ್ತ್ರೀಣಾಂ ಸಭರ್ತೃಕಾಣಾಂ ತು ಸರ್ವ ಪಾಪಾಪನುತ್ತಯೆ । ಪ್ರಯಾಗೇ ವಪನಂ ಕಾರ್ಯಂ ನಾನ್ಯಕ್ಷೇತ್ರೆ ಕದಾಚನ ॥ ಮುಂಡ

ನಂ ಮಂಡನಂ ವೇಣ್ಯಾಂ ಪತಿಮಂಡನ ಕಾಮ್ಯಯಾ || ೧ || ಎಂದರೆ ಸುಮಂಗಲೆಯರು ಪತಿಗೆ ಶ್ರೇಯಸ್ಕರವುಂಟಾಗುವದಕ್ಕೋಸ್ಕರ ವೇಣೀದಾನ ಕೊಡುವದು ಶಾಸ್ತ್ರವಿಹಿತವು. ಇದಲ್ಲದೆ ಈ ವೇಣಿದಾನ ಕೊಡತಕ್ಕ ಸ್ತ್ರೀಗೆ ಬರತಕ್ಕ ಫಲವೆಂದರೆ "ಯಸ್ಯಾ ವೇಣೀಭವೇದ್ದೈವಾತ್ತ್ರಿವೇಣೀ ತಟಲಂಬಿನೀ | ಸುಭಗಾ ಸುಪ್ರಜಾಢ್ಯಾ ಸಾ ಭವಿಷ್ಯತಿ ಪುನಃಪುನಃ ||" ಯಾವ ಸುಮಂಗಲೆಯು ತ್ರಿವೇಣಿಯಲ್ಲಿ ವೇಣೀದಾನವನ್ನು ಕೊಡುವಳೋ ಅವಳು ಪತಿಪ್ರಿಯಳಾಗಿ, ಪತಿವ್ರತೆಯಾಗಿ ಶಾಶ್ವತ ಸೌಭಾಗ್ಯವನ್ನನುಭವಿಸುವಳು.

ಇಂಥ ಮಹತ್ತರವಾದ ಫಲವು ಪ್ರಾಪ್ತವಾಗುತ್ತದೆ ಯೆಂದು ಋಷಿವಚನವು ಹೇಳುತ್ತದೆ. ಆದರೆ ವ್ಯವಹಾರದಲ್ಲಿ ಇದಕ್ಕೆ ವಿರುದ್ಧವಾದ ನೋಟವು ಕಂಡುಬರುತ್ತದೆ. ಆದ್ದರಿಂದ ಋಷಿವಚನವು ವ್ಯರ್ಥ ಇರುವದೋ ಅಥವಾ ಪ್ರತ್ಯಕ್ಷ ಕಾಣತಕ್ಕ ಸ್ಥಿತಿಯು ಸುಳ್ಳೋ ಎಂಬ ಸಂಶಯವುಂಟಾಗುವದು ಯಾವ ಸುಮಂಗಲೆಯು ತ್ರಿವೇಣಿಯಲ್ಲಿ ವೇಣೀದಾನ ಮಾಡಿ ತಿರುಗಿ ಊರಿಗೆ ಬರುವಷ್ಟರಲ್ಲಿ ವಿಧವೆಯಾದರೆ ತ್ರಿವೇಣಿಯಲ್ಲಿ ದಾನ ಮಾಡಿದ್ದರ ಫಲವು ಚನ್ನಾಗಿ ಬಂತೆಂದು ಹಲವರು ಪಶ್ಚಾತ್ತಾಪಕ್ಕೆ ಗುರಿಯಾಗುವರು; ಮತ್ತು ಕರ್ಮಗಳಲ್ಲಿ ಅಶ್ರದ್ಧೆಯನ್ನು ತಾಳುವರು. ಹೀಗಾಗಲಿಕ್ಕೆ ಮೇಲೆ ಉಲ್ಲೇಖಿಸಿದಂತೆ ಶ್ರದ್ಧಾ ವಿಹೀನವಾದ ಕರ್ಮವೇ ಕಾರಣವು. ಮನುಷ್ಯನು ಮನುಷ್ಯನ ವಿಷಯಕವಾಗಿ ಲಂಡತನ ಮಾಡಿದರೆ ನಡೆಯಬಹುದು ಆದರೆ ದೇವತಾ ವಿಷಯಕವಾಗಿ ಠಕ್ಕತನ ಮಾಡಿದರೆ ಸಾಗಲಾರದು. ಆದ್ದರಿಂದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಬೇಕಾದರೆ ಶ್ರದ್ಧಾದಿಂದಲೇ ನೆರವೇರಿಸಬೇಕು. ಅಂದರೆ ಋಷಿ ವಚನವು ಸಹಸಾ ಸುಳ್ಳಾಗಲಿಕ್ಕಿಲ್ಲ.

ಪ್ರಯಾಗದಲ್ಲಿ ಗಂಗಾ-ಯಮುನಾ-ಸರಸ್ವತಿ ಎಂಬ ಮೂರು ನದಿಗಳ ಸಂಗಮವಾದ ಸ್ಥಳಕ್ಕೆ ತ್ರಿವೇಣಿ ಎಂದು ಕರೆಯುತ್ತಾರೆ. ಈ ಸ್ಥಳದ ಮಹಾತ್ಮ್ಯೆಯನ್ನು ಪುರಾಣಿಕರು ವಿಶದವಾಗಿ ಹೇಳಿರುತ್ತಾರೆ. ಅದನ್ನೆಲ್ಲ| ಇಲ್ಲಿ ಉಲ್ಲೇಖಿಸುತ್ತ ಕುಳಿತರೆ ಇದೊಂದು ಚಿಕ್ಕ ಪುರಾಣವೇ ಆಗುವದು. ಆದ್ದರಿಂದ ನಮ್ಮ ವಾಚಕರಿಗೆ ಹೇಳತಕ್ಕ ಮುಖ್ಯ ಸಾರಾಂಶವನ್ನು ಹೇಳಿ ಬಿಟ್ಟಿರುತ್ತದೆ.

ಮನುಷ್ಯನಿಗೆ ಸದ್ಭಾವನೆಯುಂಟಾಗುವದಕ್ಕೆ ಅನುಕೂಲವಾಗಲೆಂದು ಶಾಸ್ತ್ರಕಾರರು ಅನೇಕ ಬಗೆಯ ವಿಧಾನಗಳನ್ನು ಜನತೆಯ ಮುಂದೆ ಮಂಡಿಸಿರುತ್ತಾರೆ. ಬೇರೆ ಬೇರೆ ಋಷಿಗಳು ಬೇರೆ ಬೇರೆ ಪ್ರಕಾರಗಳಿಂದ ಸತ್ಕರ್ಮಗಳನ್ನಾಚರಿಸುವದಕ್ಕೆ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಅವರು ಹೇಳಿದ ಪ್ರಕಾರಗಳು ಬೇರೆಯಾದರೂ

ಉದ್ದೇಶವು ಒಂದೇ ಇರುತ್ತದೆ; ಪಕ್ವಾನ್ನಗಳು ಅನೇಕವಿದ್ದರೂ ಅವುಗಳ ಉದ್ದೇಶವು ತಿನ್ನತಕ್ಕವರಿಗೆ ಮಧುರವಾಗಿ ಹತ್ತಿ ಅವರ ಹೊಟ್ಟೆತುಂಬ ಬೇಕೆಂಬ ಒಂದೇ ಉದ್ದೇಶವಿರುತ್ತದಷ್ಟೇ; ಇದರ ರಹಸ್ಯವನ್ನು ತಿಳಿದು ಯಾರಾದರೂ ಸತ್ಕಾರ್ಯಗಳನ್ನು ಆಚರಿಸಬೇಕು. ಈಗ ಎಷ್ಟೋ ಜನರು ತೀರ್ಥ ಯಾತ್ರೆಗಳನ್ನು ಮಾಡುತ್ತಾರೆ. ಪ್ರಯಾಣ ಸೌಕರ್ಯಗಳುಂಟಾದ್ದರಿಂದ ರೇಲ್ವೆ ಬಂಡಿಗಳಲ್ಲೋ ಮೋಟಾರಬಸ್ಸುಗಳಲ್ಲೋ ಕುಳಿತುಕೊಂಡು ಕಣ್ಣು-ಮೂಗು ನೋಯದಂತೆ ಕೈ ಬೆರಳಿನಿಂದ ಎಣಿಸುವಷ್ಟು ದಿವಸಗಳಲ್ಲಿ ಕಾಶಿ-ಪ್ರಯಾಗಗಳಂಥ ದೊಡ್ಡ ದೊಡ್ಡ ಯಾತ್ರೆಗಳನ್ನು ಮಾಡಿಕೊಂಡು ಬರುತ್ತಾರೆ; ಯಾವ ಯಾತ್ರೆಯನ್ನು ಮಾಡಲಿಕ್ಕೆ ನಮ್ಮ ಪೂರ್ವಜರಿಗೆ ವರ್ಷಾವಧಿ ಕಾಲವು ಹಿಡಿಯುತ್ತಿತ್ತೋ, ಮತ್ತು ಯಾವದಕ್ಕೆ ಮಹಾಯಾತ್ರೆ ಎಂಬ ಸಂಜ್ಞೆಯನ್ನು ಅವರು ಕೊಟ್ಟಿದ್ದರೋ, ಅಂಥ ಯಾತ್ರೆಗಳನ್ನು ನಾವು ಈಗ ಸಹಜವಾಗಿ ಸಂದರ್ಶಿಸುತ್ತೇವೆ. ಯಾತ್ರೆಗೆ ಹೋಗುವ ಸಾಧನಗಳ ಸೌಕರ್ಯವಾದರೂ ಫಲಗಳನ್ನು ಒದಗಿಸಿ ಕೊಡಲು ಯಾರೂ ಇದುವರೆಗೆ ಸೌಕರ್ಯಗಳನ್ನುಂಟುಮಾಡಿ ಕೊಟ್ಟಿಲ್ಲ. ಸಮರ್ಥರಾದ ಪಾಶ್ಚಾತ್ಯರು ಅಂಥದೊಂದು ಶೋಧವನ್ನು ಹಚ್ಚಿ, ಹಿಂದೂ ಜನತೆಗೆ ಉಪಕಾರದ ಹೊರೆಯನ್ನು ಹೊರಿಸಿದರೂ ಹೊರಿಸ ಬಹುದು. ಇರಲಿ, ನಾವು ಹ್ಯಾಗೆ ನಿರಾಯಾಸದಿಂದ ಯಾತ್ರೆ ಮಾಡಿ ಬರುವೆವೋ ಹಾಗೆ ಫಲಗಳನ್ನು ಹೊರುವ ಭಾರವೂ ನಮಗೆ ತಪ್ಪಿದೆ. ಅಂದರೆ ಮೋಟಾರು ಬಸ್ಸುಗಳಲ್ಲಿ ಕುಳಿತು ಮಾಡುವ ಯಾತ್ರೆಗೂ ದೈವಿಕ ಫಲ ರಾಹಿತ್ಯಕ್ಕೂ ಮೇಳು ಇರುತ್ತದೆ. ಆದ್ದರಿಂದ ನಾವು ಮಾಡುವ ಈಗಿನ ಯಾತ್ರಾ ಪದ್ಧತಿಯು ಕೇವಲ ದೇಶ ನೋಡುವ ಕುತೂಹಲದಲ್ಲಿ ಸಮಾವೇಶವಾಗುತ್ತದೆಂದು ಹೇಳಲಾಗುವದು.

## ಲೇಖಾಂಕ ೫.

## ಫಲಕಾರಿಯಾದ ಯಾತ್ರಾಪದ್ಧತಿಯು.

ಸಾಮಾನ್ಯ ಮನುಷ್ಯರು ಬಹುತರವಾಗಿ ಫಲಾಶೆಯಿಂದಲೇ ಕರ್ಮಗಳನ್ನು ಮಾಡುವರು. ಫಲಗಳ ಆಶೆ ಯಿಲ್ಲದಿದ್ದರೆ ಅವರಿಗೆ ಕರ್ಮಕ್ಕೆ ಉತ್ಸಾಹ ಬರುವದಿಲ್ಲ; ದಂಡ ಶಿಕ್ಷೆಗಳಿಗೆ ಅಂಜಿ ಸಾಮಾನ್ಯಜನರು ಸದಾಚರಣೆಯಿಂದ ಹ್ಯಾಗೆ ನಡೆಯುವರೋ ಹಾಗೆ ಫಲಕ್ಕೆ ಮರುಳಾಗಿ ಸತ್ಕರ್ಮಗಳನ್ನು ಮಾಡುವರು, ಸಾಮಾನ್ಯರ ಸದಾಚರಣೆ ಸತ್ಕರ್ಮಗಳಿಗೆ ಇವೆರಡೇ ತರುಣೋಪಾಯಗಳು; ದೊಡ್ಡವರ ಮಾತು ಬೇರೆ; ಅವರು ಸಾಮಾನ್ಯರ ಯಾವ ನಿಯಮಗಳಿಗೂ ಒಳಗಾಗುವದಿಲ್ಲ. ಅವರು ದಂಡ ದ್ರೋಹಗಳಿಗೆ ಅಂಜಿ ಸದಾಚರಣೆಯಿಂದ ನಡಿಯುವದಿಲ್ಲ. ಫಲಾಶೆಬಿಟ್ಟು ಸತ್ಕರ್ಮಗಳನ್ನು ಆಚರಿಸುವದು ತಮ್ಮ ಕರ್ತವ್ಯವೆಂದು ತಿಳಿದು ಮಾಡುವರು. ಕರ್ತವ್ಯಬುದ್ಧಿಯುಂಟಾಗುವವರೆಗೆ ನಾವು ದಂಡದ್ರೋಹಗಳ ಅಂಜಿಕೆಯಿಂದಾಗಲಿ, ಫಲಗಳ ಆಶೆಯಿಂದಾಗಲಿ ಸತ್ಕರ್ಮಗಳನ್ನು ಆಚರಿಸಿಯೇ ತೀರಬೇಕಾಗುತ್ತದೆ. ಧರ್ಮಶಾಸ್ತ್ರ-ನೀತಿಶಾಸ್ತ್ರಗಳು ಸಾಮಾನ್ಯರಿಗೋಸ್ಕರವಾಗಿಯೇ ಇರುತ್ತವೆಂಬದನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು; ಪಾಠಶಾಲೆಗಳು ಬಾಲಕರಿಗಾಗಿ ಇರುತ್ತವಲ್ಲದೆ ಪ್ರೌಢವಿದ್ವಾಂಸರಿಗೋಸ್ಕರ ಇರುವದಿಲ್ಲ. ಈಶ್ವರ ನಿರ್ಮಿತ ಸೃಷ್ಟಿಯೆಂಬ ಪಾಠಶಾಲೆಯಲ್ಲಿ ದಂಡಾದಿಗಳು ಗುರುಗಳಂತೆ ಇರುತ್ತವೆಂದು ಹೇಳಬಹುದು. ಯಾಕಂದರೆ ಇವುಗಳ ಯೋಗದಿಂದಲೇ ನಾವು ಹಾದಿಗೆ ಹತ್ತಬೇಕಾಗಿರುತ್ತದೆ.

ಇನ್ನು ಕೆಲವರು ಫಲಾಶೆಯಿಂದ ಸತ್ಕರ್ಮಗಳನ್ನು ಆಚರಿಸುವದು ಗೌಣವೆಂದು ಅನ್ನಬಹುದು. ನಿಜ; ಯಾರಿಗೆ? ಮಹಾತ್ಮರಿಗಲ್ಲದೆ ಅನ್ಯರಿಗೆ ಇದು ಸಾಧಿಸದು. ಫಲಾಶೆಬಿಟ್ಟು ಮನುಷ್ಯನಿಗೆ ಸತ್ಕರ್ಮಗಳನ್ನಾಚರಿಸುವದಕ್ಕೆ ಬಂದರೆ ಅವನು ಸಹಜವಾಗಿ ಸಜ್ಜನಕೋಟಿಯಲ್ಲಿ ಪರಿಗಣಿಸಲ್ಪಡುವನು. ಪ್ರತಿಫಲವಿಲ್ಲದೆ ಸರ್ವದಾ ಪರರ ಸಲುವಾಗಿ ಕಷ್ಟಪಡುವವನಿಗೆ ಯಾರು ದೊಡ್ಡವನೆಂದು ಅನ್ನಲಿ

ಯು ಒಡವೆಗಳನ್ನು ಕೊಂಡುಕೊಂಡು ಮನೆಗೆ ಒಯ್ಯಬೇಕೆನ್ನುವನು; ವೇಶ್ಯಾಗೃಹಗಳಿಗೆ ಹೋಗಿ ಆಯಾ ದೇಶಗಳ ಗಾನಾಲಾಪವನ್ನು ಕೇಳಿ ಸುಖ ಹೊಂದಬೇಕೆನ್ನುವನು, ಇನ್ನೂ ಅನೇಕಬಗೆಯ ಕಲ್ಪನೆಗಳನ್ನು ಮಾಡುವನು. ಹೀಗೆ ಕಲ್ಪನಾಸಮುದ್ರದಲ್ಲಿ ಮುಳು-ಮುಳುಗಿ ಏಳುವ ತೀರ್ಥಪ್ರವಾಸಿಗೆ ತೀರ್ಥವನ್ನು ಸ್ಮರಿಸಲಿಕ್ಕೆ ಅವಕಾಶವೇ ಉಳಿಯದಿರುವದು ಸ್ವಾಭಾವಿಕವಾಗಿರುವದು. ಅವನು ಮನಸ್ಸಿನ ಈ ಗೊಂದಲದಲ್ಲಿ ಹ್ಯಾಗಾದರೂಮಾಡಿ ಒಮ್ಮೆ ತೀರ್ಥದರ್ಶನವನ್ನು ತಕ್ಕೊಂಡು ಅಲ್ಲಿ ಲೌಕಿಕಾರ್ಥವಾಗಿ ಮಾಡಬೇಕಾದ ಕರ್ಮಗಳನ್ನು ಮಾಡಿ ಪಾರಾಗುವನು.

ಪ್ರಿಯವಾಚಕರೇ, ಮನಸ್ಸನ್ನೆಲ್ಲ ಮೇಲೆ ವರ್ಣಿಸಿದ ವಿಷಯಗಳ ಮೇಲಿಟ್ಟು ತೀರ್ಥದಲ್ಲಿ ಮುಣುಗುವದರಿಂದ ಮನಸ್ಸಿನ ಸ್ನಾನವು ಹ್ಯಾಗೆ ಆಗಬೇಕು? ಮುಖ್ಯ ಶಾಲಿಗ್ರಾಮದೇವರನ್ನು ತೆಗೆದಿಟ್ಟು ಬರಿಯ ಸಂಪುಟವನ್ನು ತೊಳೆದರೆ ಶಾಲಿಗ್ರಾಮವನ್ನು ಪೂಜಿಸಿದ ಫಲವು ಬರಬಹುದೇ? ಅದರಂತೆ ಮನಸ್ಸನ್ನು ಬೇರೊಂದು ಕಡೆಗೆ ಎಳಸಲಾಗಿಟ್ಟು ಜಡದೇಹವನ್ನು ಮಾತ್ರ ತೀರ್ಥದಲ್ಲಿ ಹೊರಳಾಡಿಸಿದರೆ ನಿಷ್ಪ್ರಯೋಜಕವೇ ಸರಿ! ಇದೊಂದು ತೀರ್ಥಸ್ನಾನದ ಫಲ ಬರುವದಕ್ಕೆ ದೊಡ್ಡ ಅಪರಾಧವು; ಇದೊಂದೇ ಅಪರಾಧವಲ್ಲದೆ ಅನಂತ ಅಪರಾಧಗಳು ಸಂಭವಿಸುತ್ತವೆ ಕ್ಷೇತ್ರಸ್ಥ ಬ್ರಾಹ್ಮಣನು ಹೆಚ್ಚು ದಕ್ಷಿಣೆಯನ್ನು ಕೇಳಿದರೆ ನಮ್ಮ ಮನಸ್ಸು ರೇಗಿಗೇಳುತ್ತದೆ. ಯಾಕಂದರೆ ತಂದ ಧನವನ್ನೆಲ್ಲ ದಾನ-ಧರ್ಮದಲ್ಲಿ ವೆಚ್ಚ ಮಾಡಿದರೆ ಮನೆಗೆ ಒಡವೆಗಳನ್ನು ಒಯ್ಯುವ ಬಗೆ ಹ್ಯಾಗೆ? ಐಷ ಆರಾಮಾದಿ ಕಾರ್ಯಗಳಿಗೆ ಕೊಡಬೇಕಾದುದೇನು? ಎಂಬ ವಿಚಾರಗಳು ಅವನ ತಲೆಯಲ್ಲಿ ತಾಕಲಾಡಿ ಬೆಂಕಿಯನ್ನು ಹುಟ್ಟಿಸಿ ನೇತ್ರದ್ವಾರಾ ಹೊರಗೆ ಪ್ರಕಟಿಸುವವು. ಇವನ ನೇತ್ರಾಗ್ನಿಯನ್ನು ನೋಡಿ ಅತ್ತ ಕ್ಷೇತ್ರಸ್ಥ ಬ್ರಾಹ್ಮಣನೂ ರೇಗುವನು. ಅಂತು ಉಭಯತರಿಗೆ ಕ್ಷುದ್ರ ದ್ರವ್ಯದ ಸಲುವಾಗಿ ಮನಸ್ತಾಪವುಂಟಾಗಿ ಇಬ್ಬರೂ ಧರ್ಮವನ್ನು ಕಳೆದುಕೊಳ್ಳುವರು. ಹೀಗೆ ಅವಿವೇಕತನ ವುಂಟಾಗಲು ತೀರ್ಥ-ಯಾತ್ರೆಯ ಫಲವು ಹೂವಾಗಿ-ಹೀಚಾಗುತ್ತಲೇ ಇವರ ನೇತ್ರಾಗ್ನಿಯಿಂದ ಕಮರಿಹೋಗುವದು. ಎಷ್ಟೋ ವ್ಯಕ್ತಿಗಳು ಇದಕ್ಕೂ ಅವಿವೇಕ ತನದ ಕಾರ್ಯಗಳನ್ನು ಮಾಡುವವು. ತೀರ್ಥ-ಯಾತ್ರೆಗೆ ಹೋದಾಗ ಚೌರ್ಯಕರ್ಮವನ್ನಾಚರಿಸುವವು ವ್ಯಭಿಚಾರಕ್ಕೆ ಮನಸ್ಸು ಮಾಡುವವು. ಹಾಯ್! ಹಾಯ್! ಪುಣ್ಯಬರಬೇಕೆಂದು ತೀರ್ಥಯಾತ್ರೆಗಳಿಗೆ ಹೋದವರು ಕೇವಲ ಪಾಪಾಚರಣೆಗಳನ್ನೇ ಆಚರಿಸ ಹತ್ತಿದರೆ ತೀರ್ಥಗಳು ಇವರಿಗೆ ಯಾವ ಫಲವನ್ನು ಕೊಡಬೇಕು? ರೋಗ ವಾಸಿಯಾಗದೇಕೆಂದು ಔಷಧ

ತತ್ಕಾಳಕ್ಕೆ ಎರಡ ಒದಲು ವಿಷಪ್ರಾಶನ ಮಾಡಿದರೆ ರೋಗವು ವಾಸಿಯಾಗುವದಂತೂ ಒತ್ತಟ್ಟಿಗಿರಲಿ ಜೀವಿತವು ಕೂಡಾ ಉಳಿಯುವದಿಲ್ಲ. ರೋಗವು ನೆಟ್ಟಗಾಗಬೇಕೆಂದು ಮನಸ್ಸಿನಲ್ಲಿ ಆಶೆ; ಸೇವಿಸತಕ್ಕದ್ದಾದರೂ ವಿಷ; ಇದು ಹ್ಯಾಗೆ ಹಾಸ್ಯಾಸ್ಪದವೋ ಹಾಗೆ ಪುಣ್ಯ ಸಂಪಾದನೇಚ್ಛೆಯಿಂದ ತೀರ್ಥ-ಯಾತ್ರೆಗಳಿಗೆ ಹೋಗಿ ಅಲ್ಲಿ ಪಾಪ ಕರ್ಮಗಳನ್ನು ಎಸಗುವದಾದರೂ ಹಾಸ್ಯಾಸ್ಪದವಿರುತ್ತದೆ.

ಈಗಿನ ಕಾಲದಲ್ಲಿ ನಮಗೆ ಸತ್ಕರ್ಮಗಳಿಂದ ಫಲಪ್ರಾಪ್ತಿಯಾಗದಿರುವದಕ್ಕೆ ಇಂಥವುಗಳೇ ಕಾರಣಗಳಾಗಿರುತ್ತವೆ. ನಮ್ಮ ಮನಸ್ಸು ಉಚ್ಚಫಲಗಳನ್ನು ಬಯಸುತ್ತದೆ; ಆದರೆ ನಮ್ಮ ಕೈಯಿಂದ ತಕ್ಕ ಕೃತಿಗಳು ನಡಿಸಲ್ಪಡುವದಿಲ್ಲ. ಈ ವಿಷಯದಲ್ಲಿ ನಾವು ಎಂದು ಜಾಗರೂಕರಾಗುವೆವೋ ಅಂದು ನಮಗೆ ಸತ್ಕರ್ಮಗಳಿಂದ ತಪ್ಪದೆ ಫಲವು ಸಿಗಹತ್ತುವದು. ಇದರ ಪ್ರತೀತಿಯನ್ನು ಸಜ್ಜನರ ಆಚರಣೆಯಿಂದ ಕಂಡುಕೊಳ್ಳಬಹುದು. ಸಜ್ಜನರು ಸತ್ಕರ್ಮವನ್ನಾಚರಿಸಿ ಫಲಗಳನ್ನು ಹೊಂದುವರು. ಅವರಿಗೆ ಸತ್ಕರ್ಮಗಳಿಂದ ಬಂದ ಪುಣ್ಯವನ್ನು ಬೇಕಾದವರಿಗೆ ಕೊಡಲಿಕ್ಕೆ ಬರುತ್ತದೆ. ಈ ಮಾತಿಗೆಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ. ಗಲಗಲಿಯ ಶ್ರೀನರಸಿಂಹಾಚಾರ್ಯರೆಂಬ ಸತ್ಪುರುಷರ ಆಖ್ಯಾಯಿಕೆಗಳನ್ನು ನಮ್ಮ ವಾಚಕರಲ್ಲಿ ಬಹುಜನರು ಕೇಳಿರಬಹುದು. ಅವರ ಬಳಿಗೆ ಒಮ್ಮೆ ಒಬ್ಬ ಬ್ರಾಹ್ಮಣನು ಬಂದನು. ಅವನಿಗೆ ಸರ್ವಾಂಗದಲ್ಲೂ ಕುಷ್ಠರೋಗವಿತ್ತು; ಆ ರೋಗ ನಿವಾರಣಕ್ಕಾಗಿ ಆತನು ಪಂಢರಿಯ ಪಾಂಡುರಂಗನ ಸೇವೆ ಮಾಡಲು ಆತನಿಗೆ ಗಲಗಲಿಯ ಶ್ರೀ ನರಸಿಂಹಾಚಾರ್ಯರ ಬಳಿಗೆ ಹೋಗಲಿಕ್ಕೆ ಸ್ವಪ್ನವಾಗಿತ್ತು. ಬ್ರಾಹ್ಮಣನು ಶ್ರೀ ಆಚಾರ್ಯರನ್ನು ಕಂಡು ಭಕ್ತಿಯಿಂದ ಸಾಷ್ಟಾಂಗವಾಗಿ ನಮಸ್ಕರಿಸಿ ನುಡಿದನೇನಂದರೆ— ಮಹಾರಾಜ, ನಾನು ಕುಷ್ಠರೋಗಿಯು; ಪಾಂಡುರಂಗನು ತಮ್ಮ ಬಳಿಗೆ ಹೋಗಲು ಅನುಜ್ಞೆ ಕೊಟ್ಟನು. ತಮ್ಮಲ್ಲಿ ಮೂರು ಪುಣ್ಯಗಳಿವೆಯಂತೆ; ಯಾವವೆಂದರೆ ಬಿಸಿಲುಗಾಲದ ಮಾಧ್ಯಾಹ್ನದ ಸಮಯದಲ್ಲಿ ನೀರಿಲ್ಲದ ಪ್ರದೇಶದಲ್ಲಿ ನೀರಡಿಸಿ ಕಳವಳಗೊಳ್ಳುವ ಗಾರ್ದಭಕ್ಕೆ ನೀರು ಕುಡಿಸಿದ ಪುಣ್ಯವು ಒಂದನೆಯದು. ತಪ್ಪದೆ ಪ್ರತಿನಿತ್ಯ ಪಾರಾಯಣ ಮಾಡಿದ ಪುಣ್ಯವು ಎರಡನೆಯದು, ಇನ್ನು ಮೂರನೆಯದೆಂದರೆ ದಿನಾಲು ಗ್ರಾಮದೊಳಗಿನ ಎಲ್ಲ ಗುಡಿಗಳಿಗೆ ದೇವದರ್ಶನ ತಕ್ಕೊಂಡು ಬಂದ ಪುಣ್ಯವು. ಈ ಮೂರು ಬಗೆಯ ಪುಣ್ಯಗಳಲ್ಲಿ ಯಾವದಾದರೊಂದು ಪುಣ್ಯವನ್ನು ಕೊಟ್ಟರೆ ನನ್ನ ರೋಗ ನಿವಾರಣವಾಗುವದಂತೆ!

ಈ ಮೇರೆಗೆ ಬ್ರಾಹ್ಮಣನ ಮಾತುಗಳನ್ನು ಕೇಳಿ, ಶ್ರೀ ಆಚಾರ್ಯರು ಕ್ಷಣ ಹೊತ್ತು ಸ್ತಬ್ಧರಾಗಿಕುಳಿತು, ಆಬಳಿಕ ಒಳಗೆ ಹೋಗಿ ತಮ್ಮ ತಾಯಿಗೆ ಈ ಎಲ್ಲ ಸಂಗತಿಯನ್ನು ನಿವೇದಿಸಿದರು. ಮತ್ತು ನುಡಿದರೇನಂದರೆ—ಅವ್ವಾ! ಈ ಮೂರು ಪುಣ್ಯಗಳಲ್ಲಿ ಯಾವಪುಣ್ಯವನ್ನು ಕೊಟ್ಟು ಬ್ರಾಹ್ಮಣನ ರೋಗನಿವಾರಣೆ ಮಾಡಲಿ? ಇದರಲ್ಲಿ ನಿನ್ನ ಇಚ್ಛೆಗೆಬಂದಂತೆ ಮಾಡುವೆನು.

ಮಗನ ಈ ಮಾತುಕೇಳಿ ಆ ವೃದ್ಧತಾಯಿಯು ವಾತ್ಸಲ್ಯದಿಂದ ಅಪ್ಪಾ, ಮಗೂ, ಯಾವದನ್ನು ಕೊಟ್ಟರೂ ಅಡ್ಡಿಇಲ್ಲ; ಯಾಕೆಂದರೆ ನಿನ್ನ ಪದರಿನಲ್ಲಿದ್ದ ಪುಣ್ಯವು ಕೇವಲ ಪರಹಿತಕ್ಕಾಗಿಯೇ ಇರುವದು. ಆದರೆ ಇದರಲ್ಲಿ ನನಗೆ ತಿಳಿಯುವದೇನಂದರೆ—"ಕತ್ತೆಗೆ ನೀರುಕುಡಿಸಿದ ಪುಣ್ಯವು ಶ್ರೇಷ್ಠವಿರುವದು. ಇದು ಯಾವಾಗಲೂ ದೊರೆಯತಕ್ಕ ಪುಣ್ಯವಲ್ಲ. ಇದನ್ನು ಕಾದಿಟ್ಟು ಉಳಿದೆರಡು ಪುಣ್ಯಗಳಲ್ಲಿ ಬೇಕಾದದ್ದನ್ನು ಕೊಡು, ಎಂದುನುಡಿದಳು. ಬಳಿಕ ಶ್ರೀ ಆಚಾರ್ಯರು ಹೊರಗೆಬಂದು ಬ್ರಾಹ್ಮಣನ ಕಷ್ಟನಿವಾರಣೆಗಾಗಿ ತನ್ನ ಪಾರಾಯಣದ ಪುಣ್ಯವನ್ನು ಸಮರ್ಪಿಸಿದರು! ಆಚಾರ್ಯರು ಪುಣ್ಯಸಮರ್ಪಣೆಯ ಉದಕ ಬಿಡುವದೊಂದೇತಡ; ಬ್ರಾಹ್ಮಣನರೋಗವು ಹೇಳಹೆಸರಿಲ್ಲದೆ ಹೋಯಿತು. ಹೇಳತಕ್ಕ ತಾತ್ಪರ್ಯವೇನಂದರೆ—ಸತ್ಕರ್ಮಗಳನ್ನಾಚರಿಸಿದರೆ ಅದರಫಲವನ್ನು ಪ್ರತ್ಯಕ್ಷ ತೋರಿಸಲಿಕ್ಕೆ ಬರುವಹಾಗೆ ಆಚರಿಸಬೇಕು. ಸಜ್ಜನರು ಹೀಗೆ ಆಚರಿಸುತ್ತಿದ್ದದರಿಂದ ಅವರ ಸತ್ಕರ್ಮಗಳಿಗೆ ಮಹತ್ವವಿರುತ್ತದೆ.

ಆದ್ದರಿಂದ ನಾವು ಯಾವ ಸತ್ಕರ್ಮಗಳನ್ನು ಆಚರಿಸಿದರೂ, ಸಜ್ಜನರ ಅನುಕರಣಮಾಡಬೇಕು. ಅಂದರೆ ನಮಗೆ ಫಲದೊರೆಯುವದು. ತೀರ್ಥ-ಯಾತ್ರೆಗಳನ್ನು ಮಾಡುವವರು ಸಜ್ಜನರ ಧರ್ಮವನ್ನೇ ಪಾಲಿಸಬೇಕು. ಸಜ್ಜನರು ತೀರ್ಥಯಾತ್ರೆಗಳಿಗೆ ಹೊರಟರೆ ಕೇವಲ ತೀರ್ಥ-ಸ್ನಾನಾದಿಗಳನ್ನೇ ಮುಖ್ಯಧ್ಯೇಯವಾಗಿ ಮಾಡಿಕೊಳ್ಳುವರು. ನಾಟಕ-ಸಿನೇಮಾದಿಗಳನ್ನು ನೋಡುವದಕ್ಕೆ ಇಚ್ಛಿಸುವದಿಲ್ಲ; ಅವರು ತೀರ್ಥಾಟನದಲ್ಲಿ ಶೀತೋಷ್ಣಗಳನ್ನು ಆನಂದದಿಂದ ಸಹಿಸಿಕೊಳ್ಳುವರು. ತೀರ್ಥಾದಿಗಳಿಗೆ ಕೇವಲ ಪಾದಚಾರಿಗಳಾಗಿಯೇ ಹೋಗುವರು. ವಾಹನಗಳ ಸೌಲಭ್ಯಮಾಡಿಕೊಂಡರೂ ಗೌಣವೆಂದು ಎಣಿಸುವದಿಲ್ಲ. ಮುಖ್ಯವಾಗಿ ಅವರು ತಮ್ಮ ತೀರ್ಥಾಟನದಿಂದ ಪರರಿಗೆ ಯಾವಬಗೆಯ ತ್ರಾಸವೂ ಆಗದಂತೆ ಎಚ್ಚರಪಡುವರು. ಆತ್ಮಕ್ಲೇಶವನ್ನಂತೂ ಅವರು ಮಾಡಿಕೊಳ್ಳುವದಿಲ್ಲ. ತೀರ್ಥಗಳಿಗೆ ಹೋದಬಳಿಕ ಭಕ್ತಿಯಿಂದ ಅವಕ್ಕೆ ನಮಸ್ಕರಿಸಿ ಶಾಸ್ತ್ರವಿಧಿಯಿಂದ ಕೇವಲ ಮನಃಪೂ

ರ್ವಕವಾಗಿ ಕ್ಷೇತ್ರವಿಧಿಗಳನ್ನು ಆಚರಿಸುವರು. ತೀರ್ಥದರ್ಶನದಿಂದ ಅವರ ಹೃದಯವು ಭಕ್ತಿರಸದಿಂದ ತುಂಬಿಬರುವದು. ಕೇವಲ ತೀರ್ಥದಲ್ಲಿಯೂ, ತೀರ್ಥಾಧಿದೇವತೆಯಲ್ಲಿಯೂ ಅವರ ಮನಸ್ಸು ತಲ್ಲೀನವಾಗುವದು. ಸಂಸಾರಚಿಂತೆಯನ್ನು ಮಾಡಲಾರದು. ಹಾಗು ಎಡಬಲದಲ್ಲಿ ಸ್ನಾನಮಾಡುವ ತರುಣ ಸ್ತ್ರೀಯರನ್ನು ನೋಡಲಾರದು. ಸಾಮಾನ್ಯರ ಮನಸ್ಸಾದರೂ ಈ ಪ್ರಸಂಗದಲ್ಲಿ ಬಹಳ ಚಂಚಲವಾಗುವದು. ತೀರ್ಥಸ್ನಾನಕ್ಕೆ ಇಳಿದಾಗ ಅವರ ಮನಸ್ಸು ಬಹಳ ವಿಷಯಾಸಕ್ತವಾಗುವದು. ತರುಣಿಯರನ್ನು ಎವೆಯಿಕ್ಕದೆ ನೋಡಹತ್ತಿಸುವರು. ಅವರ ಅವಯವಗಳನ್ನು ನೋಡಿ ವಿಕಾರಗ್ರಸ್ತರಾಗುವರು. ಸ್ನಾನ-ಸಂಕಲ್ಪಗಳು ಎತ್ತೋ ಮಾಯವಾಗುವವು. ಆದರೆ ಸಜ್ಜನರು ಮನಸ್ಸನ್ನು ಹೀಗೆ ವಿಕಾರಕ್ಕೊಳಪಡಿಸಿಕೊಳ್ಳುವದಿಲ್ಲ. ಮೂಲತಃ ಅವರು ವಿಷಯವನ್ನೇ ನೋಡುವದಿಲ್ಲ. ಅವರು ಅಂತರ್ಮುಖರಾಗಿ ಪರಮಾತ್ಮನನ್ನೇ ಧ್ಯಾನಿಸುವರು. ಅನ್ಯಸ್ತ್ರೀಯನ್ನು ಅಳಿಮನಸ್ಸಿನಿಂದ ನೋಡಿದರೆಸಾಕು, ಮನುಷ್ಯನ ಪುಣ್ಯವು ಕ್ಷೀಣವಾಗುವದೆಂದು ನೀತಿಶಾಸ್ತ್ರವು ಹೇಳುತ್ತಿರಲು, ಅಂದಬಳಿಕ ಸರ್ವದಾ ಅನ್ಯಸ್ತ್ರೀಯ ಧ್ಯಾನದಲ್ಲಿಯೇ ಇರುವ ನಮಗೆ ಸತ್ಕರ್ಮಗಳಿಂದ ಫಲವು ದೊರೆಯುವ ಬಗೆಯೆಂತು! ಇರಲಿ, ಸಜ್ಜನರು ದಾನಧರ್ಮಾದಿಗಳನ್ನು ಶಾಂತಮನಸ್ಸಿನಿಂದ ಮಾಡುವರು. ಯಾವಕಾರಣಗಳಿಂದಲೂ, ಅವರು ತಮ್ಮ ಮನಸ್ಸಿಗೆ ಕ್ಷುಬ್ಧಾವಸ್ಥೆಯನ್ನುಂಟುಮಾಡಿಕೊಳ್ಳುವದಿಲ್ಲ. ಹೀಗೆ ಅವರು ವೀತರಾಗರಾಗಿ ಶಾಂತಮನಸ್ಸಿನಿಂದ ತೀರ್ಥವಿಧಿಯನ್ನು ಮುಗಿಸಿಕೊಂಡು ಸಮಾಧಾನದಿಂದಲೇ ಸ್ವಗ್ರಾಮವನ್ನು ಕುರಿತು ತೆರಳುವರು. ಪ್ರತಿಷ್ಠೆಗಾಗಿ ಅವರು ಏನನ್ನೂ ಮಾಡುವದಿಲ್ಲ. ಮಾಡತಕ್ಕದ್ದನ್ನೆಲ್ಲ ಆತ್ಮೋದ್ಧಾರಾರ್ಥವಾಗಿ ಸದ್ಬುದ್ಧಿಯಿಂದಲೇ ಮಾಡುವರು. ಸಜ್ಜನರ ತೀರ್ಥಾಟನದ ಈ ಪದ್ಧತಿಯನ್ನು ಯಾರು ಅನುಸರಿಸುವರೋ ಅವರಿಗೆ ತೀರ್ಥಮಾಹಾತ್ಮ್ಯೆಯಲ್ಲಿ ಹೇಳಿದ ಫಲವು ಹುಸಿಹೋಗದೆ ಪದರಿನಲ್ಲಿ ಬೀಳುವದು. ಸಜ್ಜನರ ಈ ಧರ್ಮವನ್ನು ಅನುಸರಿಸದವರು ಕೇವಲ ಬರಿಗೈ ಬಂಟರೇಸರಿ!

ಪ್ರಿಯವಾಚಕರೇ, ಫಲ ದೊರೆಯತಕ್ಕ ತೀರ್ಥ ಯಾತ್ರೆಗಳ ಪದ್ಧತಿಯೆಂದರೆ ಇದೇ ಆಗಿರುವದು. ಈ ಸಜ್ಜನ ಧರ್ಮವನ್ನು ಹೊರತುಪಡಿಸಿ ಆಚರಿಸಿದ ಆಚರಣೆಗಳೆಲ್ಲ ಡಬ್ಬ ಕೊಡದ ಮೇಲೆ ನೀರೆರಚಿದಂತೆ ಅಪ್ರಯೋಜಕವೇ ಸರಿ! ಇದನ್ನರಿತು ಯಾತ್ರಿಕರು ಮನಸ್ಸನ್ನು ಶಾಂತವಾಗಿಟ್ಟುಕೊಂಡು ಧನ್ಯತೆಯನ್ನು ಪಡೆಯತಕ್ಕದ್ದು.

ಹೀಗೆ ತಾಳ್ಮೆಯನ್ನು ತಾಳದಿದ್ದರೆ, ಸಾಂವತ್ಸರ ತೀರ್ಥ-ಯಾತ್ರೆಗಳು ಬರಿಯ ನೇತ್ರಾನಂದಕರವಾಗುವವು. ಈ ನೇತ್ರಾನಂದವಾದರೂ ಒಂದುಬಗೆಯ ಲೌಕಿಕ ಫಲವಿರುತ್ತದೆ. ಇದನ್ನು ಹೊಂದಲಿಕ್ಕಾದರೂ, ತಕ್ಕಪಾತ್ರತೆಯು ಬೇಕಾಗುತ್ತದೆ. ಐಹಿಕಆನಂದಕ್ಕೇ ಪಾತ್ರತೆಯ ತಾರತಮ್ಯವಿರುವಾಗ ದೈವಿಕಫಲ ದೊರೆಯುವದಕ್ಕೆ ಪಾತ್ರತೆಯವಿಷಯದಲ್ಲಿ ಎಷ್ಟು ತಾರತಮ್ಯವಿರಬಹುದೆಂಬದನ್ನು ತೀರ್ಥಯಾತ್ರಿಕರೇ ತರ್ಕಿಸತಕ್ಕದ್ದು. ಮುಖ್ಯವಾಗಿ ಲಕ್ಷ್ಯದಲ್ಲಿಡಬೇಕಾದ ಸಂಗತಿಗಳೇನಂದರೆ—ತೀರ್ಥಾಟನೆಯ ಪ್ರಸಂಗದಲ್ಲಿ ಮನಸ್ಸಮಾಧಾನವನ್ನು ಕಾಯ್ದುಕೊಳ್ಳುವದು. ಐಹಿಕ ವಿಷಯಚಿಂತನೆಯನ್ನು ತ್ಯಜಿಸುವದು, ಪಾಪವಿಚಾರಗಳಿಗೆ ಆಸ್ಪದಕೊಡದೆಇರುವದು, ತಾನು ಹೊರಟಿರುವ ಉದ್ದೇಶವು ಯಾವಕಾರಣಗಳಿಂದಲೂ ಕುಂಠಿತವಾಗದಂತೆ ಸರ್ವದಾ ಜಾಗರೂಕತೆಯಿಂದಿರುವದು, ಇವೇ ಮೊದಲಾದವುಗಳಾಗಿರುವವು. ಈ ಸದ್ಗುಣಗಳನ್ನು ಪ್ರಯತ್ನದಿಂದಾದರೂ, ತಂದುಕೊಳ್ಳಬೇಕು. ಅಂದರೇ ಫಲದಾಯಕವಾದ ತೀರ್ಥ-ಯಾತ್ರೆಯ ಮಾರ್ಗವನ್ನು ಕಂಡುಹಿಡಿದಂತಾಗುವದು.

## ಲೇಖಾಂಕ ೬.

## ಯಾತ್ರಾಪದ್ಧತಿಯ ಆಧುನಿಕ ರೂಪಾಂತರ.

ಇಲ್ಲಿಯವರೆಗೆ ವಿವೇಚಿಸಿದ ವಿಷಯಗಳ ಮೇಲಿಂದ ಮನುಷ್ಯನು ವ್ಯವಹಾರಜ್ಞನೂ, ದೈವನಿಷ್ಠನೂ, ವಿವೇಕಿಯೂ, ಚಾಣಾಕ್ಷನೂ ಆಗಬೇಕಾದರೆ ಪ್ರತಿಯೊಬ್ಬರು ತೀರ್ಥಾಟನ ಮಾಡಿಯೇ ತೀರಬೇಕೆಂಬ ಅಂಶವು ಸ್ಪಷ್ಟವಾಗುವದಷ್ಟೇ; ಬರಬರುತ್ತ ಕಲಿಕಾಲವು ಕಠಿಣವಾಗಹತ್ತಿದ್ದರಿಂದ ಭರತಖಂಡದೊಳಗಿನ ಎಲ್ಲ ತೀರ್ಥಯಾತ್ರೆಗಳಿಗೆ ಹೋಗಿಬರುವದು ಪ್ರತಿಯೊಬ್ಬನಿಗೆ ಅಶಕ್ಯವಾಯಿತು. ಈ ಅಶಕ್ಯತೆಯ ಮೂಲಕವಾಗಿಯೇ ಪ್ರಾಚೀನ ಯಾತ್ರಾಪದ್ಧತಿಯು ಆಧುನಿಕರಾದ ನಮ್ಮಲ್ಲಿ ರೂಪಾಂತರವನ್ನು ಹೊಂದಿರುತ್ತದೆ. ಈ ರೂಪಾಂತರವು ಎಷ್ಟರಮಟ್ಟಿಗೆ ಆಗಿರುತ್ತದೆಂಬದನ್ನು ಕುರಿತು ವಿವೇಚಿಸುವದೇ ಪ್ರಸ್ತುತ ಲೇಖದ ಉದ್ದೇಶವಾಗಿರುತ್ತದೆ.

ಸಾಮಾನ್ಯವಾಗಿ ಸಾಂಸಾರಿಕರ ಮನಸ್ಸಿನಲ್ಲಿ ಪ್ರಾರಂಭದಲ್ಲಿ ಯಾವ ಯಾತ್ರೆಗೆ ಹೋಗಬೇಕೆಂಬ ವಿಚಾರಹುಟ್ಟುವದು ಸ್ವಾಭಾವಿಕವಾಗಿದೆ. ಯಾಕಂದರೆ ಅನಂತ ತೀರ್ಥಗಳು, ಅನಂತ ಕ್ಷೇತ್ರಗಳು ಇರುವವು; ಮತ್ತು ಎಲ್ಲ ತೀರ್ಥಕ್ಷೇತ್ರಗಳು ಸಮಾನ ಪುಣ್ಯಪ್ರದಗಳಿರುವವು. ಈ ವಿಚಾರಮಾಡುವಾಗ ಮನುಷ್ಯನಿಗೆ ಅತಿ ಸಮೀಪದ ಕ್ಷೇತ್ರವಾಗಲಿ, ಅಥವಾ ತಮ್ಮ ಉಪಾಸ್ಯ ದೈವತದ ಕ್ಷೇತ್ರವಾಗಲಿ ಒಮ್ಮೆಲೆ ಲಕ್ಷ್ಯದಲ್ಲಿ ಬರುವದು. ಭಾವಿಕರಾದವರು ತಮ್ಮ ಉಪಾಸ್ಯ ದೈವತವನ್ನು ಪ್ರೀತಿಸುವದು ಸ್ವಾಭಾವಿಕವಾಗಿದೆ. ಆದ್ದರಿಂದ ಅವರಿಗೆ ತಮ್ಮ ಉಪಾಸ್ಯ ದೈವತದ ಕ್ಷೇತ್ರಕ್ಕೆ ಹೋಗುವದು ಎಲ್ಲಕ್ಕೂ ಪ್ರಿಯಕರವೆನಿಸುವದು. ಮನೆತನದ ಸಾಂಪ್ರದಾಯದಂತೆ ಪ್ರತಿಯೊಂದು ಕುಟುಂಬವು ಆರಾಧ್ಯದೈವತವನ್ನು ಬೇರೆಬೇರೆ ಹೆಸರುಗಳಿಂದ ಕಲ್ಪಿಸಿಕೊಂಡು ಆ ದೈವತಕ್ಕೆ ಕುಲದೈವತವೆಂದು ಕರೆದುಕೊಳ್ಳುತ್ತಿರುವದಷ್ಟೇ; ಒಂದು ಕುಟುಂಬವು ಶ್ರೀವೇಂಕಟಪತಿಯನ್ನು ತನ್ನ ಕುಲ

ದೈವತವೆಂದು ಭಾವಿಸಿದರೆ ಇನ್ನೊಂದು ಕುಟುಂಬವು ಶ್ರೀಮಲ್ಲಾರಿಯನ್ನು ತನ್ನ ಕುಲದೈವತವೆಂದು ಭಾವಿಸುವದು. ಹೀಗೆ ದೇವರ ನಾಮಗಳು ಎಷ್ಟು ಇರುವವೋ ಅಷ್ಟು ದೈವತಗಳಿರುವವೆಂದು ಭಾವಿಸಿ ಜನರು ಒಂದೊಂದು ಹೆಸರಿನ ದೈವತವನ್ನು ತಮ್ಮ ಕುಲ ದೈವತವನ್ನಾಗಿ ಮಾಡಿಕೊಂಡಿರುವರು. ದೇವರ ಏಕರೂಪತೆಯ ವಿಚಾರವು ಈ ಲೇಖದಲ್ಲಿ ಅನವಶ್ಯಕವಿದ್ದದರಿಂದ ಅದರ ಗೊಡವೆಯನ್ನು ಬಿಟ್ಟು ಕೇವಲ ಯಾತ್ರಾಪದ್ಧತಿಯ ರೂಪಾಂತರದಕಡೆಗೆ ಲಕ್ಷ್ಯಗೊಡೋಣ.

ಸಕಲ ತೀರ್ಥ-ಕ್ಷೇತ್ರಗಳ ದರ್ಶನಮಾಡಿಕೊಳ್ಳುವದು ಯಾರಿಗೆ ಅಶಕ್ಯವೆಂದು ಕಂಡುಬಂದಿತೋ ಅವರು ತಮ್ಮ ಕುಲಸ್ವಾಮಿಯಿರುವ ಕ್ಷೇತ್ರಕ್ಕೆ ಹೋಗುವ ಪದ್ಧತಿಯನ್ನಿಟ್ಟುಕೊಂಡಿರಬಹುದೆಂದು ಯಾರಾದರೂ ಅನುಮಾನ ಮಾಡಬಹುದು. ಬಹ್ವಂಶದಿಂದ ಈ ತರ್ಕವು ನಿಜವಿರುತ್ತದೆ. ಸಾಮಾನ್ಯವಾಗಿ ಕಾಮನಾಪರ ಭಕ್ತಿಯಲ್ಲದೆ ನಿಷ್ಕಾಮಭಕ್ತಿಯು ದೊರೆಯುವದು ದುರ್ಲಭವೆಂದು ಹಿಂದಿನ ಲೇಖಾಂಕದಲ್ಲಿ ವಿವರಿಸಿರುತ್ತದಷ್ಟೇ; ಕುಲಸ್ವಾಮಿಯ ಕ್ಷೇತ್ರಕ್ಕೆ ಹೋಗುವವರ ಕಾಮನೆಗಳು ಸಿದ್ಧಿಸುತ್ತಹೋದಂತೆ ಅವರು ಪ್ರತಿವರುಷ ಹೋಗುವ ಹರಿಕೆಯನ್ನು ಹೊರುವದು ಸ್ವಾಭಾವಿಕವು; ಈಗಿನ ಕಾಲದಲ್ಲಿ ಎಷ್ಟೋ ಕುಟುಂಬಗಳು ತಮ್ಮ ಕುಲಸ್ವಾಮಿಯ ಕ್ಷೇತ್ರಗಳಿಗೆ ಹೋಗುತ್ತಿರುವದು ಕಂಡುಬರುವದು. ಕೆಲವರು ಕುಟುಂಬಸಮೇತರಾಗಿ ಹೋಗುವರು. ಕೆಲವರು ಏಕಾಂಗಿಯಾಗಿ ಹೋಗುವರು. ಚತುರ್ವರ್ಣದವರಲ್ಲಿಯೂ ಈ ಪದ್ಧತಿಯು ನೆಲೆಗೊಂಡು ಹೋಗಿರುವದು. ವಿಶ್ವನಿರ್ಮಾಣಕನಾದ ಪರಮಾತ್ಮನು ಹಲವು ಅವತಾರಗಳನ್ನು ತಳೆದು ಹಲವು ಹೆಸರುಗಳನ್ನು ಹೊಂದಿ ಬೇರೆಬೇರ ಹೆಸರು ರೂಪಗಳಿಂದ ಬೇರೆಬೇರೆ ಸ್ಥಳಗಳಲ್ಲಿ ಪ್ರಕಟನಾಗಿ ಭಾವಿಕರ ಭಕ್ತಿಯನ್ನು ಹೆಚ್ಚಿಸುವದಕ್ಕೆ ಮಾರ್ಗಮಾಡಿ ಕೊಟ್ಟಿರುವನು. ಇರಲಿ. ಈ ಯಾತ್ರಾಪದ್ಧತಿಯು ವಿಲಕ್ಷಣ ರೂಪಾಂತರವನ್ನುಹೊಂದಿರುವದು. ಯಾತ್ರೆಯ ಮೂಲಉದ್ದೇಶವು ಇದರಲ್ಲಿ ಉಳಿದಿರುವದಿಲ್ಲ. ಇದು ಮನೆತನದ ಸಾಂಪ್ರದಾಯದಲ್ಲಿ ಸಮಾವಿಷ್ಟವಾಗಿರುತ್ತದೆ. ಯಾವ ಯಾತ್ರಾಪದ್ಧತಿಯು ಜನ್ಮೋದ್ಧಾರಕ್ಕೆ ಕಾರಣವೋ, ಮತ್ತು ಯಾವ ಯಾತ್ರಾಪದ್ಧತಿಯು ಜಗತ್ತಿನ ವಿಶೇಷಜ್ಞಾನವನ್ನು ಮಾಡಿಕೊಡುವದೋ ಅಂಥ ಯಾತ್ರಾಪದ್ಧತಿಯು ಅಂಧಪರಂಪರೆಯ ಮನೆತನದ ಸಾಂಪ್ರದಾಯವಾಗಿ ಪರಿಣಮಿಸಿದ ಬಳಿಕ ಅದರ ರೂಪಾಂತರವು ಎಷ್ಟರಮಟ್ಟಿಗೆ ಆಗಿದೆ ಎಂಬದರ ಕಲ್ಪನೆಯು ವಾಚಕರಲ್ಲಿ ಸಹಜವಾಗಿ ಉತ್ಪನ್ನವಾಗಬಹುದು. ಏನೇಆಗಲಿ, ಯಾತ್ರಾಪದ್ಧತಿಯು

ಮನೆತನದ ಸಾಂಪ್ರದಾಯಿಕವಾಗಿ ಹೀಗೆ ರೂಪಾಂತರಿಸಿದ್ದೊಂದು ಲಾಭವೇ ಎಂದು ಹೇಳಬಹುದು. ಯಾಕಂದರೆ ಈ ನಿಮಿತ್ತದಿಂದಾದರೂ ಕೆಲಕೆಲವು ಕುಟುಂಬಗಳು ತೀರ್ಥ-ಯಾತ್ರೆಗಳಿಗೆ ಹೊರಡುವವು. ಶ್ರೀವೆಂಕಟಗಿರಿ, ಶ್ರೀಮೈಲಾರಗಿರಿ, ಶ್ರೀಬನಶಂಕರಿ, ಶ್ರೀಎಲ್ಲಮ್ಮ ಮೊದಲಾದ ಕ್ಷೇತ್ರಗಳು ನಮ್ಮ ಪ್ರಾಂತದವರಿಗೆ ಸಾಂಪ್ರದಾಯಿಕ ಯಾತ್ರೆಗಳಾಗಿವೆ. ಇದರಂತೆ ಬೇರೆಬೇರೆ ಪ್ರಾಂತವಾಸಿಗಳು ತಮ್ಮ ಪ್ರಾಂತಗಳಲ್ಲಿ ರೂಢವಿರುವ ತೀರ್ಥ-ಕ್ಷೇತ್ರಗಳಿಗೆ ಹೋಗುವ ಸಾಂಪ್ರದಾಯವನ್ನಿಟ್ಟುಕೊಂಡಿರುವರು. ಅವನ್ನೆಲ್ಲ ಪ್ರಾಂತವಾರ ಬರೆದರೆ ಅದೊಂದು ಗ್ರಂಥವೇ ಆಗಬಹುದಾಗಿದೆ. ಇರಲಿ.

ಒಟ್ಟಿಗೆ ವಿವೇಚಿಸತಕ್ಕ ಮುಖ್ಯಾಂಶವಿಷ್ಟೇ; ಸಮಸ್ತ ತೀರ್ಥ ಕ್ಷೇತ್ರಗಳನ್ನು ತಿರುಗುವಕಷ್ಟಾಳತನದ ಕಠಿಣಪದ್ಧತಿಯು ಈರೀತಿ ಹ್ರಸ್ವವಾಗಿದೆಯೆಂಬದು; ಇದರಂತೆ ಅಂದರೆ ಈ ಕುಲಸ್ವಾಮಿಯ ಕ್ಷೇತ್ರಕ್ಕೆ ಹೋಗುವ ಪದ್ಧತಿಯಂತೆ ಮಹಾರಾಷ್ಟ್ರದಲ್ಲಿ ವಾರಕರೀ ಪದ್ಧತಿಯು ನೆಲೆಗೊಂಡಿರುವದು. ಈ ಪದ್ಧತಿಯು ರೂಢವಾಗಲಿಕ್ಕೆ ಮಹಾರಾಷ್ಟ್ರ ಸಂತಮಂಡಲಿಯ ಪ್ರಭಾವವೇ ಕಾಣವು. ಶ್ರೀ ನಾಮದೇವ-ತುಕಾರಾಮಾದಿ ಮಹಾ ಭಗವದ್‌ಭಕ್ತರು ಶ್ರೀ ಪಾಂಡುರಂಗನ ಉಪಾಸನೆಯನ್ನು ನಡಿಸಿದ್ದರಿಂದ ಶ್ರೀ ಪಾಂಡುರಂಗನ ಭಕ್ತಸಾಂಪ್ರದಾಯವು ಹೆಚ್ಚಿತು ಪ್ರತಿವರ್ಷ ಆಷಾಢಶುದ್ಧ ಏಕಾದಶಿಗೆ ಮತ್ತು ಕಾರ್ತಿಕಶುದ್ಧ ಏಕಾದಶಿಗೆ ಪಂಢರಪುರಿಗೆ ಭಕ್ತಸಮುದಾಯವು ಭರದಿಂದ ಕೂಡಹತ್ತಿತು. ಕೆಲಕೆಲವರು ಪ್ರತಿವರ್ಷ ತಪ್ಪದೆ ಹೋಗುವ ನಿಯಮವನ್ನು ಹಿಡಿದರು. ಇಂಥವರಿಗೆ ವಾರಕರಿ ಎಂಬ ಸಂಜ್ಞೆಯು ಬಿದ್ದಿತು. ಇಂಥ ವಾರಕರೀ ಜನರು ಮಹಾರಾಷ್ಟ್ರದೇಶದಲ್ಲಿ ಲಕ್ಷಾಂತರ ಜನರಿರುವರು.

ಈ ವಾರಕರೀ ಪದ್ಧತಿಯಿಂದಾಗಲಿ, ಕುಲಸ್ವಾಮಿಯ ದರುಶನಕ್ಕೆ ಹೋಗುವ ಮನೆತನದ ಸಾಂಪ್ರದಾಯದಿಂದಾಗಲಿ, ಪ್ರತಿವರ್ಷ ಪವಿತ್ರಸ್ಥಳದ ದರ್ಶನವಾಗುತ್ತದೆಂಬದೇನೋ ನಿಜ; ಆದರೆ ಈ ಪದ್ಧತಿಯಿಂದ ಬೇರೆಬೇರೆ ಪವಿತ್ರ ಸ್ಥಳಗಳ ದರ್ಶನದಿಂದಾಗತಕ್ಕ ಸೃಷ್ಟಿವೈಲಕ್ಷಣ್ಯದ ಜ್ಞಾನವು ಮಾತ್ರ ಆಗುವದಿಲ್ಲ. ಜಿಜ್ಞಾಸು ಮನುಷ್ಯನಿಗೆ ಅಥವಾ ಬೇರೆ ಬೇರೆ ಪ್ರದೇಶಗಳನ್ನು ನೋಡಿ ಸೃಷ್ಟಿಕರ್ತನ ಅಗಾಧಸಾಮರ್ಥ್ಯದ ಬಗ್ಗೆ ಕೌತುಕಪಡಬೇಕೆನ್ನುವವರಿಗೆ ಈ ಪದ್ಧತಿಯಿಂದ ಸಮಾಧಾನವಾಗುವದಿಲ್ಲ. ಇನ್ನು ಪುಣ್ಯವಾಗಲಿ ಪವಿತ್ರತೆಯಾಗಲಿ ಬರ

ತಕ್ಕ ಮಾತು ಸ್ವತಂತ್ರವಿರುತ್ತದೆ. ಶುದ್ಧಭಾವದಿಂದ ಮನೆಯಲ್ಲಿರತಕ್ಕ ಅಥವಾ ಊರಿನಲ್ಲಿರತಕ್ಕ ದೇವರನ್ನು ಭಜಿಸಿದರೆ ಮನುಷ್ಯನಿಗೆ ಪುಣ್ಯವೂ ಪವಿತ್ರತೆಯೂ ಒದಗುತ್ತವೆ. ಆ ಪುಣ್ಯಪವಿತ್ರತೆಗಳಿಗೋಸ್ಕರ ಇಷ್ಟೆಲ್ಲ ದತ್ರವಿಡಪ್ರಾಣಾಯಾಮ ಮಾಡಬೇಕಾಗಿರುವದಿಲ್ಲ. ಆದರೆ ಎಲ್ಲರಿಗೂ ಹುಟ್ಟುತ್ತಲೇ ಶುದ್ಧಭಾವನೆಯಿರುತ್ತದೆಂದು ಯಾರು ಹೇಳುವರು? ಕೆಲವರು ಜನ್ಮತಃ ಸಾತ್ವಿಕಸ್ವಭಾವದವರೂ ದೈವನಿಷ್ಠರೂ ಇರುವರು. ಕೆಲವರು ಮಧ್ಯಮವರ್ಗದವರಿರುವರು. ಕೆಲವರು ಕೇವಲ ಲಂಡಸ್ವಭಾವದವರಿರುವರು. ಯಾರು ಜನ್ಮತಃ ಪಂಡಿತರಿರುವರೋ ಅವರು ಗುರುಗಳಲ್ಲಿ ಅಧ್ಯಯನ ಮಾಡುವ ಕಾರಣವೇನು? ಅದರಂತೆ ಜನ್ಮತಃ ದೈವನಿಷ್ಠನಾದವನಿಗೆ ಅವನ ಪವಿತ್ರತೆಗೆ ಅನ್ಯ ಸಾಧನಗಳ ಅವಶ್ಯಕತೆಯೇ ಇರುವದಿಲ್ಲ. ಯಾರು ಜನ್ಮತಃ ಸಾತ್ವಿಕಸ್ವಭಾವದವರೂ ದೈವನಿಷ್ಠರೂ ಇರುವದಿಲ್ಲವೋ ಅಂಥವರಿಗೋಸ್ಕರ ನಾನಾ ಸಾಧನಗಳಿರುತ್ತವೆ. ಅಂಥ ಸಾಧನಗಳಲ್ಲಿ ಈ ತೀರ್ಥಯಾತ್ರೆಯು ಸಾಧನವು ಬಂದಾದ್ದರಿಂದ ಇದನ್ನು ಆಚರಿಸಲೇ ಬೇಕು. ಜಪ, ತಪ, ಅನುಷ್ಠಾನಗಳು ಹ್ಯಾಗೆ ಮನುಷ್ಯನಲ್ಲಿ ಪವಿತ್ರತೆಯನ್ನು ತಂದುಕೊಡುವವೋ ಹಾಗೆ ತೀರ್ಥಾಟನವು ಪವಿತ್ರತೆಯನ್ನು ತಂದುಕೊಡುವದಲ್ಲದೆ ಮೇಲೆ ಮನುಷ್ಯನ ಬುದ್ಧಿ ಬಲವನ್ನು ಹೆಚ್ಚಿಸುತ್ತದೆ. ಯಾವ ಜ್ಞಾನವು ಪುಸ್ತಕಗಳಿಗೆ ಅಗಮ್ಯವೋ ಮತ್ತು ಯಾವ ಜ್ಞಾನ ಮಾಡಿಕೊಡುವದಕ್ಕೆ ಎಂಥ ವಿದ್ವಾಂಸರಿಗೂ ಪ್ರೊಫೇಸರರಿಗೂ ಅಶಕ್ಯವೋ ಅಂಥ ಜ್ಞಾನವು ತೀರ್ಥಾಟನದಿಂದಾಗುತ್ತದೆ.

ಇಂಥ ಮಹತ್ತರವಾದ ಲಾಭವು ಆಗಬೇಕಾದರೆ ಶ್ರೀಸಮರ್ಥ ರಾಮದಾಸರು ತಿರುಗಿದಂತೆ ಹನ್ನೆರಡುವರುಷ ತೀರ್ಥಾಟನವನ್ನೇ ಮಾಡಬೇಕಾಗುತ್ತದೆ. ಹನ್ನೆರಡುವರುಷ ತೀರ್ಥಾಟನ ಮಾಡಿದರೆ ಮನುಷ್ಯನಿಗೆ ಘನತರವಾದ ಯೋಗ್ಯತೆಯು ಸ್ವಾಭಾವಿಕವಾಗಿ ಬರುವದು. ಆದರೆ ಈಗಿನ ಕಾಲದಲ್ಲಿ ಅಷ್ಟೊಂದು ಕಷ್ಟಪಡುವವರಾರು? ದೇಶಕ್ಕೆ ಹತ್ತಿದ ವಿಲಕ್ಷಣ ದಾರಿದ್ರ್ಯದ ಮೂಲಕ ಒಂದು ಭರತಖಂಡವನ್ನೇ ಸಮಗ್ರವಾಗಿ ನೋಡ[illegible] ಅದೇಕೆ ಉಪಾಯದಲ್ಲಿ ಒಂದಾಣೆ ಭಾಗವನ್ನಾದರೂ ನೋಡಲಿಕ್ಕೆ ಆಗುವದಿಲ್ಲವೆಂದಬಳಿಕ ಪೃಥ್ವೀಪರ್ಯಟನದ ಮಾತನ್ನೇಕೆ ಎತ್ತಬೇಕು? ಬಹಳ ಹೇಳುವದೇನು? ಎಷ್ಟೋ ಜನರಿಗೆ ತಾವಿದ್ದ ಕುಗ್ರಾಮವನ್ನು ಬಿಟ್ಟು ನೆರೆಹಳ್ಳಿಗೆ ಹೋಗುವದಕ್ಕೆ ಕೂಡಾ ಸಾಧ್ಯವಿರುವದಿಲ್ಲ. ಇದು ಹಳ್ಳಿಯ ಜನರ ಮಾತಾಯಿತು. ಶಹರದೊಳಗಿನ ಜನರ ಸ್ಥಿತಿಯಾದರೂ ಇದಕ್ಕೂ ಶೋಚನೀಯವಾದದ್ದು. ಅವರಿಗೆ ಪರದಾಸ್ಯದ ಮೂಲಕ ತಮ್ಮ ಎಡಬಲ ಮನೆ

ಗಳಲ್ಲಿ ಯಾರಿರುವರೆಂಬದನ್ನು ಕೂಡಾ ನೋಡಲಿಕ್ಕೆ ಅವಕಾಶವಾಗುವದಿಲ್ಲ. ಇಷ್ಟು ಪರಿಯಿಂದ ದುಡಿದರೂ ಅವರ ಗೇಣು ಹೊಟ್ಟೆ ತುಂಬುವದಿಲ್ಲ. ಅಂದಬಳಿಕ ಇಂಥ ಕಂಗಾಲತನಕ್ಕೆ ಬಿದ್ದ ನಾವು ತೀರ್ಥಾಟನರೂಪದಿಂದ ಪ್ರವಾಸ ಮಾಡಿ ವಿವಿಧಜ್ಞಾನ ಸಂಪಾದಿಸುವದು ಹ್ಯಾಗೆ?

ಮನಸ್ಸಿನ ಸ್ವಾಸ್ಥ್ಯತೆಗೆ ಅಂದರೆ ಆಧ್ಯಾತ್ಮ ವಿಚಾರಪರರನ್ನು ಬಿಟ್ಟು ವ್ಯಾವಹಾರಿಕರ ವ್ಯವಹಾರಿಕ ಸ್ವಾಸ್ಥ್ಯತೆಗೆ ದ್ರವ್ಯವೇ ಕಾರಣವು; ದ್ರವ್ಯವು ಕೂಡಬೇಕಾದರೆ ದ್ರವ್ಯಶೋಷಣದ ಮಾರ್ಗವು ಪೂರ್ಣ ಬಂದಾಗಲಿಕ್ಕೆ ಬೇಕು. ಈ ದ್ರವ್ಯಶೋಷಣದ ಮಾರ್ಗವು ಬಂದಾಗದೆ ಇರುವದೇ ನಮ್ಮ ದೇಶದ ಅಧೋಗತಿಗೆ ಕಾರಣವಾಗಿರುತ್ತದೆ. ರಕ್ತಬಲವು ಕಡಿಮೆಯಾದರೆ ಶರೀರವು ಹ್ಯಾಗೆ ನೆಲ ಹಿಡಿಯುವದೋ ಮತ್ತು ಹ್ಯಾಗೆ ಚೈತನ್ಯಶೂನ್ಯವಾಗುವದೋ ಹಾಗೆ ನಮ್ಮ ದೇಶವು ದ್ರವ್ಯಶೋಷಣದಿಂದ ನೆಲಹಿಡಿದದೆ. ಅದಕ್ಕೆ ಯಾವದಕ್ಕೂ ಉತ್ಸಾಹವಿಲ್ಲದಾಗಿದೆ. ಇಂಥ ನಿರುತ್ಸಾಹದ ಸ್ಥಿತಿಯಲ್ಲಿ ಹೊಸ ಜ್ಞಾನ ಸಂಪಾದಿಸುವ ಚಟವಟಿಕೆಯು ಯಾರಲ್ಲಿ ಕಾಣಬೇಕು! ಈ ಅನರ್ಥವನ್ನು ತಪ್ಪಿಸುವದಕ್ಕೆ ನಮ್ಮವರು ಅನೇಕ ಬಗೆಯಿಂದಾಗುವ ದ್ರವ್ಯಶೋಷಣವನ್ನು ನಿಲ್ಲಿಸಿ ದೇಶದ ಚೈತನ್ಯವನ್ನು ಕಾಯುವದು ಶ್ರೇಯಸ್ಕರವಿರುವದು. ಮುಖ್ಯವಾಗಿ ಈಗಿನ ಕಂಗಾಲಸ್ಥಿತಿಯನ್ನು ನೀಗಲಾಡಿ ಮನುಷ್ಯನು ಸ್ವತಂತ್ರ ಉದ್ಯೋಗದಿಂದ ಯಾವಾಗ ಜೀವಿಸುವನೋ ಆಗ್ಗೆ ಅವನಿಗೆ ಹೊಸಜ್ಞಾನ ಸಂಪಾದಿಸಬೇಕೆಂಬ ಲವಲವಿಕೆ ಹುಟ್ಟುತ್ತದೆ. ಮತ್ತು ತೀರ್ಥಾಟನದ ಮಹತ್ವವು ಕಂಡುಬರುತ್ತದೆ. ಕೈಯಲ್ಲಿ ತತ್ವವಿಲ್ಲದ ಸ್ಥಿತಿಯಲ್ಲಿ ಮನುಷ್ಯನ ಮನಸ್ಸು ಯಾವದಕ್ಕೂ ಮಹತ್ವಕೊಡುವದಿಲ್ಲ; ಕೇವಲ ಉದರಂಭರಣಕ್ಕೇ ಮಹತ್ವವನ್ನು ಕೊಡುತ್ತದೆ. ಇದು ಸದ್ಯಕ್ಕೆ ನಮ್ಮ ದೇಶಕ್ಕೆ ಅನುಭವಸಿದ್ಧವಾದ ವಿಷಯವಾಗಿರುವದು.

ಹೀಗೆ ಇವೆಲ್ಲ ಕಾರಣಗಳನ್ನು ಶೋಧಿಸಿ ನೋಡಿದರೆ ಮುಖ್ಯವಾಗಿ ಬಡತನ ಹಾಗೂ ಭಕ್ತಿಯಶೂನ್ಯತೆ ಇವೆರಡು ಕಾರಣಗಳಿಂದ ತೀರ್ಥ-ಯಾತ್ರಾಪದ್ಧತಿಯು ಇಷ್ಟೊಂದು ರೂಪಾಂತರವನ್ನು ಹೊಂದಿರುತ್ತದೆಂದು ಕಂಡುಬರುವದು. ಜನತೆಯ ಈ ಸ್ಥಿತಿಯನ್ನು ನೋಡಿಯೇ ಸಾಧುಸಜ್ಜನರು ತೀರ್ಥಗಳ ಸ್ಮರಣಮಾತ್ರದಿಂದಾದರೂ ಅವರಲ್ಲಿ ಪವಿತ್ರತೆಯು ಪ್ರಾಪ್ತವಾಗುತ್ತದೆಂದು ಸಾರಿರುವರು. ಇದು ಕೇವಲ ಸುಲಭಸಾಧ್ಯವೆಂದು ಕಂಡುಬಂದರೂ ಇದೇ ಈಗಿನ ಕಾಲಕ್ಕೆ ಬಿಕ್ಕಟ್ಟಿನದಾಗಿರುತ್ತದೆ. ಯಾಕಂದರೆ ತೀರ್ಥಗಳ ಸ್ಮರಣೆಮಾಡಲು, ಮನಸ್ಸಿನ

ಸ್ವಾಸ್ಥತೆ ಬೇಕು. ಮುಂಜಾವಿನಲ್ಲಿ ಅಥವಾ ಸಾಯಂಕಾಲದಲ್ಲಿ ನೆನಪುಮಾಡಿ ತೀರ್ಥಗಳನ್ನು ಧ್ಯಾನಿಸುವಷ್ಟು ಮನಸ್ಸಿನ ಸ್ವಾಸ್ಥತೆಯು ಎಲ್ಲಿ ಉಳಿದಿರುವದು? ಯಾವಾಗಲೂ ನಮಗೆ ಪ್ರಪಂಚದ ಹಂಬಲ; ದುಡ್ಡಿಲ್ಲದವರಿಗೆ ಒಂದು ಚಿಂತೆ; ದುಡ್ಡಿದ್ದವರಿಗೆ ಮತ್ತೊಂದು ಚಿಂತೆ; ಹೀಗೆ ಸಾರ್ವತ್ರಿಕವಾಗಿ ಎಲ್ಲಕುಟುಂಬಗಳು ಒಂದಿಲ್ಲೊಂದು ವ್ಯಾಮೋಹದಲ್ಲಿ ಸಿಕ್ಕು ಸರ್ವದಾ ಕುಟುಂಬತಾಪತ್ರಯಗಳ ಲ್ಲಿಯೇ ಕಾಲಕಳೆಯುತ್ತವೆ. ಇವರಿಗೆ ದಿವಸಕ್ಕೊಂದುಸಲ ರಾಮ-ಕೃಷ್ಣಎಂದು ಉಚ್ಚರಿಸಲಿಕ್ಕೆ ಆಗುವದಿಲ್ಲ. ಇಂಥವರಿಗೆ ತೀರ್ಥ-ಯಾತ್ರಾ ಪದ್ಧತಿಯನ್ನು ಎಷ್ಟು ಸುಲಭವಾಗಿ ರೂಪಾಂತರಿಸಿ ಕೊಟ್ಟರೇನು? ಪ್ರತ್ಯಕ್ಷ ಭಾಗೀರಥಿಯನ್ನು ಮನೆಯಲ್ಲಿ ತಂದುಕೊಟ್ಟರೂ ಅವರು ಅದರಕಡೆಗೆ ಲಕ್ಷ್ಯಕೊಡುವರೋ ಇಲ್ಲವೋ ಎಂಬದು ಸಂಶಯವದೆ. ಮನಸ್ಸಿಲ್ಲದವರಿಗೆ ಎಷ್ಟು ಸುಲಭಮಾಡಿ ಕೊಟ್ಟರೇನು? ಪೂರ್ವಕಾಲದಲ್ಲಿ ಯಜ್ಞ-ಯಾಗಾದಿಗಳಿಂದ ದೊರೆಯತಕ್ಕ ಮಹಾಫಲವು ಈಗಿನ ಕಾಲದಲ್ಲಿ ಕೇವಲ ಭಗವಂತನ ನಾಮಸ್ಮರಣದಿಂದ ಪ್ರಾಪ್ತವಾಗುತ್ತದೆಂದು ಅನೇಕ ಪುರಾಣಗಳು ಸಾರುತ್ತಲಿವೆ. ಸಾಧುಸಜ್ಜನರು ಹೇಳುತ್ತಿರುವರು. ಆದರೆ ಆ ಮಹಾಫಲವನ್ನು ದೊರಕಿಸುವದಕ್ಕೆ ನಮಗೆ ಮನಸ್ಸಿಲ್ಲದ್ದರಿಂದ ಭಗವಧ್ಯಾನ ದಂಥ ಸುಲಭಕಾರ್ಯವನ್ನು ಕೂಡಾ ನಾವು ಮಾಡದವರಾಗಿದ್ದೇವೆ. ಹೀಗೆಯೇ ಯಾತ್ರಾಪದ್ಧತಿಯಲ್ಲಿಯು ಕಾಠಿಣ್ಯವು ಕಡಿಮೆಯಾಗುತ್ತ ಕೇವಲ ಸ್ಮರಣದವರೆಗೆ ಬಂದರೂ, ಅದರ ಲಾಭವನ್ನು ಪಡೆಯುವದು ನಮಗೆ ಅಶಕ್ಯವಾಗಿದೆ.

ರಾಮ-ಕೃಷ್ಣಾದಿ ಅವತಾರಿಕರೂಸಹ ತೀರ್ಥಾಟನವನ್ನು ಭಕ್ತಿಪೂರ್ವಕ ವಾಗಿಮಾಡಿ ಲೋಕಕ್ಕೆ ಉದಾಹರಣೆಯನ್ನು ಹಾಕಿಕೊಟ್ಟಿರುತ್ತಾರೆ. ಕೃಷ್ಣ ಪರಮಾತ್ಮನ ಅಣ್ಣನಾದ ಬಲರಾಮನ ತೀರ್ಥಾಟನದ ವರ್ಣನೆಯು ಶ್ರೀಮ ದ್ಭಾಗವತದಲ್ಲಿ ವಿಶದವಾಗಿರುತ್ತದೆ. ಇವರೆಲ್ಲರೂ ಕೇವಲ ಲೋಕಕ್ಕೆ ಮಾರ್ಗ ತೋರಿಸುವದಕ್ಕಾಗಿಯೇ ತೀರ್ಥಾಟನಗಳನ್ನು ಮಾಡತ್ತೇವೆಂದು ಹೇಳಿದ್ದಾರೆ. ದೊಡ್ಡವರು ಆಚರಿಸಿದಂತೆ ಸಾಮಾನ್ಯರು ಆಚರಿಸುವದು ಸ್ವಾಭಾವಿಕವಾಗಿದೆ. ಅಂತೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು—"ಯದ್ಯದಾಚರತಿ ಶ್ರೇಷ್ಠಸ್ತ ತ್ತದೇವೇತರೋಜನಃ" ಎಂದು ಹೇಳಿರುವನು. ಆಧುನಿಕ ಕಾಲದಲ್ಲಿ ಭಗವದಂಶ ಸಂಭೂತರಾದ ಎಷ್ಟೋಜನ ಸಜ್ಜನರ ಅವತಾರಗಳು ಆಗಿಹೋಗಿವೆ. ಅವರು ಕೂಡಾ ಒಂದೊಂದುಬಗೆಯಿಂದ ತೀರ್ಥ-ಯಾತ್ರೆಗಳನ್ನುಮಾಡಿ ಜನರಿಗೆ ಆಧುನಿಕ ಯಾತ್ರಾಪದ್ಧತಿಯನ್ನು ತೋರಿಸಿಕೊಟ್ಟಿರುವರು. ಈಗಿನಕಾಲಕ್ಕೆ ತಕ್ಕಂತೆಯೇ

ಆಗಲೊಲ್ಲದೇಕೆ? ಶುದ್ಧಭಾವದಿಂದ ತೀರ್ಥ-ಯಾತ್ರೆಗಳನ್ನು ಮಾಡಬೇಕೆಂದು ಸಾಧುಗಳು ಉಪದೇಶಿಸುವರು. ಕಾಶೀ ರಾಮೇಶ್ವರಾದಿ ಮಹಾಯಾತ್ರೆಗಳನ್ನು ಮಾಡಲಿಕ್ಕೆ ಸಾಮರ್ಥ್ಯವಿಲ್ಲದವರು ಕುಲಸಾಂಪ್ರದಾಯದಂತೆ ಕುಲಸ್ವಾಮಿಯ ಯಾತ್ರೆಯನ್ನೇ ಆಗಲೊಲ್ಲದೇಕೆ ಭಕ್ತಿಪೂರ್ವಕವಾಗಿ ಮಾಡಬೇಕೆಂದು ಅವರು ಉಪದೇಶಿಸುವದಲ್ಲದೆ ತಾವು ಆಚರಿಸಿಯೂ ತೋರಿಸಿರುವರು. ಈಶ್ವರಾಂಶರಾದ ಶ್ರೀಮಚ್ಚಿದಂಬರದೀಕ್ಷಿತರು ತಮ್ಮ ಕುಲಸ್ವಾಮಿಯಾದ ಮಾರ್ತಾಂಡಭೈರವನ ಯಾತ್ರೆಯನ್ನು ಮೇಲಿಂದಮೇಲೆ ಮಾಡಿ ಭಾವಿಕರಿಗೆ ಮಾರ್ಗವನ್ನು ತೋರಿಸಿಕೊಟ್ಟಿರುವರು. ಎಷ್ಟುಸಾರೆ ಮಾರ್ತಾಂಡಭೈರವನ ಸ್ಥಾನಕ್ಕೆ ಹೋದರೂ ಅವರಲ್ಲಿ ಏಕಪ್ರಕಾರವಾದ ಭಕ್ತಿಯೇ ವ್ಯಕ್ತವಾಗುತ್ತಿತ್ತು. ನಮ್ಮಲ್ಲಾದರೋ ಮೊದಲಿನ ಹುರುಪು ಎರಡನೇ ಸಾರೆಗೆ ಉಳಿಯುವದಿಲ್ಲ. ಮೂರನೆಯಸಾರೆಗಂತೂ ಕೇವಲ ಬೇಸರಿಕೆಯನ್ನು ತೋರ್ಪಡಿಸುವೆವು. ಹೀಗೆ ಬೇಸರಿಕೆಯನ್ನು ತೋರ್ಪಡಿಸುವದು ಭಕ್ತಿಯ ಲಕ್ಷಣವಲ್ಲ.

ಭಕ್ತಿಯು ಯಾವಾಗಲೂ ತರುಣವಿರುತ್ತದೆ. ವಿಷಯಲಂಪಟಿಗಳ ವಿಷಯವಾಸನೆಯು ಎಷ್ಟು ಕಾಲಸಂದಿದರೂ ಹ್ಯಾಗೆ ತರುಣವಾಗಿಯೇ ಇರುತ್ತದೆಂಬದು ಅನುಭವಸಿದ್ಧವಷ್ಟೇ? ಅದರಂತೆ ಸದ್ಭಕ್ತರ ಭಕ್ತಿಯು ಎಂದೂ ಮುಪ್ಪನ್ನು ಹೊಂದುವದಿಲ್ಲ. ಮುಪ್ಪಿಲ್ಲದ ಭಕ್ತಿಯಿಂದಲೇ ನಾವು ತೀರ್ಥಯಾತ್ರೆಗಳನ್ನು ಮಾಡತಕ್ಕದ್ದು. ಶ್ರೀ ದೀಕ್ಷಿತರವರು ತಮ್ಮ ಯಾತ್ರಾ ಪದ್ಧತಿಯಲ್ಲಿ ಈ ಸಂಗತಿಯನ್ನೇ ಪ್ರಾಮುಖ್ಯವಾಗಿ ಇಟ್ಟುಕೊಂಡಿದ್ದರು. ದೇವರ ಪ್ರೀತ್ಯರ್ಥವಾಗಿ ಮಂಗಲವಾದ್ಯಗಳ ಘೋಷ, ನೃತ್ಯ ಗೀತಾದಿಗಳನ್ನು ಆಚರಿಸಬೇಕೆಂದು ಪುರಾಣಗಳು ಹೇಳುವವು. ಆದರೆ ಈ ನೃತ್ಯ ಗೀತಾದಿಗಳಿಂದ ನಾವು ನಮ್ಮ ತೃಪ್ತಿಯನ್ನು ಮಾಡಿಕೊಳ್ಳುವೆವಲ್ಲದೆ ದೇವರ ತೃಪ್ತಿಯನ್ನು ಮಾಡಹವಣಿಸುವದಿಲ್ಲ. ಎಷ್ಟೋ ಜನರು ತಮ್ಮ ಕುಲಸ್ವಾಮಿಯ ಯಾತ್ರೆಗೆ ಹೊರಟಾಗ ಅನೇಕಾಡಂಬರಗಳನ್ನೆಬ್ಬಿಸುವರು. ನಾನಾತರದ ವಾದ್ಯಗಳನ್ನು ಸಂಗ್ರಹಿಸುವರು. ನೃತ್ಯ ಸಂಗೀತಗಳನ್ನು ಬಲ್ಲ ವಾರಾಂಗನೆಯರನ್ನು ತಂದುಕೊಳ್ಳುವರು. ನಾನಾತರದ ಮದ್ದುಗಳನ್ನು ಸುಡುವರು. ಆದರೆ ಅವರ ಲಕ್ಷ್ಯವೆಲ್ಲ ಈ ಬಹಿರಾಡಂಬರದ ಕಡೆಗೆ ಸೇರಿಕೊಳ್ಳುವದರಿಂದ ಯಾತಕ್ಕೋಸ್ಕರ ಇಷ್ಟೆಲ್ಲ ಆಡಂಬರವೆಂಬದರ ಸ್ಮರಣಸಹ ಆಗುವದಿಲ್ಲ. ಈ ವಿಸ್ಮರಣದಿಂದ ತಮ್ಮ ಮನಸ್ಸಿನ ಪ್ರಸನ್ನತೆಗಾಗಿಯೇ ಇಷ್ಟೆಲ್ಲ ಉಪಕರಣಗಳನ್ನು ಕೂಡ ಹಾಕಿರುವೆವೆಂಬ ಭಾವನೆಯು ಅವರಿಗೆ ಆಗಿ

ಹೋಗುವದು. ಇಂಥ ಒಬ್ಬ ಧನಾಢ್ಯನು ಇಂಥ ವೈಭವದಿಂದ ದೇವಯಾತ್ರೆಯನ್ನು ಮಾಡಿದನೆಂದು ಹೆಚ್ಚಳ ಪಡೆಯಬೇಕೆಂಬದೇ ಅವನ ಇಚ್ಛೆಯಾಗಿ ಕೂಡ್ರುವದು. ದೇವರಿಗೋಸ್ಕರ ಮಾಡತಕ್ಕದ್ದನ್ನು ತನ್ನಗೋಸ್ಕರವಾಗಿ ಮಾಡಿಕೊಂಡ ಬಳಿಕ ಉದ್ದೇಶದ ರೂಪಾಂತರವೇ ಆಯಿತೆಂದು ತಿಳಿಯಬೇಕು.

ಒಟ್ಟಿಗೆ ಹೇಳತಕ್ಕದ್ದೇನಂದರೆ—ಆಧುನಿಕ ಕಾಲದಲ್ಲಿ ಎಲ್ಲ ಸಂಗತಿಗಳ ರೂಪಾಂತರದಂತೆ ತೀರ್ಥ-ಯಾತ್ರಾ ಪದ್ಧತಿಯು ರೂಪಾಂತರವೂ ಆಗಿದೆ ಇಷ್ಟೇ ಅಲ್ಲ. ಉದ್ದೇಶದ ರೂಪಾಂತರವೂ ಆಗಿದೆ ಆದ್ದರಿಂದ ಹೀಗೆ ಮಾಡದೆ ಪದ್ಧತಿಯು ರೂಪಾಂತರವಾದರೂ ಉದ್ದೇಶದ ರೂಪಾಂತರವಾಗದಂತೆ ನಡೆಕೊಳ್ಳುವದು ಶ್ರೇಯಸ್ಕರವಾಗುತ್ತದೆ. ಭಾವಿಕರಾದವರು ಒಂದೇ ಯಾತ್ರೆಯನ್ನು ಮಾಡಲಿ, ಅಥವಾ ಕುಲಸ್ವಾಮಿಯ ಯಾತ್ರೆಯನ್ನೇ ಮಾಡಲಿ, ಅಥವಾ ವಾರಕರೀವ್ರತಧಾರಿಗಳೇ ಆಗಲಿ, ಇಲ್ಲವೆ ಪ್ರತಿನಿತ್ಯ ತೀರ್ಥಯಾತ್ರೆಗಳ ನಾಮ ಪಠಣ ಮಾಡಲಿ ಏನು ಮಾಡಿದರೂ ಉದ್ದೇಶದ ರೂಪಾಂತರವಾಗಗೊಡದಿದ್ದರೆ ನಿಶ್ಚಯವಾಗಿ ತೀರ್ಥಯಾತ್ರೆಯ ಫಲವು ಬರುತ್ತದೆಂದು ತಿಳಿಯಬೇಕು.



## ಲೇಖಾಂಕ. ೭

## ಕ್ಷೇತ್ರವರ್ಣನ.

ಭಗವಂತನಿಗೆ ಪ್ರಿಯಕರವಾದ ನಮ್ಮ ಭರತಭೂಮಿಯಲ್ಲಿ ಅಸಂಖ್ಯ ತೀರ್ಥ ಕ್ಷೇತ್ರಗಳಿರುವವು. ಅವುಗಳ ವರ್ಣನೆಯು ಮನೋಹರವೂ, ಪುಣ್ಯಪ್ರದವೂ ಆಗಿರುವದು. ಆದರೆ ಅವೆಲ್ಲವುಗಳನ್ನು ಸಮಗ್ರವಾಗಿ ವರ್ಣಿಸುತ್ತ ಹೋದರೆ ಚಂದ್ರಿಕೆಯ ಹಲವು ವರುಷಗಳು ಗತಿಸಿದರೂ ಮುಗಿಯದು. ಆದ್ದರಿಂದ ಪ್ರಸಿದ್ಧ ಕ್ಷೇತ್ರಗಳ ವರ್ಣನೆಯನ್ನು ಅವಶ್ಯವಿದ್ದಷ್ಟು ಬರೆದು ಯಾತ್ರಾರ್ಥಿಗಳಾದ ನಮ್ಮ ಕನ್ನಡಿಗರಿಗೆ ಕೆಲಮಟ್ಟಿಗಾದರೂ ಅನುಕೂಲವಾಗುವಂತೆ ಮಾಡಿಕೊಡಲಿಚ್ಛಿಸುವೆವು. ಈಗ ರೈಲಬಂಡಿಯ ಮೂಲಕ ಬೇಕಾದ ತೀರ್ಥ ಕ್ಷೇತ್ರಗಳಿಗೆ ಹೋಗುವದಕ್ಕೆ ರಾಜಮಾರ್ಗವಾದದ್ದರಿಂದ ಅದನ್ನೇನು ಹೇಳುವ ಅವಶ್ಯಕತೆಯುಳಿದಿಲ್ಲ. ಆದರೆ ಪ್ರಸಿದ್ಧಕ್ಷೇತ್ರಗಳ ಸ್ಥಳಮಾಹಾತ್ಮ್ಯಯನ್ನು ತಿಳಿಸುವನು ನಮ್ಮ ಕರ್ತವ್ಯವಿರುತ್ತದೆ ಯಾವ ಸ್ಥಳದಲ್ಲಿ ಏನು ವಿಶೇಷವು? ಯಾವಸ್ಥಳಗಳಲ್ಲಿ ಆಚರಿಸಬೇಕಾದ ಕಾರ್ಯಗಳಾವವು? ಇತ್ಯಾದಿ ವಿಷಯಗಳು ಮೊದಲೇ ತಿಳಿದಿರುವದು ಅವಶ್ಯವು; ಆದ್ದರಿಂದ ಅವನ್ನು ಸ್ಥಳಾವಕಾಶದಂತೆ ಯಥಾಮತಿಯಿಂದ ಈ ಲೇಖಾಂಕದಲ್ಲಿ ವಿಸ್ತರಿಸುವ ವಿಚಾರ ಮಾಡಿರುವೆವು. ವಾಚಕರು ಇತ್ತ ಲಕ್ಷ್ಯಗೊಡಬೇಕು.

### ೧ ಶ್ರೀ ಕ್ಷೇತ್ರಕಾಶಿ.

ಪ್ರಾಮುಖ್ಯವಾಗಿ ಮಹಾಯಾತ್ರೆಯೆಂದು ಸಂಬೋಧಿಸಿಕೊಳ್ಳುವದು ಶ್ರೀ ಕಾಶೀಕ್ಷೇತ್ರವೇ ಆದದ್ದರಿಂದ ಅದರ ವರ್ಣನೆಯನ್ನು ಮೊದಲು ಕೊಡುವೆವು. ಇದು ಬಹು ಪುರಾತನ ಕ್ಷೇತ್ರವು ಇದರ ವರ್ಣನೆಯು, ಸ್ಕಂದ, ಮತ್ಸ್ಯ, ಲಿಂಗ ಮೊದಲಾದ ಪುರಾಣಗಳಲ್ಲಿ ವಿಶದವಾಗಿರುವದು. ಇದು ಸುಪ್ರಸಿದ್ಧ ಶೈವ ಕ್ಷೇತ್ರವು; ಇಲ್ಲಿ ಶಿವಲಿಂಗಗಳ ವೈಭವವೇ ಎಲ್ಲಿ ನೋಡಿದಲ್ಲಿ ವ್ಯಕ್ತವಾಗುವದು. ಲಿಂಗಪುರಾಣದಲ್ಲಿ "ಸಪ್ತಕೋಟ್ಯಸ್ತುಲಿಂಗಾನಿವಾರಾಣಸ್ಯಾಂ ಸ್ಥಿತಿನಿಹಿ | ತೇಷಾಂ ದರ್ಶನಮಾತ್ರೇಣಯಜ್ಞಾನಾಂಫಲಮಾಪ್ನುಯಾತ್ ||" ಎಂದು ಹೇಳಿದ ಶ್ಲೋಕಾಭಿಪ್ರಾಯವನ್ನು ನೋಡಿದರೆ ಇಲ್ಲಿ ಏಳುಕೋಟಿ ಶಿವಲಿಂಗಗಳಿರುತ್ತವೆಂಬದು

ವ್ಯಕ್ತವಾಗುತ್ತದೆ. ಅಂತೇ ಇದಕ್ಕೆ ಭೂಕೈಲಾಸವೆಂಬ ಸಂಜ್ಞೆಯು ಪ್ರಾಪ್ತ ವಾಗಿರುತ್ತದೆ

ಈ ಕ್ಷೇತ್ರದ ಅಧಿದೈವತಕ್ಕೆ ವಿಶ್ವೇಶ್ವರನೆಂಬ ಹೆಸರು. ಈ ವಿಶ್ವೇಶ್ವರನ ದರ್ಶನ ಮಾತ್ರದಿಂದ ಸಕಲ ದುರಿತಗಳೂ ಕ್ಷಯಹೊಂದುವವೆಂದು ಪುರಾಣಗಳು ಸಾರುವವು. ಈ ವಿಶ್ವೇಶ್ವರ ಹಾಗು ಸಪ್ತಕೋಟಿ ಶಿವಲಿಂಗಗಳನ್ನು ಹೊತರ್ ಪಡಿಸಿ ೮ ಭೈರವಗಳು, ೯ ದುರ್ಗೆಯರು, ೧೨ ಆದಿತ್ಯರು, ೫೬ ವಿನಾಯಕರು, ೬೪ ಯೋಗಿನೀಗಣಗಳು, ೨೦೦ ವಿಷ್ಣುಮೂರ್ತಿಗಳು, ರುದ್ರಗಣಗಳು ಇವೇ ಮೊದಲಾದ ಅನೇಕ ದೇವಮೂರ್ತಿಗಳು ಇಲ್ಲಿ ಕಂಗೊಳಿಸುವವು. ಸಾವಿರಾರು ತೀರ್ಥಗಳಿರುವವು. ಈ ಕ್ಷೇತ್ರಕ್ಕೆ ದಕ್ಷಿಣದಲ್ಲಿ ಅಸಿನದಿಯು ಹರಿಯುತ್ತಿದ್ದು, ಉತ್ತರದಲ್ಲಿ ವರುಣಾನದಿಯು ಪ್ರವಹಿಸುವದು. ಇವೆರಡೂ ನದಿಗಳು ಪೂರ್ವ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಹರಿಯುವ ಗಂಗಾನದಿಗೆ ಸಂಗಮವಾಗುವವು. ಅಸಿನದಿಯ ಸಂಗಮಸ್ಥಳದಿಂದ ವರುಣಾನದಿಯ ಸಂಗಮವು ಮೂರು ಮೈಲು ದೂರವಾಗುವದು. ಈ ಮೂರುಮೈಲುಗಳಲ್ಲಿ ಗಂಗಾನದಿಗೆ ವಿಶಾಲವಾದ ಘಾಟಗಳಿವೆ. ಇಂಥ ಘಾಟಗಳು ೬೪ ಇರುತ್ತವೆ. ಇವಕ್ಕೆ ಬೇರೆ ಬೇರೆ ಹೆಸರುಗಳಿರುತ್ತವೆ ಕಾಶೀಕ್ಷೇತ್ರಕ್ಕೆ ಹೋದ ಯಾತ್ರಿಕರು ಈ ಘಾಟುಗಳಲ್ಲಿಯೇ ತಮಗೆ ಅನುಕೂಲವಾದ ಘಾಟಿನಲ್ಲಿ ಇಳಿದುಕೊಳ್ಳುವರು.

ಕೈಲಾಸಪತಿಯಾದ ಶಂಕರನೇ ಇಲ್ಲಿ ಮೂರ್ತಿಮಂತನಾಗಿ ಇರುವನೆಂದು ಪುರಾಣಗಳು ಹೇಳುವವು. ಮಹಾದೇವನೇ ಇಲ್ಲಿ ನೆಲಸಿದ ಬಳಿಕ ಉಳಿದ ದೇವತೆಗಳು ಋಷಿಗಳು ಈ ಕ್ಷೇತ್ರವನ್ನು ಆಶ್ರಯಿಸಿದ್ದು ಆಶ್ಚರ್ಯವಲ್ಲ. ಪರಮೇಶ್ವರನು ತನ್ನ ದಿವ್ಯಶಕ್ತಿಯನ್ನು ಈ ಕ್ಷೇತ್ರದಲ್ಲಿಟ್ಟಿರುವನು ಇದಕ್ಕೆ ಸಮಾನವಾಗಿ ಇನ್ನೊಂದು ಕ್ಷೇತ್ರವನ್ನುಂಟುಮಾಡಬೇಕೆಂದು ಯಾವ ದೇವತೆಗಳೂ ಋಷಿಗಳೂ ಬಯಸುವಹಾಗಿಲ್ಲ. ಒಮ್ಮೆ ವ್ಯಾಸಮಹರ್ಷಿಗಳು ಈ ಬಗೆಯ ಪ್ರಯತ್ನ ಮಾಡಿ ಹಾಸ್ಯಾಸ್ಪದರಾದರು. ಆಥಾರ್ತ್ ಈ ವ್ಯಾಜದಿಂದ ಅವರು ಕಾಶಿಯ ಮಹತ್ವವನ್ನು ಜನರ ನಿದರ್ಶನಕ್ಕೆ ತಂದುಕೊಟ್ಟರು ಅವರ ಆಖ್ಯಾನವು ಬೋಧಪ್ರದವಿದ್ದದರಿಂದ ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು.

ಶ್ರೀ ವ್ಯಾಸಮಹರ್ಷಿಗಳು ತಪೋನುಷ್ಠಾನನಿರತರಾಗಿ ಕಾಶೀಕ್ಷೇತ್ರದಲ್ಲಿ ವಾಸಮಾಡಿರಲು ಶ್ರೀ ವಿಶ್ವೇಶ್ವರನ ಮನಸಿನಲ್ಲಿ ಶ್ರೀ ವ್ಯಾಸರನ್ನು ಪರೀಕ್ಷಿಸಬೇಕೆಂಬ ವಿಚಾರ ಹುಟ್ಟಿತು. ಕೂಡಲೆ ಆತನು ಅನ್ನಪೂರ್ಣೆಯನ್ನು ಕುರಿತು ನುಡಿ

ದದ್ದೇನಂದರೆ—"ಇನ್ನುಮೂರು ದಿನಗಳ ವರೆಗೆ ಈ ಕಾಶೀಕ್ಷೇತ್ರದಲ್ಲಿ ವ್ಯಾಸರಿಗೆ ಅನ್ನವು ಸಿಗದಂತೆ ಕಟ್ಟುಮಾಡು;"

ಈ ಮೇರೆಗೆ ಮಾಡಿದ ವಿಶ್ವೇಶ್ವರನ ಅಪ್ಪಣೆಯನ್ನು ಅನ್ನಪೂರ್ಣೆಯು ತಡವಿಲ್ಲದೆ ಪಾಲಿಸಿದಳು. ವ್ಯಾಸರು ಭಿಕ್ಷೆಗೆ ಹೊರಡಲು, ಅನ್ನಪೂರ್ಣೆಯ ಮಾಯೆಯಿಂದ ಅವರಿಗೆ ಯಾವ ಮನೆಯಲ್ಲಿಯೂ ಭಿಕ್ಷೆ ಸಿಗದಾಯಿತು. ಇದರಂತೆ ಮೂರುದಿನಗಳು ನಿರಶನದಲ್ಲಿ ಕಳೆದು ಹೋಗಲು ವ್ಯಾಸಋಷಿಗಳಿಗೆ ಪರಮಸಂತಾಪವಾಯಿತು. ಅವರು ಕೂಡಲೆ "ಈ ಕಾಶೀಕ್ಷೇತ್ರವಾಸಿಗಳು ದರಿದ್ರರಾಗಲಿ" ಎಂದು ಶಾಪಕೊಟ್ಟರು. ಋಷಿಗಳು ಕೋಪವಶರಾಗುವರೋ ಅಥವಾ ಶಾಂತಿಸಮುದ್ರರಿರುವರೋ ಎಂಬದನ್ನೇ ನೋಡುವದು ವಿಶ್ವೇಶ್ವರನ ಕೆಲಸವಾಗಿತ್ತು. ವ್ಯಾಸರು ಹೀಗೆ ವಿಕಾರಕ್ಕೆ ಒಳಗಾಗಲು ವಿಶ್ವೇಶ್ವರನು 'ಅವರಿಗೆ ಇನ್ನೂ ಪಕ್ವದೆಶೆಯು ಬಂದಿಲ್ಲವೆಂದು ತಿಳಿದು ಅನ್ನಪೂರ್ಣೆಯನ್ನು ಕರೆದು ವ್ಯಾಸರನ್ನು ಭೋಜನಕ್ಕೆ ಕರೆದುಕೊಂಡು ಬಾ' ಎಂದು ಹೇಳಿದನು. ಅನ್ನಪೂರ್ಣೆಯು ವೃದ್ಧಸುವಾಸಿನಿಯ ರೂಪವ ತಾಳಿ ಹಸಿವೆಯಿಂದ ಬಳಲುತ್ತಿರುವ ವ್ಯಾಸಋಷಿಗಳ ಬಳಿಗೆ ಹೋಗಿ "ಸ್ವಾಮಿಾ, ನಮ್ಮ ಯಜಮಾನರು ವೃದ್ಧರಿದ್ದು, ಗಂಗಾತೀರದಲ್ಲಿ ವೈಶ್ವದೇವಾದಿಗಳನ್ನು ನೆರವೇರಿಸಿಕೊಂಡು ಅತಿಥಿಗಳ ಮಾರ್ಗಪರೀಕ್ಷಣೆ ಮಾಡುತ್ತಲಿದ್ದಾರೆ. ತಾವು ಭೋಜಕ್ಕೆ ದಯಮಾಡಿಸಬೇಕು ಎಂದು ವಿನಯದಿಂದ ಬೇಡಿಕೊಂಡಳು. ಹಸಿವೆಯಿಂದ ಬಳಲುತ್ತಿದ್ದ ವ್ಯಾಸರು ಹೆಚ್ಚಿನ ವಿಚಾರ ಮಾಡದೆ ಕರೆಯಬಂದ ವೃದ್ಧ ಸುವಾಸಿನಿಯೊಡನೆ ಭೋಜನಕ್ಕೆ ಹೋದರು. ದೇವಮಾಯೆಯಿಂದ ಗಂಗಾತೀರದಲ್ಲಿ ಒಂದು ವಿಶಾಲವಾದ ಪರ್ಣಕುಟೀರವು ಸಿದ್ಧವಾಗಿತ್ತು. ಆ ಕುಟೀರದ ಪ್ರದೇಶವು ಅತ್ಯಂತ ನಿರ್ಮಲವಿದ್ದು, ಅದು ವ್ಯಾಸರನ್ನು ಆನಂದಸಾಗರದಲ್ಲಿ ಕೆಡವಿತು. ಒಳಗೆ ಪಂಚಪಕ್ವಾನ್ನಗಳು ಸಿದ್ಧವಾಗಿದ್ದವು. ಒಬ್ಬ ವೃದ್ಧಬ್ರಾಹ್ಮಣನು ಭಸ್ಮ ರುದ್ರಾಕ್ಷಿಗಳಿಂದ ಅಲಂಕೃತನಾಗಿ ವೇದಪಠಣ ಮಾಡುತ್ತ ಕುಳಿತಿದ್ದನು. ವ್ಯಾಸರು ಕೌತುಕದಿಂದ ಕುಟೀರವನ್ನು ಪ್ರವೇಶಿಸಿ ಅಲ್ಲಿದ್ದ ವೃದ್ಧ ಬ್ರಾಹ್ಮಣನ ಪಂಕ್ತಿಯಲ್ಲಿ ಕುಳಿತು ಸುಖವಾಗಿ ಭೋಜನ ಮಾಡಿದರು. ಪ್ರತ್ಯಕ್ಷ ಪಾರ್ವತೀ ದೇವಿಯು ಬಡಿಸುವ ಅನ್ನದ ರುಚಿಯನ್ನು ಯಾರು ವರ್ಣಿಸುವರು? ವ್ಯಾಸರು ಪರಮಾನಂದಭರಿತರಾದರು. ಮೂರು ದಿನಗಳ ಉಪೋಷಣದ ಕೊನೆಯಲ್ಲಿ ಇಂಥ ಸಮಿಾಚೀನವಾದ ಭೋಜನವು ಸಿಕ್ಕದ್ದರಿಂದ ಅವರ ಶಾಪವೆಲ್ಲ ಶಾಂತಿಯನ್ನು ಹೊಂದಿತು. ಹೀಗೆ ಊಟವಾದ ಬಳಿಕ ಪರ್ಣಕುಟೀ

ರವು ಮಾಯವಾಯಿತು. ವೃದ್ಧಬ್ರಾಹ್ಮಣ-ವೃದ್ಧ ಸುವಾಸಿನಿಯರು ಮಾಯವಾದರು. ಅವರ ಸ್ಥಳದಲ್ಲಿ ಪ್ರತ್ಯಕ್ಷ ಪರಮೇಶ್ವರ ಪಾರ್ವತಿಯರೇ ಅವರಿಗೆ ದರ್ಶನವನ್ನು ಕೊಟ್ಟರು. ವ್ಯಾಸರು ಸಂತಸಬಡುತ್ತ ಸಾಷ್ಟಾಂಗವಾಗಿ ಅಭಿವಂದಿಸಿದರು. ಆಗ ಪರಮೇಶ್ವರನು ಅವರನ್ನು ಕುರಿತು—ವ್ಯಾಸಋಷಿಗಳೇ, ನಿಮ್ಮ ಮನಸ್ಸಿನ ಸತ್ವವನ್ನು ಪರೀಕ್ಷಿಸುವದಕ್ಕೋಸ್ಕರ ನಾನೇ ನಿಮಗೆ ಭಿಕ್ಷೆ ಸಿಗುವದನ್ನು ಕಟ್ಟು ಮಾಡಿದ್ದನು. ನೀವು ವಿಕಾರಕ್ಕೊಳಗಾಗಿ ನಿರಪರಾಧಿಗಳಾದ ಕಾಶೀವಾಸಿಗಳಿಗೆ ಶಾಪವನ್ನು ಕೊಟ್ಟಿರಿ ಆದ್ದರಿಂದ ನಿಮ್ಮಂಥ ತಾಮಸಿಗಳು ಈ ಕ್ಷೇತ್ರದಲ್ಲಿರಲು ಯೋಗ್ಯರಲ್ಲ. ಇಲ್ಲಿಂದ ನೀವು ಹೊರಹೊರಡಬೇಕು ಎಂದು ನುಡಿದರು.

ಪ್ರಿಯವಾಚಕರೇ, ಇದೇನು ವಿಚಿತ್ರವು? ಶ್ರೀ ವ್ಯಾಸಮಹರ್ಷಿಗಳು ಭಗವದಂಶಸಂಭೂತರು; ಇಂಥವರು ಕಾಶೀಕ್ಷೇತ್ರದಲ್ಲಿರಲು ಅನರ್ಹರೇ? ಇದು ಭಗವನ್ಮಾಯೆಯು; ಕೋಪವೆಂಬ ಚಾಂಡಾಲನನ್ನು ಮುಟ್ಟಿದ್ದರಿಂದ ಭಗವದಂಶರಾದರೂ ವ್ಯಾಸರು ಪವಿತ್ರ ಸ್ಥಳದಲ್ಲಿರಲು ಅನರ್ಹರಾದರು. ಮಿಕ್ಕವರ ಪಾಡೇನು ಎಂಬದನ್ನು ಜಗತ್ತಿನ ನಿದರ್ಶನಕ್ಕೆ ತಂದು ಕೊಡುವದೇ ಈ ಭಗವಲ್ಲೀಲೆಯ ರಹಸ್ಯವಾಗಿದೆ. ನಾವು ಈ ರಹಸ್ಯವನ್ನು ತಿಳಿಯಬೇಕಲ್ಲದೆ ವ್ಯಾಸರಂಥ ಮಹಾತ್ಮರು ಹ್ಯಾಗೆ ಅನರ್ಹರಾದರು? ಎಂಬ ತೊಡಕಿನಲ್ಲಿ ಸಿಗಬೀಳಬಾರದು. ಇರಲಿ,

ವಿಶ್ವೇಶ್ವರನ ಈ ಮಾತು ಕೇಳಿ ವ್ಯಾಸರಿಗೆ ಮತ್ತಿಷ್ಟು ಸಂತಾಪವಾಯಿತು. ಅವರು ಪ್ರತಿ ಕಾಶಿಯನ್ನು ನಿರ್ಮಿಸುತ್ತೇನೆಂದು ನುಡಿದು ಅಲ್ಲಿಂದ ಹೊರಹೊರಟರು. ಮತ್ತು ಕಾಶಿಯಿಂದ ಪೂರ್ವಕ್ಕೆ ವ್ಯಾಸಕಾಶಿಯೆಂಬ ಕ್ಷೇತ್ರವನ್ನು ನಿರ್ಮಿಸಿ ಅಲ್ಲಿ ವಿಶ್ವೇಶ್ವರನ ಬದಲು ವ್ಯಾಸೇಶ್ವರನನ್ನು ಸ್ಥಾಪಿಸಿದರು. ತಪಸಿದ್ಧರು ಏನು ಮಾಡಿಯಾರು ಏನು ಮಾಡಲಿಕ್ಕಿಲ್ಲ? ವ್ಯಾಸಕಾಶಿಯಲ್ಲಿ ಕಾಶಿಯಂತೆ ಎಲ್ಲವೂ ರಚಿಸಲ್ಪಟ್ಟವು. ಇನ್ನು ಮನುಷ್ಯರನ್ನು ನಿರ್ಮಿಸುವ ಕೆಲಸವೊಂದು ಉಳಿಯಿತು. ವ್ಯಾಸರಿಗೆ ಅದೂ ಅಶಕ್ಯವಾಗಿರಲಿಲ್ಲ. ಆದರೆ ವ್ಯಾಸರ ಈ ಹವ್ಯಾಸವನ್ನು ತಪ್ಪಿಸಿ ಅವರಿಗೆ ಪಶ್ಚಾತ್ತಾಪವನ್ನುಂಟು ಮಾಡಬೇಕೆಂದು ಪರಮೇಶ್ವರನು ನಿಶ್ಚಯಿಸಿದನು. ಮೂವತ್ತು ಮೂರು ಕೋಟಿ ದೇವತೆಗಳನ್ನು ಕರೆದು ವ್ಯಾಸರ ಈ ಹವ್ಯಾಸವನ್ನು ಬಿಡಿಸಲಿಕ್ಕೆ ನಿಮ್ಮಲ್ಲಿ ಯಾರು ಸಮರ್ಥರಿರುವರು? ಎಂದು ವಿಚಾರಿಸಿದನು. ಆದರೆ ಆ ದೇವತೆಗಳಲ್ಲಾರೂ ಸಮರ್ಥರು ಹೊಂದಲಿಲ್ಲ. ಬಳಿಕ ಗಣಪತಿಯು ವ್ಯಾಸರ ಹವ್ಯಾಸವನ್ನು ಬಿಡಿಸುವದಕ್ಕೆ ಒಪ್ಪಿಕೊಂಡು ಪರಮೇಶ್ವರನಿಂದ ಅಜ್ಞೆ ಪಡೆದು ವ್ಯಾಸರ ಬಳಿಗೆ ಹೋದನು.

ಶ್ರೀ ವ್ಯಾಸರ ಬಳಿಗೆ ಹೋದಾಗ ಗಣಪತಿಯು ಬ್ರಾಹ್ಮಣವಟುವೇಷವನ್ನು ತಾಳಿದ್ದನು. ಬಳಿಗೆ ಬಂದ ಸುಶೀಲ ವಟುವನ್ನು ನೋಡಿ, ವ್ಯಾಸರು ಸಂತೋಷಪಟ್ಟು, ಆತನಿಗೆ ಸಕಲ ವಿದ್ಯಾಭ್ಯಾಸವನ್ನು ಮಾಡಿಸಿದರು. ವಿದ್ಯಾವಿನಾಯಕನಿಗೆ ವಿದ್ಯೆ ಕಲಿಸುವದೆಂದರೇನು? ಅದೊಂದು ಲೀಲೆಯೇ ಸರಿ. ಒಂದು ದಿನ ವ್ಯಾಸರು ಪ್ರಸನ್ನಚಿತ್ತದಿಂದ ಕುಳಿತಾಗ ವಟುವೇಷಧಾರಿಯಾದ ಗಣಪತಿಯು ಮುಂದೆಬಂದು ನಮಸ್ಕರಿಸಿ—ಸ್ವಾಮಿ, ತಮ್ಮ ಮುಖದಿಂದ ಕಾಶೀಮಾಹಾತ್ಮ್ಯಯನ್ನು ಕೇಳಬೇಕೆಂಬ ಇಚ್ಛೆಯಾಗಿದೆ; ಹೇಳುವ ಕೃಪೆಯಾಗಬೇಕು ಎಂದು ಪ್ರಾರ್ಥಿಸಿದನು. ವ್ಯಾಸರು ಅದಕ್ಕೆ ಒಪ್ಪಿ, ಕಾಶೀಮಾಹಾತ್ಮ್ಯಯನ್ನು ಹೇಳತೊಡಗಿದರು. ಅವರು ಹೇಳಿದ್ದನ್ನು ಗಣಪತಿಯು ಬರೆಯಲಾರಂಭಿಸಿದನು. ಸಂಪೂರ್ಣ ಮಾಹಾತ್ಮ್ಯಯು ಮುಗಿಯಿತು. ಬಳಿಕ ಗಣಪತಿಯು ತನಗೆ ಶಂಕೆ ಬಂದವುಗಳನ್ನು ಕೇಳಿ, ತಿಳಿದು ಬರೆದನು. ವ್ಯಾಸರು ಒಮ್ಮೆ ಹೇಳಿದ್ದನ್ನು ತಿರುಗಿ ಹೇಳುವಹಾಗಿಲ್ಲ. ಅವರ ಬಾಯಿಂದ ಹೊರಟದ್ದೇ ಪ್ರಮಾಣವಾದ್ದರಿಂದ ಬಂದ ಶಂಕೆಗಳನ್ನು ಹೊಸವಿಷಯಗಳ ರೂಪದಿಂದಲೇ ಬಗೆಹರಿಸಿಕೊಳ್ಳಬೇಕಾಯಿತು. ಕಾಶಿಯಲ್ಲಿ ಮರಣಹೊಂದಿದರೆ, ಜನ್ಮ ತಾಳಿದರೆ ಏನು ಫಲವೆಂಬದನ್ನು ಕೇಳಿ ಬರೆದದ್ದಾಯಿತು. ಬಹಳ ಹೊತ್ತಿನವರೆಗೆ ಒಂದೇಸವನೆ ಹೇಳಿ ಹೇಳಿ ವ್ಯಾಸರು ಬೇಸತ್ತಿದ್ದರು. ಈ ಸಂಧಿಯನ್ನು ಸಾಧಿಸಿ ಗಣಪತಿಯು—ಸ್ವಾಮಿ, ಈ ವ್ಯಾಸಕಾಶಿಯಲ್ಲಿ ಸತ್ತರೆ ಮನುಷ್ಯನಿಗೆ ಯಾವ ಜನ್ಮ ಬರುವದು? ಎಂದು ಅಕಲ್ಪಿತವಾಗಿ ಕೇಳಿದನು. ವ್ಯಾಸರು ನಿಜವಾಗಿಯೂ ಬೇಸತ್ತಿದ್ದದ್ದರಿಂದ ಅವರು ಒಮ್ಮೆಲೆ ಕತ್ತೆಯ ಜನ್ಮವು ಬರುವದು ಎಂದು ನುಡಿದರು. ಗಣಪತಿಯು ತನ್ನ ಕೆಲಸವಾಯಿತೆಂದು ಅದನ್ನು ಬರೆದುಬಿಟ್ಟನು. ಬಳಿಕ ಆತನು ತಾನು ಬರೆದದ್ದನ್ನು ವ್ಯಾಸರಮುಂದೆ ಓದಿತೋರಿಸಲಾರಂಭಿಸಿದನು. ಓದ ಓದುತ್ತ ವ್ಯಾಸಕಾಶಿಯಲ್ಲಿ ಸತ್ತರೆ ಮನುಷ್ಯನಿಗೆ ಕತ್ತೆಯ ಜನ್ಮವು ಬರುವದೆಂಬ ವಿಷಯದ ವರೆಗೆ ಬಂದಿತು. ಅದನ್ನು ಕೇಳಿ ವ್ಯಾಸರು ತಟಸ್ಥರಾದರು. ಮನುಷ್ಯರನ್ನು ಸೃಷ್ಟಿಸಿ ವ್ಯಾಸಕಾಶಿಯಲ್ಲಿಡಬೇಕೆಂಬ ಅವರ ವಿಚಾರವು ಒಮ್ಮೆಲೆ ನಾಶವಾಯಿತು. ಬಳಿಕ ಅವರು—ನಮ್ಮ ಶಿಷ್ಯನಾಗಿದ್ದು, ಈ ರೀತಿ ನನ್ನಿಂದ ಕಾಶೀಮಾಹಾತ್ಮ್ಯಯನ್ನು ಕೇಳಿಕೊಂಡವನು ಸಾಮಾನ್ಯನಲ್ಲವೆಂದು ತಿಳಿದು ಎಚ್ಚತ್ತು, ತಮ್ಮಾ, ನೀನು ಯಾರು? ಎಂದು ಕೇಳಿದರು. ಆಗ ಆ ವಟುವು ತಾನು ಗಣಪತಿಯೆಂದು ನುಡಿಯಲು, ವ್ಯಾಸರು ನುಡಿದರೇನಂದರೆ—ಸಿದ್ಧಿವಿನಾಯಕಾ, ಮುಂದೆ ನನ್ನ ಗತಿಯೇನು? ಈ ವ್ಯಾಸಕಾಶಿಯಲ್ಲಿ ಸತ್ತರೆ ಕತ್ತೆಯ ಜನ್ಮವು ಬರುವದೆಂದು

ಹೇಳಿಬಿಟ್ಟನು. ಆದ್ದರಿಂದ ಇಲ್ಲಿ ಮನುಷ್ಯರನ್ನಂತೂ ಸೃಷ್ಟಿಸುವಹಾಗಿಲ್ಲ. ನಾನು ಕೂಡಾ ಇಲ್ಲಿ ಇರುವದು ದುಸ್ತರವಾಯಿತು; ಈ ವ್ಯಾಸಕಾಶಿಯು ಹಾಳು ಬೀಳುವದು; ಮುಂದೆ ಹ್ಯಾಗೆ ಮಾಡಬೇಕು? ಎಂದರು. ಗಣಪತಿಯು—ಈ ಪ್ರಶ್ನೆಗೆ ಉತ್ತರವನ್ನು ಕೊಡುವ ಯೋಗ್ಯತೆಯು ನನ್ನದಲ್ಲ; ಇದಕ್ಕೋಸ್ಕರ ನೀವು ಪರಮೇಶ್ವರನನ್ನೇ ಕೇಳಬೇಕು ಎಂದು ನುಡಿದು ಅದೃಶ್ಯನಾದನು.

ಈ ಮೇರೆಗೆ ಮಾಡಿದ್ದೆಲ್ಲ ವ್ಯರ್ಥವಾಗಲು, ವ್ಯಾಸರು ಪಶ್ಚಾತ್ತಾಪಹೊಂದಿ ಪರಮೇಶ್ವರನ ಬಳಿಗೆ ಹೋದರು. ದಯಾಳುವಾದ ಪರಮೇಶ್ವರನು ವ್ಯಾಸರನ್ನು ಅಪ್ಪಿಕೊಂಡು—ವ್ಯಾಸಋಷಿಗಳೇ ಚಿಂತೆಮಾಡಬೇಡಿರಿ; ಯಾವನು ಕಾಶಿಗೆ ಬಂದು ನಿಮ್ಮ ವ್ಯಾಸಕಾಶಿಯ ದರ್ಶನವನ್ನು ತಕ್ಕೊಳ್ಳುವದಿಲ್ಲವೋ ಅವನ ಪುಣ್ಯವನ್ನು ನೀವು ಹರಣಮಾಡಿರಿ. ನೀವು ದಿನಾಲು ಕಾಶಿಗೆ ಬಂದು ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ನನ್ನ ದರ್ಶನ ತಕ್ಕೊಂಡರೆ ನಿಮಗೆ ಯಾವ ದೋಷವೂ ತಟ್ಟುವದಿಲ್ಲ; ಎಂದು ಅಭಯವಿತ್ತನು. ಬಳಿಕ ವ್ಯಾಸರು ಬೇರೆ ಸ್ಥಳದಲ್ಲಿ ವಾಸಿಸಿ ತಮ್ಮ ತಪೋನುಷ್ಠಾನದಲ್ಲಿ ಆಸಕ್ತರಾದರು. ಹೇಳತಕ್ಕ ತಾತ್ಪರ್ಯವೇನಂದರೆ—ಕಾಶಿಯ ಮಹಿಮೆಯು ಅಗಾಧವಾಗಿರುವದು. ಅದರಂತಹ ಕ್ಷೇತ್ರವನ್ನು ರಚಿಸಲಿಕ್ಕೆ ವ್ಯಾಸರಿಗೂಕೂಡಾ ಅಶಕ್ಯವಾಯಿತು. ಯಾರಾದರೂ ತಮ್ಮಕ್ಕಿಂತ ಬಲಿಷ್ಠರಾದವರೆದುರಿಗೆ ಪೌರುಷ ತೋರಿಸಹೋಗಬಾರದು. ಇರಲಿ.

ಈ ಮೇಲಿನ ಕಥೆಯಿಂದ ಕಾಶೀಕ್ಷೇತ್ರದ ಮಹತ್ವವು ಸ್ಪಷ್ಟವಾಗಿ ತಿಳಿದು ಬರುವದು. ಪರಮೇಶ್ವರನಿಗೆ ಪ್ರಿಯಕರವಾದ ಆ ಸ್ಥಾನದ ವರ್ಣನೆಯನ್ನು ಮಾಡಲು, ಯಾರಿಂದಲೂ ಶಕ್ತಿಸಾಲದು. ಯಾಕಂದರೆ ಮಹಾಪುರಾಣಗಳು ಎಷ್ಟು ವರ್ಣಿಸಿದರೂ ಕೊನೆಮುಟ್ಟದೆ ತಟಸ್ಥವಾಗಿರುವವು. ಇರಲಿ. ಇಂತು ಕಾಶಿಯು ಮಹತ್ತರವಾದ ಸ್ಥಳವಿರುವದು. ಇಲ್ಲಿ ಯಾವ ಪ್ರಾಣಿಯು ದೇಹಪತನವನ್ನು ಹೊಂದುವದೋ ಆ ಪ್ರಾಣಿಗೆ ಪುನರ್ಜನ್ಮವಿಲ್ಲೆಂದು ಸಂಕೇತವಿದೆ. ಪ್ರಾಣಿಯು ಎಲ್ಲಿ ಸತ್ತರೂ ಅದರ ಅಸ್ಥಿಗಳನ್ನು ಕಾಶೀಕ್ಷೇತ್ರದಲ್ಲಿ ಬ್ರಹ್ಮನಾಳ ಎಂಬಲ್ಲಿ ಗಂಗೆಯಲ್ಲಿ ಚೆಲ್ಲಿದರೆ ಆ ಪ್ರಾಣಿಗೆ ಉತ್ತಮ ಗತಿಯು ಪ್ರಾಪ್ತವಾಗುವದೆಂದು ಕಾಶೀಖಂಡವು ಸಾರುತ್ತದೆ ದುರ್ಮರಣ ಹೊಂದಿದ ಒಬ್ಬ ಬೇಡಜಾತಿಯವನ ಅಸ್ಥಿಯನ್ನು ಒಂದು ಕಾಗೆಯು ಕಚ್ಚಿಕೊಂಡು ಹಾರಿಹೋಗುವಾಗ ಗಂಗೆಯಲ್ಲಿ ಬಿದ್ದದರಿಂದ ಆತನಿಗೆ ಸದ್ಗತಿಯಾಯಿತೆಂದು ಗರುಡಪುರಾಣವು ವರ್ಣಿಸು

ತ್ತದೆ. ಹೇಳತಕ್ಕ ತಾತ್ಪರ್ಯವೇನಂದರೆ—ಕಾಶಿಯು ಕೇವಲ ಪವಿತ್ರ ಸ್ಥಳವು. ಇಲ್ಲಿ ವಾಸಮಾಡುವ ಪ್ರಾಣಿಗಳಿಗೆ ಪಾಪವೆಂಬದು ತಗಲುವದಿಲ್ಲ.

ಹೀಗಿರುವ ಕಾಶೀಮಾಹಾತ್ಮ್ಯವನ್ನು ಕೇಳಿ ಯಾರಾದರೂ ಈ ಪ್ರಕಾರ ಸಂಶಯವನ್ನು ತಕ್ಕೊಳ್ಳಬಹುದು, ಏನೆಂದರೆ—"ಕಾಶಿಯಲ್ಲಿರುವ ಪ್ರಾಣಿಗೆ ಪಾಪವಿಲ್ಲೆಂದಬಳಿಕ ಯಾರಾದರೂ ಕಾಶಿಗೆ ಹೋಗಿ ಮನಬಂದಂತೆ ಆಚರಿಸಬಹುದಲ್ಲವೇ?" ಈ ಪ್ರಶ್ನೆಗೆ ಸಮಾಧಾನವೇನೆಂದರೆ—ಮನಸೋಕ್ತ ಆಚರಣೆಗೆ ಎಲ್ಲಿಯೂ ಕ್ಷಮೆಯಿಲ್ಲ. ಆ ಬಗ್ಗೆ ಬರತಕ್ಕ ಫಲವು ಬಂದೇತೀರುವದು. ಆದರೆ ಆಕಲ್ಪಿತವಾಗಿ ಅಥವಾ ಪ್ರಮಾದದಿಂದ ಉಂಟಾದ ಪಾಪಗಳು ಮಾತ್ರ ದಹಿಸಿ ಹೋಗುವವು. ದಿನಾಲು ಬುದ್ಧಿಪೂರ್ವಕವಾಗಿ ವ್ಯಭಿಚಾರ-ಚೌರ್ಯ, ಕೊಲೆ ಮುಂತಾದ ಪಾಪಕರ್ಮಗಳನ್ನು ಆಚರಿಸುವವರಿಗೆ ಕ್ಷೇತ್ರವಾಸವು ಸದ್ಗತಿಯನ್ನು ಕೊಡದೆ ತಕ್ಕ ಪ್ರಾಯಶ್ಚಿತ್ತವನ್ನುಂಟುಮಾಡಿ ಕಳಿಸಿಕೊಡುವದು. ಹೀಗೆ ಮಾಡದೆ ಮನಸ್ವಿಗಳ ಪಾಪಕರ್ಮಗಳನ್ನು ಕ್ಷೇತ್ರವು ದಹಿಸುತ್ತ ಹೋದರೆ ಕ್ಷೇತ್ರಗಳಲ್ಲಿ ಸದಾಚಾರಿಗಳೇ ದೊರೆಯಲಿಕ್ಕಿಲ್ಲ. ಸ್ತ್ರೀ ಪುರುಷರೆಲ್ಲರೂ ದುಷ್ಕರ್ಮಪ್ರಿಯರಾಗಿ ದುಷ್ಕರ್ಮಗಳಿಗೆ ಕಳಸವನ್ನಿಡಬಹುದು. ಆದ್ದರಿಂದ ಪುರಾಣಗಳು ಹೀಗೆ ಅಭಿವಚನವನ್ನು ಕೊಟ್ಟಿರುವದಿಲ್ಲ. ಆದ್ದರಿಂದ ಯಾರಾದರೂ ವಿಚಾರದಿಂದ ನಡೆಯಬೇಕು. ಪುರಾಣವು ಹೇಳುವದೊಂದು, ಜನರು ನಡೆಯುವದು ಮತ್ತೊಂದು ಹೀಗಾದರೆ ಕ್ಷೇಮವು ಅಂತರಿಸುವದು. ಇರಲಿ.

ಕಾಶೀಕ್ಷೇತ್ರಕ್ಕೆ ಹೋದವರು ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ತೀರ್ಥಶ್ರಾದ್ಧವನ್ನಾಚರಿಸಬೇಕಾಗುವದು. ಬಳಿಕ ಪಂಚತೀರ್ಥಸ್ನಾನ, ಅಸಿಸಂಗಮಸ್ನಾನ, ವರುಣಾಸಂಗಮಸ್ನಾನ, ವಿಶ್ವೇಶ್ವರಪೂಜೆ ಮೊದಲಾದ ವಿಧಿಗಳನ್ನು ತೀರಿಸಬೇಕಾಗುವದು. ಗೌರೀಕುಂಡದಲ್ಲಿ ಸ್ನಾನಮಾಡಿ ಕೇದಾರೇಶ್ವರನ ಪೂಜೆಮಾಡಬೇಕಾಗುವದು. ಬಳಿಕ ಬಿಂದುಮಾಧವಪೂಜೆ, ತ್ರಿಲೋಚನೇಶ್ವರದರ್ಶನ ಮೊದಲಾದವುಗಳನ್ನು ಆಚರಿಸಬೇಕು. ಬಳಿಕ ದುರ್ಗಾದೇವಿ ದರ್ಶನ, ಕವಡೇಬಾಯಿ ದರ್ಶನ, ಪಂಚಕ್ರೋಶಾತ್ಮಕವಾದ ತೇಜೋಲಿಂಗಗಳ ಪ್ರದಕ್ಷಿಣೆ ಇತ್ಯಾದಿಗಳನ್ನು ನೆರವೇರಿಸಬೇಕು. ಪಿಶಾಚ್ಛವಿಮೋಚನ ತೀರ್ಥದಲ್ಲಿ ಸ್ನಾನ ಮಾಡಬೇಕು. ವ್ಯಾಸಕಾಶೀ ದರ್ಶನವನ್ನು ತಕ್ಕೊಳ್ಳಬೇಕು. ಈ ವ್ಯಾಸಕಾಶೀ ದರ್ಶನದ ಕಾರಣವನ್ನು ಈ ಮೊದಲೇ ಹೇಳಿದೆ. ಆದರೆ ಕವಡೇಬಾಯಿ ದರ್ಶನದ ಬಗ್ಗೆ ರೂಢವಿರುವ ಒಂದು ದಂತಕಥೆಯನ್ನು ಹೇಳುವೆವು.

ಕವಡೇಬಾಯಿ ಎಂಬವಳೊಬ್ಬಳು ವಿಶ್ವೇಶ್ವರನ ಅಕ್ಕ. ಆವಳಿಗೆ ಮಡಿ-ಮೈಲಿಗೆಗಳು ಬಹಳ ಬೇಕು ಆದ್ದರಿಂದ ಅವಳು ತನ್ನ ತಮ್ಮನೂ, ನಾದಿನಿಯೂ ಸಕಲ ಜಾತಿಯವರಿಂದ ಪೂಜೆ-ನೈವೇದ್ಯಾದಿಗಳನ್ನು ಸ್ವೀಕರಿಸುವದಕ್ಕೆ ಸೇರದಾದಳು. ಅವಳು ಒಂದು ದಿನ ವಿಶ್ವೇಶ್ವರನನ್ನು ಈ ವಿಷಯದಲ್ಲಿ ತಿರಸ್ಕರಿಸಿದಳು. ಆಗ ವಿಶ್ವೇಶ್ವರನು ಆಕೆಯ ಮೂರ್ಖತನಕ್ಕೆ ನಕ್ಕು ನೀನು ಪರಮಮೂರ್ಖಳಿರುವಿ. ಪ್ರತ್ಯಕ್ಷ ನನ್ನ ಸನ್ನಿಧಿಯಲ್ಲಿ ನೀನು ಮಡಿ-ಮೈಲಿಗೆಗಳನ್ನು ಎಣಿಸಿದ್ದರಿಂದ ನೀನು ಈ ಮಹಾಕ್ಷೇತ್ರದಲ್ಲಿರಲು ಅರ್ಹಳಲ್ಲ ಇಲ್ಲಿಂದ ಹೊರಟು ಹೋಗು ಎಂದನು. ತಮ್ಮನ ಈ ನುಡಿಯಿಂದ ಕವಡೇಬಾಯಿಗೆ ನಾಚಿಕೆಬಂದು ಪಶ್ಚಾತ್ತಾಪವಾಯಿತು. ಬಳಿಕ ಆವಳು ದೈನ್ಯದಿಂದ ಪ್ರಾರ್ಥಿಸಿಕೊಳ್ಳಲು, ವಿಶ್ವೇಶ್ವರನು ಆಕೆಯ ಅಪರಾಧವನ್ನು ಕ್ಷಮಿಸಿ ಕಾಶಿಗೆ ಬಂದವರು ನಿನ್ನ ದರ್ಶನ ತಕ್ಕೊಳ್ಳದಿದ್ದರೆ ಸಮಸ್ತ ಫಲ ಕಳಕೊಳ್ಳುವರು. ಎಂದು ವರವನ್ನಿತ್ತನು. ಅಂದಿನಿಂದ ಕವಡೇಬಾಯಿಯು ದುರ್ಗಾದೇವಿಯ ಸಮೀಪದಲ್ಲಿ ವಾಸಮಾಡಿಕೊಂಡಿರುವಳಂತೆ!



# ಲೇಖಾಂಕ ೮.

## ನಾನಾ ಕ್ಷೇತ್ರಗಳ ವರ್ಣನ.

ಹಿಂದಿನ ಲೇಖಾಂಕದಲ್ಲಿ ಶ್ರೀ ಕಾಶೀಕ್ಷೇತ್ರದ ವರ್ಣನೆಯನ್ನು ಮಾಡಿದ್ದಾಯಿತು. ಪ್ರಸ್ತುತ ಲೇಖದಲ್ಲಿ ಗಯಾ ಪ್ರಯಾಗಾದಿ ಕೆಲವು ಕ್ಷೇತ್ರಗಳ ಸಂಕ್ಷಿಪ್ತ ವರ್ಣನೆಯನ್ನು ಬರೆಯುವೆವು. ಈ ವರ್ಣನೆಯಿಂದ ಆ ಆ ಸ್ಥಾನಗಳ ಮಹತ್ವವು ನಮ್ಮ ವಾಚಕರಿಗೆ ಸಹಜವಾಗಿ ಗೊತ್ತಾಗುವದು. ಕ್ಷೇತ್ರವರ್ಣನೆಯು ಒಂದು ಬಗೆಯ ಮನೋರಂಜಕವೂ, ನೀತಿ-ಧರ್ಮಗಳ ಬೋಧಕವೂ ಇದ್ದದರಿಂದ ಪುರಾಣ ಸಮ್ಮತವಾದ ಈ ವರ್ಣನೆಯನ್ನು ಬುದ್ಧಿಪೂರ್ವಕವಾಗಿ ನಮ್ಮ ಈ ತೀರ್ಥ-ಯಾತ್ರಾಪ್ರಬಂಧದಲ್ಲಿ ಸಮಾವೇಶ ಮಾಡಲಾಗಿದೆ. ವಾಚಕರು ಇತ್ತ ಲಕ್ಷ್ಯಕೊಡುವದಾಗಬೇಕು.

### ಗಯಾ.

ಶ್ರೀ ಗಯಾಕ್ಷೇತ್ರವು ಶ್ರೀ ಕಾಶೀಕ್ಷೇತ್ರದ ಪೂರ್ವಕ್ಕಿರುತ್ತದೆ. ಇದು ಬಹು ಪುರಾತನ ಕ್ಷೇತ್ರವು. ಈ ಕ್ಷೇತ್ರದ ಉತ್ಪತ್ತಿಯ ವಿಷಯದಲ್ಲಿ ಪುರಾಣಗಳು ಹೀಗೆ ವರ್ಣನೆ ಮಾಡುತ್ತವೆ—"ಗಯಾಸುರನೆಂಬ ರಾಕ್ಷಸನು ಸ್ವಾಭಾವಿಕ ತಮೋಗುಣಶೂನ್ಯನಾಗಿ ಬ್ರಾಹ್ಮಣ ಭಕ್ತಿಯಲ್ಲಿಯೂ ತಪಸ್ಸಿನಲ್ಲಿಯೂ ಆಸಕ್ತನಾದನು. ಬರಬರುತ್ತ ಆತನ ತಪಸ್ಸು ಬೆಳೆಯಿತು. ತಪಸ್ಸಿನಿಂದ ಸರ್ವ ಪಾಪಗಳೂ ದಗ್ಧವಾಗುವದರಿಂದ ಗಯಾಸುರನು ಅತ್ಯಂತ ಪವಿತ್ರನಾದನು. ಆತನ ಪವಿತ್ರತೆಗೆ ಮೆಚ್ಚಿ ದೇವತೆಗಳು ಕೂಡ ಗಯಾಸುರನ ದೇಹವೇ ಶ್ರೇಷ್ಠ ಕ್ಷೇತ್ರವೆಂದು ನುಡಿದರಲ್ಲದೆ ಅದರಂತೆ ಆತನಿಗೆ ವರವನ್ನೂ ಕೊಟ್ಟರು. ಈ ವರಪ್ರದಾನದಿಂದಲೂ, ಸ್ವಾಭಾವಿಕ ಪವಿತ್ರತೆಯಿಂದಲೂ ಗಯಾಸುರನ ಮಹತ್ವವು ಬಹಳ ಬೆಳೆಯಿತು. ಸಕಲ ಜನರೂ ಆತನ ದರ್ಶನಮಾತ್ರದಿಂದ ಉದ್ಧೃತರಾಗತೊಡಗಿದರು. ಆವನ ಮೈಮೇಲಿನ ಗಾಳಿಯು ಸೋಂಕಿದರೆ ಸಾಕು ಜನರಲ್ಲಿ ಪಾಪಬುದ್ಧಿಯು ತೊಲಗಲಾರಂಭಿಸಿತು. ಅಹಾ! ಎಂಥ ಪವಿತ್ರ್ಯದ ಪ್ರಭಾವವಿದು! ಯಾರ ಚರಣತೀರ್ಥ

ಪ್ರಾಶನದಿಂದ ದುರ್ಬುದ್ಧಿಯು ನಾಶವಾಗಿ ಸದ್ಬುದ್ಧಿಯುತ್ಪನ್ನವಾಗುವದೋ ಅವ ರೊಬ್ಬರಿಗೇ ಮಹಾತ್ಮರೆನ್ನಬೇಕು. ಯಾವ ಕ್ಷೇತ್ರದರ್ಶನದಿಂದ ಮನಸ್ಸು ನಿರ್ಮ ಲವಾಗುವದೋ ಆ ಕ್ಷೇತ್ರಕ್ಕೊಂದು ಮಹತ್ವಕೊಡಬೇಕು. ಮನಸ್ಸು ನಿರ್ಮ ಲವಾಗುವದೇ ಪವಿತ್ರತೆಯ ಪ್ರಭಾವವು. ಇದಕ್ಕೇ ಪುಣ್ಯವೆಂದು ಕರೆಯುವರು. ಇರಲಿ. ಗಯಾಸುರನ ಈ ಅದ್ಭುತ ಪವಿತ್ರತೆಯಿಂದ ಜಗತ್ತು ಪಾವನವಾಗತೊಡ ಗಲು ಪಾಪಿಷ್ಠರ ಸಂಖ್ಯೆಯು ಕಡಿಮೆಯಾಗತೊಡಗಿತು. ಪಾಪಿಗಳ ಸಂಖ್ಯೆಯು ಕಡಿಮೆಯಾದ ಕೂಡಲೆ ಯಮಾಲಯವು ಹಾಳು ಬಿದ್ದಿತು. ಯಮದೂತರ ಅಂಜಿ ಕೆಯು ಜನರಿಗೆ ತಪ್ಪಿತು. ಅಪರಾಧಿಯಾದವನು ಪೋಲೀಸರಿಗೆ ಅಂಜುವದು ಸ್ವಾಭಾ ವಿಕವಷ್ಟೇ; ಉಳಿದವರಿಗೆ ಪೋಲೀಸರ ಅಂಜಿಕೆ ಏತರದು? ಇದೇ ಸ್ಥಿತಿಯು ಕೊನೆಯ ವರೆಗೂ ಉಳಿದರೆ ನನ್ನ ಅಧಿಕಾರವು ಸಹಜವಾಗಿ ಹೊರಟು ಹೋಗುವ ದೆಂದು ಯಮನು ವಿಷಾದಪಟ್ಟು ಬ್ರಹ್ಮದೇವರ ಬಳಿಯಲ್ಲಿ ವಿನಂತಿಯನ್ನು ಮಾಡಿ ಕೊಂಡನು. ಬ್ರಹ್ಮದೇವನಿಗೂ ತನ್ನ ಸೃಷ್ಟಿಕ್ರಮಕ್ಕೆ ಭಂಗಬರುವದೆಂಬ ಭೀತಿ ಯುಂಟಾಯಿತು. ಆಗ ಬ್ರಹ್ಮದೇವನು ಯಮಧರ್ಮನೊಡನೆ ಶ್ರೀ ವಿಷ್ಣುವಿನ ಬಳಿಗೆ ಹೋಗಿ ಎಲ್ಲ ಸಂಗತಿಗಳನ್ನು ನಿವೇದಿಸಿ ಇದಕ್ಕೇನುಪಾಯಮಾಡಬೇ ಕೆಂದು ಕೇಳಿದನು. ಸರ್ವಜ್ಞನಾದ ಮಹಾವಿಷ್ಣುವು ಹೆಚ್ಚಿಗೆ ಮಾತನಾಡದೆ ಯಜ್ಞಕ್ಕೋಸ್ಕರ ಆತನ ದೇಹವನ್ನು ಯಾಚಿಸಿರಿ, ಎಂದು ಉತ್ತರ ಕೊಟ್ಟನು. ಬ್ರಹ್ಮನು ಸಂತಸಬಟ್ಟು ಗಯಾಸುರನಲ್ಲಿಗೆ ಬಂದು ಯಜ್ಞಕ್ಕೋಸ್ಕರ ಆತನ ದೇಹ ವನ್ನು ಯಾಚಿಸಿದನು. ಗಯಾಸುರನು ಕೇವಲ ಪುಣ್ಯಪುರುಷನೇ ಆದದ್ದರಿಂದ ಅವನಿಗೆ ಯಾವ ಬಗೆಯ ಸ್ವಾರ್ಥವೂ ಇರಲಿಲ್ಲ. ಅವನು ಒಂದೇ ಮಾತಿಗೆ ತನ್ನ ದೇಹವನ್ನು ಕೊಡಲು ಒಪ್ಪಿಕೊಂಡನು. ಇದಕ್ಕೇ ಉದಾರತನದ ಪರಮಾವಧಿ ಯೆನ್ನುವರು. ಬಳಿಕ ಬ್ರಹ್ಮದೇವನು ಗಯಾಸುರನ ದೇಹವನ್ನೇ ಯಜ್ಞಭೂಮಿ ಯನ್ನಾಗ ಮಾಡಿ ಒಂದು ದೊಡ್ಡ ಯಜ್ಞವನ್ನು ಮಾಡಿದನು. ಅವಭೃತಾದಿಗಳು ತೀರಿದ ಬಳಿಕ ಗಯಾಸುರನು ಹತನಾದನೆಂದು ತಿಳಿದು ದೇವತೆಗಳೆಲ್ಲರೂ ಆತನ ಶರೀರವನ್ನು ಬ್ರಹ್ಮಸರೋವರದಲ್ಲಿ ಸ್ಥಾಪಿಸಿದರು; ನಿಜವಾಗಿಯೂ ಗಯಾಸು ರನು ಹತನಾಗಿರದೆ ಚೈತನ್ಯಯುಕ್ತನಾದ್ದರಿಂದ ತಲೆಯನ್ನು ಅಲ್ಲಾಡಿಸಿದನು. ಆಗ ಬ್ರಹ್ಮನು ಭೀತಿಗೊಂಡು ಅಸುರನನ್ನು ನಿಶ್ಚೇಷ್ಟಿತನನ್ನಾಗ ಮಾಡುವದಕ್ಕೆ ಯಮನಗರಿಯಲ್ಲಿದ್ದ ಬಹು ಬಲವಾದ ಧರ್ಮಶಿಲೆಯನ್ನು ಅವನ ತಲೆಯಮೇಲೆ

ಹೇರಿದನು. ಆದರೂ ಆ ಅಸುರನ ಚೈತನ್ಯವು ಕುಗ್ಗಲಿಲ್ಲ. ಆಗ ಸಮಸ್ತ ದೇವತೆಗಳೂ ಆ ಶಿಲೆಯನ್ನೇರಿ ನಿಂತರು. ಗಯಾಸುರನ ಪುಣ್ಯವು ಪ್ರಚಂಡವಾಗಿದ್ದದರಿಂದ ಎಲ್ಲ ದೇವತೆಗಳ ಭಾರವನ್ನೂ ಅದು ಸಹನ ಮಾಡಿತು. ಬಳಿಕ ಈ ಕೆಲಸವು ತಮಗೆ ಸಾಧ್ಯವಲ್ಲೆಂದು ಬ್ರಹ್ಮನು ವಿಷ್ಣುವಿನ ಕಡೆಗೆ ಹೋದನು. ಆಗ ವಿಷ್ಣುವು ಒಂದು ವಿಗ್ರಹವನ್ನು ಬ್ರಹ್ಮನ ಕೈಗಿತ್ತನು. ಆ ವಿಗ್ರಹಸ್ಥಾಪನೆಯಿಂದಲೂ ದೈತ್ಯನು ನಿಶ್ಚಲತೆಯನ್ನು ಹೊಂದಲಿಲ್ಲ. ಬಳಿಕ ಬ್ರಹ್ಮದೇವರ ಪ್ರಾರ್ಥನೆಯಿಂದ ಶ್ರೀ ವಿಷ್ಣುವೇ ಆದಿಗದೆಯನ್ನು ಧರಿಸಿ ಗಯಾಸುರನ ತಲೆಯ ಮೇಲೆ ನಿಂತನು. ಆಗ ಆ ದೈತ್ಯನಲ್ಲಿ ನಿಶ್ಚಲತೆಯು ಪ್ರಾಪ್ತವಾಗಲು ಆತನು ದೇವತೆಗಳನ್ನು ಕುರಿತು ನುಡಿದನೇನಂದರೆ—ದೇವತೆಗಳಿರಾ, ಇಷ್ಟೊಂದು ಖಟಾಟೋಪವನ್ನು ಯಾತಕ್ಕೋಸ್ಕರ ಆಚರಿಸಿದಿರಿ. ಮೊದಲೇ ನನಗೆ ಹೇಳಿ ಬಿಟ್ಟಿದ್ದರೆ, ನನ್ನಷ್ಟಕ್ಕೆ ನಾನೇ ನಿಶ್ಚಲನಾಗಿ ನಿಮ್ಮ ಮನೋರಥವನ್ನು ಪೂರ್ಣಪಡಿಸುತ್ತಿದ್ದೆನು, ಎಂದು ನುಡಿಯಲು ಶ್ರೀ ವಿಷ್ಣುವು ಆತನ ಮಹತ್ತರವಾದ ಗುಣಕ್ಕೆ ಮೆಚ್ಚಿ ಆತನ ಹೆಸರನ್ನೇ ಆ ಕ್ಷೇತ್ರಕ್ಕೆ ಇಟ್ಟನು. ಅಂದಿನಿಂದ ಗಯಾಕ್ಷೇತ್ರವು ಗಯಾಸುರನ ಪುಣ್ಯ ಸಾರ್ಥಕವಾಗಿ ಲೋಕಕ್ಕೆ ಪುಣ್ಯವನ್ನು ಕೊಡುವ ಪವಿತ್ರ ಕ್ಷೇತ್ರವೆನಿಸಿತು.

ಈ ಪ್ರಕಾರವಾಗಿ ಗಯಾಕ್ಷೇತ್ರದ ಉತ್ಪತ್ತಿಯಿರುವದು. ಅಸುರನ ಪುಣ್ಯನಿಮಿತ್ತವಾಗಿ ಸಮಸ್ತದೇವತೆಗಳು, ಕೇದಾರೇಶ್ವರ, ಬ್ರಹ್ಮದೇವರು, ವಿಶ್ವೇದೇವರು, ಅಶ್ವಿನೀಕುಮಾರರು, ಗದಾಧರನಾದ ವಿಷ್ಣು ಇವರೇ ಮೊದಲಾದವರು ಅಲ್ಲಿ ಸ್ಥಿರವಾಗಿ ನೆಲಸಿದ್ದರಿಂದ ವೈಕುಂಠ, ಸತ್ಯಲೋಕ, ಕೈಲಾಸ, ಸ್ವರ್ಗ ಮೊದಲಾದ ಲೋಕಗಳು ಅಲ್ಲಿ ಇದ್ದಂತಾಗಿರುತ್ತದೆ. ಇಲ್ಲಿ ಕ್ಷೇತ್ರವಿಧಿಯನ್ನೂ ತೀರ್ಥಶ್ರಾದ್ಧವನ್ನೂ ಮಾಡಿದರೆ ಅಗಣಿತ ಫಲವು ಪ್ರಾಪ್ತವಾಗುವದೆಂದು ಶ್ರೀ ಮಹಾವಿಷ್ಣುವೇ ವರವನ್ನು ಕೊಟ್ಟಿರುತ್ತಾನೆ. ಕಾಶೀಕ್ಷೇತ್ರಕ್ಕೆ ಹೋದ ಎಲ್ಲ ಯಾತ್ರಿಕರೂ ಈ ಕ್ಷೇತ್ರಕ್ಕೆ ಬಂದು ಹೋಗುವದು ವಾಡಿಕೆಯಾಗಿದೆ. ಶ್ರೀವಿಷ್ಣುಪಾದದ ಮೇಲೆ ಪಿಂಡಶ್ರಾದ್ಧ ಮಾಡುವದೇ ಇಲ್ಲಿ ಪ್ರಾಮುಖ್ಯವಾಗಿರುತ್ತದೆ.

## ಪ್ರಯಾಗ.

ಶ್ರೀ ಕಾಶೀಕ್ಷೇತ್ರದಿಂದ ಪೂರ್ವಕ್ಕೆ ಗಯಾಕ್ಷೇತ್ರವಿದ್ದಂತೆ ಪಶ್ಚಿಮಕ್ಕೆ ಪ್ರಯಾಗವೆಂಬ ಮಹಾಕ್ಷೇತ್ರವಿರುತ್ತದೆ. ಮುಸಲ್ಮಾನ ರಾಜರ ಕಾಲದಲ್ಲಿ ಈ

ಕ್ಷೇತ್ರಕ್ಕೆ ಅಲ್ಹಾಬಾದವೆಂಬ ಹೆಸರು ಬಂದಿರುತ್ತದೆ. ಇದು ಪುರಾಣಪ್ರಸಿದ್ಧ ವಾದ ಕ್ಷೇತ್ರವು. ಗಂಗಾ-ಯಮುನಾ-ಸರಸ್ವತೀ ಎಂಬ ಮೂರು ನದಿಗಳ ಸಂಗಮಸ್ಥಳದಲ್ಲಿ ಈ ಪವಿತ್ರ ಕ್ಷೇತ್ರವಿರುತ್ತದೆ. ಈ ಮೂರು ನದಿಗಳ ಸಂಗಮಕ್ಕೆ ತ್ರಿವೇಣಿ ಎಂಬ ಹೆಸರು ಪ್ರಾಪ್ತವಾಗಿರುತ್ತದೆ. ಈ ಕ್ಷೇತ್ರಕ್ಕೆ ಹೋದ ಸುವಾಸಿನಿಯರು ಇಲ್ಲಿ ತ್ರಿವೇಣೀದಾನವನ್ನು ಕೊಡುವರು. ಶುದ್ಧಗಂಗೆಯು ಈ ಕ್ಷೇತ್ರದಲ್ಲಿಯೇ ಸಿಗುವದಾದ್ದರಿಂದ ಯಾತ್ರಿಕರು ಇಲ್ಲಿಂದಲೇ ಗಂಗೆಯ ಉದುಕವನ್ನು ತುಂಬಿಕೊಳ್ಳುವರು. ರಾಮೇಶ್ವರ ಯಾತ್ರೆ ಮಾಡಿದವರು ಭಾಗೀರಥಿಯಲ್ಲಿ ಸೇತುವೆಯ ಮಳಲನ್ನು ಕೂಡಿಸಬೇಕಾದರೆ ಇಲ್ಲಿಗೇ ಬಂದು ವಾಲುಕಾಲಿಂಗವನ್ನು ಮಾಡಿ ವಿಧ್ಯುಕ್ತವಾಗಿ ಪೂಜಿಸುವ ಪದ್ಧತಿಯುಂಟು; ಈ ಕ್ಷೇತ್ರವು ಪವಿತ್ರತೆಯ ದೃಷ್ಟಿಯಿಂದ ಪ್ರಸಿದ್ಧವಿದ್ದಂತೆ ಆಧುನಿಕ ಕಾಲದಲ್ಲಿ ವ್ಯಾಪಾರ-ರಾಜಕೀಯ ಕಾರಣಗಳಿಂದಲೂ ಪ್ರಸಿದ್ಧಿಯನ್ನು ಪಡೆದಿರುತ್ತದೆ.

ಈ ವರೆಗೆ ವರ್ಣಿಸಿದ ಕ್ಷೇತ್ರಗಳಲ್ಲದೆ ಉತ್ತರ ಹಿಂದುಸ್ತಾನದಲ್ಲಿ ಗಂಗೋತ್ರಿ ಬದರೀಕೇದಾರ ಮೊದಲಾದ ಅಸಂಖ್ಯ ಕ್ಷೇತ್ರಗಳಿರುತ್ತವೆ. ಅವೆಲ್ಲ ಮುಕ್ತಿಪ್ರದಾಯಕಗಳಿರುತ್ತವೆ. ಒಡ್ಡೀಜಗನ್ನಾಥವೆಂಬದೊಂದು ಸುಪ್ರಸಿದ್ಧ ಕ್ಷೇತ್ರವಿರುತ್ತದೆ. ನಮ್ಮ ಕರ್ನಾಟಕದಿಂದ ಉತ್ತರ ಹಿಂದುಸ್ಥಾನದ ಯಾತ್ರೆಗಳನ್ನು ಮಾಡಬೇಕಾದರ ದಾರಿಯಲ್ಲಿ ಅಸಂಖ್ಯ ತೀರ್ಥ-ಕ್ಷೇತ್ರಗಳಿರುವವು ಅವುಗಳಲ್ಲಿ ನಾಶಿಕ-ತ್ರ್ಯಂಬಕೇಶ್ವರವು ಒಂದು ಸುಪ್ರಸಿದ್ಧ ಕ್ಷೇತ್ರವು; ಇದು ಗೋದಾವರೀ ತೀರವು; ಇದು ಶ್ರೀರಾಮನು ವನವಾಸಕ್ಕೆ ಹೊರಟಾಗ ವಾಸಮಾಡಿದ ಆಶ್ರಮಸ್ಥಾನವು. ಇಲ್ಲಿಯ ಪಂಚವಟಿಯಲ್ಲಿ ಶ್ರೀ ರಾಮ-ಲಕ್ಷ್ಮಣ ಸೀತಾ ಮೊದಲಾದವರ ಸುಂದರ ಮೂರ್ತಿಗಳಿರುತ್ತವೆ. ಇದು ದಕ್ಷಿಣಹಿಂದುಸ್ತಾನದ ಕ್ಷೇತ್ರವೆನಿಸಿಕೊಳ್ಳುವದು. ಉತ್ತರ ಹಿಂದುಸ್ತಾನದಂತೆ ದಕ್ಷಿಣಹಿಂದುಸ್ತಾನದಲ್ಲಿಯೂ ಅಸಂಖ್ಯ ಕ್ಷೇತ್ರಗಳಿವೆ. ಪುರಾಣಪ್ರಸಿದ್ಧ ಕ್ಷೇತ್ರಗಳಂತೆ ಭಕ್ತಸಾಂಪ್ರದಾಯದಿಂದ ಪ್ರಸಿದ್ಧಿಗೆ ಬಂದ ಕ್ಷೇತ್ರಗಳೂ ಇರುವವು. ಪಂಢರಪುರ, ಗಾಣಗಾಪುರ, ಶ್ರೀ ನರಸೋಬನವಾಡಿ, ಶೆಂಗೇರಿ, ಆನಂದವನ ಇವೇ ಮೊದಲಾದವುಗಳು ಭಕ್ತಸಾಂಪ್ರದಾಯದ ಕ್ಷೇತ್ರಗಳಿರುತ್ತವೆ.

## ಗೋಕರ್ಣ

ಪುರಾಣಪ್ರಸಿದ್ಧ ಕ್ಷೇತ್ರಗಳಲ್ಲಿ ಹಂಪೆ, ಗೋಕರ್ಣ, ಉಡುಪಿ, ರಾಮೇಶ್ವರ ಕಂಚಿ, ವೇಂಕಟಗಿರಿ, ಶ್ರೀಶೈಲ, ಮೊದಲಾದವುಗಳು ಸುಪ್ರಸಿದ್ಧವಿರುತ್ತವೆ. ಇವು

ಗಳಲ್ಲಿ ಗೋಕರ್ಣ ಕ್ಷೇತ್ರದ ಉತ್ಪತ್ತಿಯು ಬಹು ರಹಸ್ಯವಾಗಿರುತ್ತದೆ. ಪರಮೇಶ್ವರನು ಅಹಂಭಾವದ ಕೆಲಸಕ್ಕೆ ಎಂದೂ ಜಯವನ್ನು ಕೊಡುವದಿಲ್ಲೆಂಬದು ಈ ಕ್ಷೇತ್ರದ ಉತ್ಪತ್ತಿಯ ಇತಿಹಾಸವನ್ನು ನೋಡಿದರೆ ಸಹಜವಾಗಿ ಸಿದ್ಧವಾಗುತ್ತದೆ ಮೊದ ಮೊದಲು ಅವರಿಗೆ ಯಶಸ್ಸು ಸಿಕ್ಕಂತೆ ತೋರಿದರೂ ಕೊನೆಗೆ ಅವರಿಗೆ ವಿಷಾದದ ಹೊರತು ಗತ್ಯಂತರವಿಲ್ಲ. ರಾವಣನೆಂಬ ಬಲಾಢ್ಯರಾಕ್ಷಸನು ನಾಮಾಕಿಂತನಾದ ಶಿವೋಪಾಸಕನಿದ್ದನು. ಆದರೆ ಅವನಲ್ಲಿ ಅಹಂಕಾರವು ಮಾತ್ರ ವಿಶೇಷವಾಗಿತ್ತು. ಈ ಅಹಂಕಾರ ವಿಶೇಷದಿಂದ ಅವನ ಉಪಾಸನೆಯು ನಿಷ್ಫಲವನ್ನು ಹೊಂದಿತು. ರಾವಣನ ತಾಯಿಯು ವಾಲುಕಾಮಯಲಿಂಗವನ್ನು ಪೂಜಿಸುತ್ತಿರಲು, ನನ್ನಂಥ ಸಮರ್ಥನ ತಾಯಿಯು ವಾಲುಕಾಲಿಂಗವನ್ನು ಪೂಜಿಸುವದು ಅಗೌರವವಿರುತ್ತದೆ. ಈಕೆಗೆ ಪರಮೇಶ್ವರನ ಆತ್ಮಲಿಂಗವನ್ನೇ ತಂದು ಕೊಡಬೇಕು, ಎಂಬ ವಿಚಾರಗಳು ರಾವಣನಲ್ಲಿ ಉದ್ಭವಿಸಿದವು. ಆ ಕೂಡಲೆ ಅವನು ತಾಯಿಯೆದುರಿಗೆ ಪೌರುಷದಿಂದ ಮಾತನಾಡಿ ಕೈಲಾಸನಗರಿಗೆ ಬಂದನು. ರಾವಣನ ಘೋರತಪಸ್ಸಿಗೆ ಪರಮೇಶ್ವರನು ಪ್ರಸನ್ನನಾಗಬೇಕಾಯಿತು. ಯಾಕಂದರೆ ರಾವಣನು ಕೇವಲ ಹಟವಾರಿಯು; ಕೈಹಿಡಿದ ಕೆಲಸವನ್ನು ಕೊನೆಗಾಣಿಸುವಲ್ಲಿ ನಿಶ್ಚಯಬುದ್ಧಿಯುಳ್ಳವನು. ಅದರಲ್ಲಿ ದೇಹಾಂತವಾದರೂ ಹಿಂದುಮುಂದು ನೋಡತಕ್ಕವನಲ್ಲ. ಅದ್ದರಿಂದ ಅವನ ತಪಸ್ಸು ತಾಮಸಯುಕ್ತವಾದರೂ ಪರಮೇಶ್ವರನು ಅವನ ಇಚ್ಛೆಯಂತೆ ಮಾಡಬೇಕಾಯಿತು.

ರಾವಣನು ಹಟದಿಂದ ಪರಮೇಶ್ವರನ ಆತ್ಮಲಿಂಗವನ್ನು ತಕ್ಕೊಂಡು ಒಳ್ಳೇ ಉಬ್ಬಿನಿಂದ ತನ್ನ ರಾಜಧಾನಿಗೆ ನಡೆದನು. ಆದರೆ ಅವನ ಈ ಕೃತಿಯು ವಿಘಾತುಕವಾದ್ದರಿಂದ ಹಾಗು ಅವನ ಅಹಂಮನ್ಯತೆಗೆ ಮಂಕನ್ನು ಹಚ್ಚಬೇಕಾದ್ದರಿಂದಲೂ ಸೃಷ್ಟಿಸಂರಕ್ಷಕನಾದ ಶ್ರೀ ಮಹಾವಿಷ್ಣುವಿಗೆ ಆಲೋಚನೆಯುಂಟಾಯಿತು. ಆಗ ಆತನು ಶಾಂತ ಮನಸ್ಸಿನಿಂದ ಯುಕ್ತಿಯನ್ನು ಹುಡುಕಹತ್ತಿದನಲ್ಲದೆ ಕೆಲಸ ಕೆಡಿಸಿಬಿಟ್ಟನೆಂದು ಪರಮೇಶ್ವರನ ಮೇಲೆ ಹರಿಹಾಯಲಿಲ್ಲ. ಈ ವಿಷಯವನ್ನು ಮಾನವರು ತಿಳಿಯಬೇಕಾದದ್ದು ಅವಶ್ಯವಾಗಿದೆ. ಒಂದು ಕುಟುಂಬದಲ್ಲಿ ಒಬ್ಬನು ಕುಟುಂಬಕ್ಕೆ ಹಾನಿಯೊದಗುವ ಯಾವದೊಂದು ಕಾರ್ಯವನ್ನು ಮಾಡಿದರೆ, ಮತ್ತೊಬ್ಬನು ವಿಚಾರದಿಂದ ಆ ಹಾನಿಯನ್ನು ತುಂಬಿಕೊಳ್ಳಬೇಕಲ್ಲದೆ, ಪರಸ್ಪರರು

ಕಲಹಾಸಕ್ತರಾಗಬಾರದೆಂಬದನ್ನು ಬೋಧಿಸುವದಕ್ಕಾಗಿ ಮಹಾವಿಷ್ಣುವು ಹೀಗೆ ಆಚರಿಸಿರುತ್ತಾನೆ. ಇರಲಿ.

ಯುಕ್ತಿಕೋವಿದನಾದ ವಿಷ್ಣುವು ಒಂದು ಯುಕ್ತಿಯನ್ನು ಹುಡುಕಿತೆಗೆದು ಮಾಯೆಯಿಂದ ರಾವಣನಿಗೆ ಲಘುಶಂಕೆಯನ್ನು ಹೆಚ್ಚಿಸಿ ಆ ವೇಳೆಯಲ್ಲಿ ಗಣಪತಿಯು ಗೋಪಾಲ ವೇಷದಿಂದ ಅವನ ಕಣ್ಣಿಗೆ ಬೀಳುವಂತೆ ಏರ್ಪಡಿಸಿದನು. ಲಘುಶಂಕೆಗೆ ಹೋಗುವ ಆತುರವುಳ್ಳವನಾದ ರಾವಣನಿಗೆ ಕೈಯಲ್ಲಿರುವ ಆತ್ಮಲಿಂಗವನ್ನು ಗಣಪತಿಯ ಕೈಯಲ್ಲಿ ಕೊಡುವ ಪ್ರಸಂಗ ಬಂದಿತು. ಗಣಪತಿಯು ಆತ್ಮಲಿಂಗವನ್ನು ತಕ್ಕೊಳ್ಳದಾದನು. ಮೂರು ಸಾರೆ ಕೂಗುವೆನು, ಅಷ್ಟರಲ್ಲಿ ಬರದಿದ್ದರೆ ಈ ಲಿಂಗವನ್ನು ಕೆಳಗಿಡುವೆನು, ಎಂಬ ಕರಾರುಮಾಡಿಕೊಂಡು ಗಣಪತಿಯು ಲಿಂಗವನ್ನು ತಕ್ಕೊಂಡನು. ರಾವಣನಿಗೆ ಮಾಯೆಯಿಂದುಂಟಾದ ಮೂತ್ರ-ಪೀಡೆಯಾದ್ದರಿಂದ ಗಣಪತಿಯು ಮೂರು ಕೂಗು ಆದರೂ ಅವನ ಲಘುಶಂಕೆಯು ತೀರಲಿಲ್ಲ. ಕಡೆಗೆ ಗಣಪತಿಯು ಕರಾರಿನಂತೆ ಆತ್ಮಲಿಂಗವನ್ನು ಕೆಳಗಿರಿಸಿದನು. ರಾವಣನು ಕೆಲಸವು ಕೆಟ್ಟಿತೆಂದು ಗಡಿಬಿಡಿಯಿಂದ ಓಡಿಬರಲು, ಲಿಂಗವು ಭೂಗತವಾಗಿತ್ತು. ಆಗ ಅವನು ಸಂತಾಪದಿಂದ ಗಣಪತಿಯ ತಲೆಗೆ ಒಮ್ಮೆ ಗುದ್ದಿ, ಲಿಂಗವನ್ನು ಕಿತ್ತುಕೊಳ್ಳುವ ಪ್ರಯತ್ನ ನಡಿಸಿದನು. ಆದರೆ ಈಶ್ವರೀಸಂಕೇತದಂತೆ ಅದು ರಾವಣನ ಕೈಗೆ ಬರದಾಯಿತು. ರಾವಣನ ಸಾಮರ್ಥ್ಯವೆಲ್ಲ ತೀರಿತು. ಆತನು ಹತಾಶನಾದನು. ಮಹಾಬಲಿಷ್ಠನಾದ ರಾವಣನ ಬಲವನ್ನು ಮೀರಿ ನಿಂತದ್ದರಿಂದ ಆ ಆತ್ಮಲಿಂಗಕ್ಕೆ "ಮಹಾಬಲೇಶ್ವರ" ಎಂಬ ಹೆಸರುಂಟಾಯಿತು. ರಾವಣನು ಕಸುವಿನಿಂದ ಜಗ್ಗುವಾಗ ಆತ್ಮಲಿಂಗವು ಗೋಕರ್ಣಾಕಾರವಾಗಿ ಮುರಿಗೆಗಳನ್ನು ಹೊಂದಿದ್ದರಿಂದ ಆ ಲಿಂಗವಿರುವ ಆ ಸ್ಥಳಕ್ಕೆ ಗೋಕರ್ಣವೆಂಬ ಹೆಸರುಂಟಾಯಿತು. ರಾವಣನು ಭಗ್ನಮನೋರಥನಾಗಿ ಮೋರೆಯೊಣಗಿಸಿಕೊಂಡು ಮನೆಗೆ ಹೋದನು. ಆಸುರೀ ಸಂಪತ್ತಿನವರ ಬಾಳು ಕಡೆಗೆ ಹೀಗೆಯೇ ಆಗುವದೆಂಬದನ್ನು ಆಗಿನ ಅವನ ಮುಖಭಾವದಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತಿರಬಹುದು. ಈ

ಅಂಶವನ್ನು ನಾವುಗಳು ಚನ್ನಾಗಿ ತಿಳಿದು ನೋಡುವದು ವಿಹಿತವಾಗಿದೆ. ಯಾವದೊಂದು ವಿಷಯವನ್ನು ಕಥಾರೂಪದಿಂದ ಕೇಳಿಬಿಡುವದಕ್ಕಿಂತ ಅದರಲ್ಲಿಯ ರಹಸ್ಯವನ್ನು ಗ್ರಹಿಸುವದು ಶ್ರೇಯಸ್ಕರವಾಗಿದೆ. ರಾವಣನು ಸಂಪಾದಿಸಿದ ಲಿಂಗ ವನ್ನು ವಿಷ್ಣುವು ನ್ಯಾಯವಾದ ಉಪಾಯದಿಂದಲೇ ಕಸಿದುಕೊಂಡನು. ಯಾವ ನಿಗಾದರೂ ಅವನ ಯೋಗ್ಯತೆಗೆ ಅನುರೂಪವಾದ ವಸ್ತುವು ಅವನಿಗೆ ದಕ್ಕುವದಲ್ಲದೆ, ಯೋಗ್ಯತೆಗೆ ಮೀರಿದ ವಸ್ತುವು ದಕ್ಕಲಾರದು. ಆದ್ದರಿಂದ ಮಾನವರಾದ ನಾವು ಇದರಿಂದ ಏನು ತಿಳಿದುಕೊಳ್ಳಬೇಕೆಂಬದನ್ನು ನಮ್ಮ ಚಾಣಾಕ್ಷ ವಾಚಕರೇ ತರ್ಕಿಸಿಕೊಳ್ಳತಕ್ಕದ್ದು. ಇರಲಿ.

ಈ ಮೇರೆಗೆ ಗೋಕರ್ಣಕ್ಷೇತ್ರವು ಭೂತಲದಲ್ಲುಂಟಾಗಿ ಪ್ರಾಣಿಮಾತ್ರರಿಗೆ ಪುಣ್ಯಸಂಪತ್ತನ್ನೊದಗಿಸಿಕೊಡುತ್ತದೆ. ಈ ಕ್ಷೇತ್ರವು ನಮ್ಮ ಕರ್ನಾಟಕದಲ್ಲಿದ್ದು, ಪಶ್ಚಿಮಸಮುದ್ರತೀರವನ್ನು ಹೊಂದಿಕೊಂಡಿರುತ್ತದೆ. ಆದ್ದರಿಂದ ಈ ಕ್ಷೇತ್ರಕ್ಕೆ ಜಲಮಾರ್ಗದಿಂದಲೂ ಹೋಗಬಹುದು. ಇದು ದಕ್ಷಿಣಕಾಶಿಯೆಂದೆನಿಸಿಕೊಂಡಿ ರುವದರಿಂದ ಈ ಕ್ಷೇತ್ರಕ್ಕೆ ಬಹುದೂರಿನ ಜನರು ಬರುವರು. ನಮ್ಮ ಕರ್ನಾಟಕ ದಲ್ಲಿಯ ಎಷ್ಟೋ ಕುಟುಂಬಗಳು ಈ ಕ್ಷೇತ್ರವನ್ನು ಪ್ರತಿವರುಷ ಕಂಡುಬರುತ್ತಿರು ವರು. ಈ ಕ್ಷೇತ್ರಕ್ಕೆ ಮಹಾಬಳೇಶ್ವರನೇ ಅಧಿದೈವತವು; ಕೋಟಿತೀರ್ಥವೇ ಇಲ್ಲಿ ಮುಖ್ಯ ತೀರ್ಥವು; ಈ ಕ್ಷೇತ್ರದಲ್ಲಿ ತೀರ್ಥವಿಧಿಗಳು ನೆರವೇರಿಸಲ್ಪಡುವವು.

## ಉಡುಪಿ.

ಶ್ರೀ ಕ್ಷೇತ್ರಗೋಕರ್ಣದ ದಕ್ಷಿಣಕ್ಕೆ ಬಹು ದೂರದಲ್ಲಿ ಉಡುಪಿ ಎಂಬ ಸುಪ್ರಸಿದ್ಧ ಕ್ಷೇತ್ರವಿರುವದು. ಇದೂ ಸಮುದ್ರತೀರಪ್ರದೇಶವು. ಈ ಕ್ಷೇತ್ರ ವಾದರೂ ಬಹು ಪುರಾತನದ್ದು; ಆದರೆ ದ್ವೈತಮತಸ್ಥಾಪನಾಚಾರ್ಯರಾದ ಶ್ರೀ ಮನ್ಮಧ್ವಾಚಾರ್ಯರು ಇಲ್ಲಿ ತಪಸ್ಸನ್ನಾಚರಿಸಿ ಶ್ರೀ ಕೃಷ್ಣಮೂರ್ತಿಯನ್ನು ಸ್ಥಾಪಿಸಿದಂದಿನಿಂದ ಇದರ ಮಹತ್ವವು ವಿಶೇಷವಾಗಿ ಬೆಳೆದಿರುತ್ತದೆ. ಇಲ್ಲಿ ಪುರಾ ತನ ದೇವಸ್ಥಾನಗಳಿರುತ್ತವೆ. ಚಂದ್ರಮೌಳೇಶ್ವರ-ಅನಂತೇಶ್ವರ ದೇವಾಲಯಗಳು ಬಹುಪುರಾತನದವಿರುತ್ತವೆ. ಶ್ರೀ ಕೃಷ್ಣನ ದೇವಾಲಯವೇ ಇಲ್ಲಿ ಮುಖ್ಯ.

ಮಧ್ವಸರೋವರವೇ ಮುಖ್ಯ ತೀರ್ಥ; ಶ್ರೀ ಕೃಷ್ಣನ ಅರ್ಚನೆಗಾಗಿ ಎಂಟು ಜನ ಯತಿಗಳಿರುವರು. ಇವರು ಎರಡೆರಡು ವರ್ಷಕ್ಕೊಮ್ಮೆ ಸರತಿಯಂತೆ ಬದಲಿಸಿ ಎಲ್ಲರೂ ಶ್ರೀ ಕೃಷ್ಣನ ಅರ್ಚನಕ್ರಮವನ್ನು ನಡಿಸುವರು. ಈ ಎಂಟುಜನ ಯತಿಗಳ ಮಠಗಳು ನೋಡತಕ್ಕಂಥವಿರುತ್ತವೆ.

ಉಡುಪಿಯಲ್ಲಿ ಅನ್ನದಾನವು ವಿಶೇಷವಾಗಿ ಮಾಡಲ್ಪಡುವದು. ಆದ್ದರಿಂದ ಅಲ್ಲಿಯ ಶ್ರೀ ಕೃಷ್ಣನಿಗೆ ಅನ್ನಬ್ರಹ್ಮನೆಂಬಲೇ ಹೆಸರುಂಟಾಗಿದೆ. ಉಡಪಿಗೆ ಹೋಗಬೇಕಾದರೆ ಜಲಮಾರ್ಗದಿಂದ ಹೋಗಬಹುದು. ಇಲ್ಲವೆ ಶಿವಮೊಗ್ಗೆಯಿಂದ ಮೋಟಾರಿನಲ್ಲಿ ಕುಳಿತು ಹೋಗಬಹುದು. ಶಿವಮೊಗ್ಗೆಯಿಂದ ಉಡಿಪಿಯು ಸರಾಸರಿ ತೊಂಭತ್ತು ಮೈಲಾಗುತ್ತದೆ; ಎತ್ತಿನ ಬಂಡಿಗಳೂ ಬಾಡಿಗೆಯಿಂದ ಸಿಕ್ಕುತ್ತವೆ. ದಾರಿಯು ಪ್ರಯಾಣಕ್ಕೆ ಸುಖಕರವಿರುತ್ತದೆ.

ಉಡಿಪಿಯಲ್ಲಿ ಕ್ಷೇತ್ರವಿಧಿಗೆ ವಿಶೇಷ ಮಹತ್ವವಿಲ್ಲ. ಬೇಕಾದವರು ಆಚರಿಸಬಹುದು. ಈ ಕ್ಷೇತ್ರವು ಈಗಿನ ರಾಜಕೀಯ ಆಡಳಿತೆಯಲ್ಲಿ ತಾಲೂಕಿನ ಸ್ಥಳವಾಗಿರುತ್ತದೆ. ಜನಸಂಖ್ಯೆಯಾದರೂ ತಕ್ಕಮಟ್ಟಿಗೆ ಜನಾಗಿರುತ್ತದೆ. ದಕ್ಷಿಣ ಕನ್ನಡ ಪ್ರಾಂತದಲ್ಲಿರುವ ಮುಖ್ಯ ಮುಖ್ಯ ಕ್ಷೇತ್ರಗಳಲ್ಲಿ ಈ ಕ್ಷೇತ್ರವು ಗಣಿಸಲ್ಪಡುತ್ತದೆ.

## ಲೇಖಾಂಕ ೯.

## ಪಾತ್ರಾಪಾತ್ರವಿಚಾರ.

ಗತಿಸಿದ ಲೇಖಾಂಕದಲ್ಲಿ ಕೆಲವು ಕ್ಷೇತ್ರಗಳ ಉತ್ಪತ್ತಿರಹಸ್ಯವನ್ನು ಹೇಳಿ ವಾಚಕರಿಗೆ ಆನಂದವನ್ನುಂಟು ಮಾಡಿರುತ್ತದೆ. ಈ ಲೇಖಾಂಕದಲ್ಲಿ ತೀರ್ಥ-ಯಾತ್ರೆಗೆ ಪಾತ್ರರು ಯಾರು? ಅಪಾತ್ರರು ಯಾರು ಎಂಬದನ್ನು ವಿವರಿಸುವ ವಿಚಾರವಿರುತ್ತದೆ.

ಯಾವ ಕೆಲಸವನ್ನು ಮಾಡಲಿಕ್ಕಾದರೂ ಪಾತ್ರಾಪಾತ್ರತೆಯ ವಿಚಾರವು ಅವಶ್ಯವಾಗಿರುತ್ತದೆ. ಯಾಕೆಂದರೆ ಪಾತ್ರತೆಯುಳ್ಳವನಿಗೆ ಕಾರ್ಯದಿಂದ ಪ್ರಯೋಜನವಾದಂತೆ ಅಪಾತ್ರನಿಗೆ ಎಂದೂ ಆಗುವದಿಲ್ಲ. ಪಾತ್ರತೆಯೆಂದರೆ ಯೋಗ್ಯತೆಯು; ಅಂದರೆ ಸ್ವೀಕೃತಕಾರ್ಯದಲ್ಲಿ ಫಲಪಡೆಯುವ ಸಾಮರ್ಥ್ಯವು. ಈ ಸಾಮರ್ಥ್ಯವು ಬೇರೆ ಬೇರೆ ಕೆಲಸಗಳಿಗೋಸ್ಕರ ಬೇರೆ ಬೇರೆಯಾಗಿರುತ್ತದೆಂಬದನ್ನು ಹೇಳಲವಶ್ಯವಿಲ್ಲ. ಮಾನಸಿಕ ಸಾಮರ್ಥ್ಯದ ಕೆಲಸಗಳು ಬೇರೆ, ಶಾರೀರಿಕ ಸಾಮರ್ಥ್ಯದ ಕೆಲಸಗಳು ಬೇರೆ; ಇವೆರಡೂ ಸಾಮರ್ಥ್ಯಗಳಲ್ಲಿ ಶಾರೀರಿಕ ಸಾಮರ್ಥ್ಯವು ಒಂದೇ ಬಗೆಯಾಗಿರುವದು. ಒಬ್ಬನಲ್ಲಿ ಹೆಚ್ಚು ಸಾಮರ್ಥ್ಯವಿರಬಹುದು. ಇನ್ನೊಬ್ಬನಲ್ಲಿ ಕಡಿಮೆಯಿರಬಹುದು, ಇಷ್ಟೇ ಇದರಲ್ಲಿಯ ಭೇದವು, ಆದರೆ ಮಾನಸಿಕ ಸಾಮರ್ಥ್ಯದ ವಿಚಾತವು ಹಲವು ಪ್ರಕಾರದ್ದಿರುವದು. ಕೆಲವರಲ್ಲಿ ಬೌದ್ಧಿಕ ಶಕ್ತಿಯು ವಿಶೇಷವಾಗಿರುವದು. ಕೆಲವರಲ್ಲಿ ಪವಿತ್ರತೆಯು ಪ್ರೀತಿಯು ಹೆಚ್ಚಿರುವದು. ಕೆಲವರ ಮನಸ್ಸು ರಾಜಸಶಕ್ತಿಯಿಂದ ಕೂಡಿರುವದು. ಕೆಲವರ ಮನಸ್ಸು ತಾಮಸಶಕ್ತಿಯಿಂದ ಕೂಡಿರುವದು. ಕೆಲವರ ಮನಸ್ಸು ಸತ್ವದಿಂದ ಕೂಡಿರುವದು. ಈ ಶಕ್ತಿಗಳ ಯೋಗದಿಂದಲೇ ಪಾತ್ರಾಪಾತ್ರ ನಿರ್ಣಯವನ್ನು ಮಾಡಲಿಕ್ಕೆ ಬರುವದು. ಲೌಕಿಕ ವ್ಯವಹಾರದಲ್ಲಿಯ ತರಗತಿಯ ತಾರತಮ್ಯವೇ ಪಾತ್ರಾಪಾತ್ರವೆಂದೆನಿಸಿಕೊಳ್ಳುವದು.

ಈ ತಾರತಮ್ಯದ ತಳಹದಿಯ ಮೇಲೆಯೇ ಇಷ್ಟು ದೊಡ್ಡ ಜಗತ್ತು ನಿರ್ಮಿಸಲ್ಪಟ್ಟಿರುತ್ತದೆ; ಈ ತಾರತಮ್ಯವಿಲ್ಲದಿದ್ದರೆ ಜಗತ್ತು ಈ ಸ್ಥಿತಿಯಲ್ಲಿ ದೃಗ್ಗೋಚರವಾಗುತ್ತಿತ್ತೋ ಇಲ್ಲವೋ ಎಂಬದು ಸಂಶಯಾಸ್ಪದವೇ ಸರಿ. ಅಂತೇ ಜಗತ್ತಿನ ಪ್ರತಿಯೊಂದು ವಿಷಯದಲ್ಲಿ ತಾರತಮ್ಯವು ಅಥವಾ ಪಾತ್ರಾಪಾತ್ರತೆಯ ವಿಚಾರವು ವ್ಯಕ್ತವಾಗುತ್ತಿರುತ್ತದೆ. ಲೌಕಿಕ ಅಧಿಕಾರಿಗಳನ್ನು ನೋಡಿರಿ. ದೈವಿಕಶಕ್ತಿಯುಳ್ಳವರನ್ನು ನೋಡಿರಿ. ಸಾಮಾನ್ಯ ಜನರನ್ನು ತಕ್ಕೊಳ್ಳಿರಿ ಎಲ್ಲಿ ನೋಡಿದರೂ ಪಾತ್ರಾಪಾತ್ರತೆಯ ವಿಚಾರವು ಇದ್ದೇ ಇರುತ್ತದೆ. ಹೀಗೆ ಜಗತ್ತಿನ ಪ್ರತಿಯೊಂದು ವಿಷಯದಲ್ಲಿ ಪಾತ್ರಾಪಾತ್ರತೆಯ ವಿಚಾರವಿರುತ್ತದೆಂದ ಬಳಿಕ ಅದು ಜಗತ್ತಿನ ವಿಷಯಗಳಲ್ಲೊಂದಾದ ತೀರ್ಥ-ಯಾತ್ರೆಯ ವಿಷಯದಲ್ಲಿಯೂ ಇದೆಯೆಂದು ಹೇಳುವದು ಅನವಶ್ಯಕವೇ ಸರಿ!

ಒಂದೊಂದು ಕೆಲಸಕ್ಕೆ ಒಂದೊಂದು ಬಗೆಯ ಪಾತ್ರತೆಯು ಬೇಕಾಗುತ್ತದೆಂದು ಹಿಂದೆ ಹೇಳಿದೆಯಷ್ಟೇ; ಆದರೆ ಪ್ರಸ್ತುತದ ನಮ್ಮ ತೀರ್ಥ-ಯಾತ್ರೆಗೆ ಯಾವ ಪಾತ್ರತೆಯು ಬೇಕಾಗುತ್ತದೆಂಬದನ್ನು ನೋಡುವಾ.

ತೀರ್ಥ-ಯಾತ್ರೆಯ ಪಾತ್ರತೆಗೆ ವಯಸ್ಸಿನ ನಿರ್ಬಂಧವಿಲ್ಲ, ಯಾವದೊಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂಬ ನಿಯಮವಿಲ್ಲ. ವರ್ಣವಿಚಾರವಿಲ್ಲ. ಸ್ತ್ರೀತ್ವ-ಪುರುಷತ್ವಗಳನ್ನು ನೋಡುವ ಕಾರಣವಿಲ್ಲ. ಆದರೆ ಸದ್ಭಾವನೆಯೆಂಬದನ್ನು ಮಾತ್ರ ನೋಡಬೇಕಾಗುತ್ತದೆ. ಯಾರಲ್ಲಿ ಸದ್ಭಾವನೆಯಿರುತ್ತದೋ ಯಾರಲ್ಲಿ ಆಸ್ತಿಕ ಬುದ್ಧಿಯು ಇರುತ್ತದೋ ಹಾಗು ಯಾರಲ್ಲಿ ತಾವು ಹೋಗುವ ತೀರ್ಥದ ವಿಷಯವಾಗಿ ಪೂಜ್ಯಬುದ್ಧಿಯಿರುತ್ತದೋ ಅವರೇ ತೀರ್ಥಯಾತ್ರೆಗೆ ನಿಜವಾದ ಪಾತ್ರರೆಂದು ಹೇಳಬಹುದು. ಅವರು ಬ್ರಾಹ್ಮಣರಿರಲಿ, ಚಾಂಡಾಲರಿರಲಿ, ಸ್ತ್ರೀಯರಿರಲಿ, ಬಾಲಕರಿರಲಿ ಅವರು ಯೋಗ್ಯ ಅಧಿಕಾರಿಗಳೆಂದೇ ತಿಳಿಯಬೇಕು. ಈ ಬಗೆಯ ಪಾತ್ರತೆಯಿದ್ದವರು ತೀರ್ಥಯಾತ್ರೆಯನ್ನು ಮಾಡಿದರೆ ನಿಜವಾಗಿ ಫಲವನ್ನು ಹೊಂದುವರು. ಇದಕ್ಕೆ ವಿರುದ್ಧಸ್ಥಿತಿಯುಳ್ಳವರು ತೀರ್ಥಯಾತ್ರೆಗೆ ಅಪಾತ್ರರೆಂದು ಹೇಳುವಕಾರಣವಿಲ್ಲ; ಇಂಥ ಅಪಾತ್ರರು ತೀರ್ಥಯಾತ್ರೆಗೆ ಹೋದರೂ ದಬ್ಬಗೊಡದ ಮೇಲೆ ನೀರು ಸುರುವಿದಂತೆ ನಿರರ್ಥಕವೆಂದು ಹೇಳಲಾಗುವದು. ಇಲ್ಲಿ ಒಂದು ಕಥೆಯು ನೆನಪಾಯಿತು. ಅದನ್ನು ನಮ್ಮ ವಾಚಕರ ಮುಂದಿರಿಸುವೆವು. ಅಂದರೆ ಪಾತ್ರತೆಯ ವಿಚಾರವು ಅವರಿಗೆ ತಟ್ಟನೆ ಹೊಳೆಯುವದು.

ಪ್ರಸಿದ್ಧವಾದ ಕಾಶೀಕ್ಷೇತ್ರವು; ಅಪರೂಪವಾಗಿರುವ ಮಹೋದಯ ಪರ್ವ ಕಾಲವು; ಅಂದಬಳಿಕ ಯಾತ್ರಾರ್ಥವಾಗಿರುವ ಜನಕ್ಕೆ ಏನು ಕಡಿಮೆ? ಲಕ್ಷಾಂತರ ಜನರು ಕೂಡಿದ್ದರು. ಎಲ್ಲೆಲ್ಲಿ ನೋಡಿದರೂ ಜನರೇ ಜನರು; ಯಾರು ಗಂಗಾತಟಾಕದಲ್ಲಿ ಸ್ನಾನ ಮಾಡುತ್ತಿರುವರು. ಯಾರು ಘಾಟಿನಲ್ಲಿ ಮೆಟ್ಟಲುಗಳ ಮೇಲೆ ಕುಳಿತು ನಿತ್ಯಕರ್ಮಗಳನ್ನಾಚರಿಸುತ್ತಿರುವರು. ಯಾರು ದಾನ-ಧರ್ಮಗಳನ್ನು ಮಾಡುತ್ತಿರುವರು. ಒಬ್ಬರಲ್ಲ ಇಬ್ಬರಲ್ಲ, ಒಂದು ಜಾತಿಯವರಲ್ಲ. ಒಂದು ದೇಶದವರಲ್ಲ. ಹಲವು ಜಾತಿಯವರು ಹಲವು ದೇಶದವರು ಅಲ್ಲಿ ಲಕ್ಷಗಣಿತವಾಗಿ ಕೂಡಿದ್ದರೆಂದಬಳಿಕ ಅವರೆಲ್ಲರ ಪುಣ್ಯಕಾರ್ಯಗಳನ್ನು ವರ್ಣಿಸಿ ಹೇಳುವದು ದುಸ್ತರವೇಸರಿ!

ಈ ಸಮಯದಲ್ಲಿ ಕೈಲಾಸಪತಿಯಾದ ಶಂಕರನು ಪತ್ನಿಯಾದ ಉಮೆಯೊಡನೆ ನಂದಿವಾಹನನಾಗಿ ಎತ್ತಲೋ ಹೊರಟಿದ್ದನು. ಅವರು ಆಕಾಶಮಾರ್ಗದಿಂದ ಪ್ರಯಾಣವನ್ನು ಬೆಳಿಸಿರಲು, ಗಂಗಾತಟಾಕದಲ್ಲಿ ನೆರೆದ ನಮ್ಮ ಈ ಪ್ರಚಂಡ ಜನಸಮೂಹವು ಅವರ ದೃಷ್ಟಿಗೆ ಬಿದ್ದಿತು. ಆಗ ಉಮೆಯು ಆಶ್ಚರ್ಯಪಟ್ಟು ಪತಿಯನ್ನು ಕುರಿತು—ಇಲ್ಲಿ ಇಷ್ಟೇಕೆ ಜನರು ನೆರೆದಿರುವರೆಂದು ಕೇಳಿದಳು. ಆಗ ಶಂಕರನು ಪ್ರಿಯೇ, ಏನೆಂಬದು ನಿನಗೆ ತಿಳಿಯಲಿಲ್ಲೇನು? ಇಂದು ಮಹೋದಯ ಪರ್ವಕಾಲವಿರುವದು. ಈ ಪರ್ವಕಾಲವು ಪುಣ್ಯಕರ್ಮಗಳನ್ನಾಚರಿಸುವದಕ್ಕೆ ಬಹು ಶ್ರೇಷ್ಠವಾದದ್ದು, ಆದ್ದರಿಂದ ಇಂಥ ಸಮಯದಲ್ಲಿ ಪುಣ್ಯಕರ್ಮಗಳನ್ನಾಚರಿಸುವದಕ್ಕೆ ಗಂಗಾತಟಕಕ್ಕೆ ಇಷ್ಟೊಂದು ಜನರು ಬಂದಿರುವರು. ಎಂದು ಹೇಳಿದನು. ಆಗ ಉಮೆಯು ಅಷ್ಟಕ್ಕೇ ಸುಮ್ಮನಾಗದೆ—ಈ ಪರ್ವಕಾಲದಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡಿ ಪುಣ್ಯಕರ್ಮಗಳನ್ನಾಚರಿಸಿದರೆ ಏನು ಫಲ ಬರುವದೆಂದು ಪುನಃ ಪ್ರಶ್ನ ಮಾಡಿದಳು. ಅದಕ್ಕೆ ಶಂಕರನು—ಪ್ರಿಯೇ, ಇಂಥ ಯೋಗವು ಸಿಗುವದು ಪ್ರಾಣಿಗಳಿಗೆ ದುರ್ಲಭವೇ ಸರಿ! ಸರ್ವಸಾಮಾನ್ಯದಿನಗಳಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡಿದರೇ ಪ್ರಾಣಿಯು ಉದ್ಧೃತವಾಗುವದು. ಅಂದ ಮೇಲೆ ಇಂಥ ಪುಣ್ಯದಿನದಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡಿ ಪುಣ್ಯಕರ್ಮಗಳನ್ನಾಚರಿಸಿದರೆ ಏನು ಫಲವೆಂಬದನ್ನು ಏನು ಹೇಳಲಿ? ಎನ್ನಲು, ಉಮೆಯು ಬಾಯಿಮೇಲೆ ಕೈಯಿಟ್ಟುಕೊಂಡು—ಇಷ್ಟು ಜನರಿಗೂ ಮುಕ್ತಿಯು ಸಿಗುವದಲ್ಲವೇ? ಇವರೆಲ್ಲರು ಕೈಲಾಸಕ್ಕೆ ಬಂದರೆ ನಾವೇ ಕೈಲಾಸ ಬಿಟ್ಟು ಓಡಿ ಹೋಗಬೇಕಾಗುವದೇನೆಂದು ವಿನೋದವ ಮಾಡಿದಳು. ಉಮೆಯ ಮಾತಿಗೆ ಶಂಕರನು ನಕ್ಕು—ಪ್ರಿಯೇ, ಇಲ್ಲಿ ಕೂಡಿದ ಇಷ್ಟು ಜನರೆಲ್ಲರೂ ಮುಕ್ತಿ ಹೊಂದುವರೆಂದು ತಿಳಿದಿರುವಿಯೇನು? ಛೇ; ಹಾಗೇಂ

ದಿಗೂ ಆಗುವದಿಲ್ಲ. ಈ ಜನರಲ್ಲಿ ಎಲ್ಲರೂ ಸತ್ಪಾತ್ರರಿರುವರೆಂದು ತಿಳಿಯಬೇಡ; ಎಷ್ಟೋ ಜನರು ಮೋಜಿಗಾಗಿ ಬಂದಿರುತ್ತಾರೆ. ಹಲವರು ದ್ರವ್ಯ ಸಂಪಾದಿಸುವದಕ್ಕೆಂದು ಬಂದಿರುತ್ತಾರೆ. ಬೇರೆ ಎಷ್ಟೋ ಜನರು ಸುಂದರ ಒಡವೆಗಳನ್ನು ನೋಡಿ ತಮ್ಮ ನೇತ್ರಗಳನ್ನು ತೃಪ್ತಿಪಡಿಸಿಕೊಳ್ಳಬೇಕೆಂದು ಬಂದಿರುತ್ತಾರೆ. ಬೇರೆ ಕೆಲವರು ಪುಣ್ಯಬೇಕೆಂಬ ಭ್ರಾಂತಿಯಿಂದ ಬಂದರೂ ಆ ಪುಣ್ಯದೊರಕಿಸುವ ಮಾರ್ಗದ ವಿರುದ್ಧವಾಗಿ ಆಚರಿಸಿ ವ್ಯರ್ಥ ಶ್ರಮಪಟ್ಟು ಹೋಗತಕ್ಕವರಿರುತ್ತಾರೆ. ಅಂತೂ ಇಂಥ ಪ್ರಚಂಡ ಜನಸಮೂಹದಲ್ಲಿ ನಿಜವಾದ ಭಾಗ್ಯಶಾಲಿಗಳು ಎಷ್ಟು ಜನರಿರುವರೋ ಹೇಳಲಿಕ್ಕೆ ಬರುವದಿಲ್ಲ; ನಿಜವಾದ ಭಾಗ್ಯಶಾಲಿಗೆ ಅಂದರೆ ಸತ್ಪಾತ್ರನಿಗೆ ಇಂದಿನ ಫಲವು ಲಭಿಸುತ್ತದೆ; ಆ ಸತ್ಪಾತ್ರನು ತನಗೆ ಈ ಮಹೋದಯ ಪರ್ವದ ಫಲ ದೊರೆತಿರುವದೆಂತಲೂ ತಿಳಿಯುತ್ತಾನೆ. ಉಂಡವನಿಗೆ ಹೊಟ್ಟೆ ತುಂಬಿದ ಸ್ಮರಣವಾಗುವದಲ್ಲವೇ? ಬೇಕಾದರೆ ಈ ಮಾತಿನ ಪ್ರತೀತಿಯನ್ನು ನಿನಗೆ ತೋರಿಸುತ್ತೇನೆ ಎಂದನು. ಉಮೆಯು ಪ್ರತೀತಿಯನ್ನು ನೋಡಲಿಕ್ಕೆ ಹವಣಿಸಿದಳು—

ಪ್ರದೋಷಸಮಯದಲ್ಲಿ ವಿಶ್ವೇಶ್ವರನ ಗುಡಿಯ ಮುಂದೆ. ಒಬ್ಬ ತರುಣಿಯು ಒಂದು ಹೆಣವನ್ನು ಮುಂದಿಟ್ಟುಕೊಂಡು ಒಂದೇ ಸವನೆ ಶೋಕಿಸುತ್ತಿದ್ದಳು. ಆಕೆಯು ಶ್ರೀ ವಿಶ್ವೇಶ್ವರನನ್ನು ಪೂಜಿಸಿ ತಿರುಗಿ ಹೋಗುವ ಜನರನ್ನು ಕುರಿತು— ಅಪ್ಪಗಳಿರಾ, ಈ ಮಹೋದಯ ಪರ್ವದಲ್ಲಿ ಭಾಗೀರಥಿಯಲ್ಲಿ ಸ್ನಾನ ಮಾಡಿ ಶ್ರೀ ವಿಶ್ವೇಶ್ವರನ ದರ್ಶನ ತಕ್ಕೊಂಡದ್ದರಿಂದ ನೀವು ಪುಣ್ಯಶಾಲಿಗಳಾಗಿರುತ್ತೀರಿ. ಇಂಥ ಪುಣ್ಯಶಾಲಿಗಳಾದ ನಿಮ್ಮಲ್ಲಿ ಯಾರಾದರೂ ನನ್ನ ಗಂಡನನ್ನು ಸ್ಪರ್ಶಿಸಿದರೆ ಈತನು ಸಜೀವನಾಗುವನು. ಇಷ್ಟೊಂದು ಮಹದುಪಕಾರವನ್ನು ಮಾಡಿ ಈ ಬಡವಿಯ ಮುತ್ತೈದಿತನವನ್ನು ಉಳಿಸಿರಿ? ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದಳು. ತರುಣಿಯು, ಇನ್ನೂ ಚಿಕ್ಕವಳಿದ್ದಳು. ಅವಳ ಆರ್ತಧ್ವನಿಗೆ ನೆರೆದವರಲ್ಲಿ ಎಷ್ಟೋ ಜನರ ಹೃದಯವು ಕರಗಿತು; ಆದರೆ ಶವವನ್ನು ಬದುಕಿಸುವ ಧೈರ್ಯವು ಯಾರಿಗಾಗಬೇಕು? ಒಬ್ಬನು—ಏನೋ ನಮ್ಮಪ್ಪಾ, ಈ ಭಾಗೀರಥಿ ಸ್ನಾನದಿಂದ, ಶ್ರೀ ವಿಶ್ವೇಶ್ವರನ ದರ್ಶನದಿಂದ ನಮಗೆ ಪುಣ್ಯ ಬಂದಿರುವದೋ ಇಲ್ಲವೋ ಯಾರಿಗೆ ಗೊತ್ತು! ನಾವೇನು ಅಷ್ಟು ಶುದ್ಧ ಮನಸ್ಸಿನಿಂದ ಕರ್ಮ ಮಾಡಿದ್ದು ಅಷ್ಟರಲ್ಲಿಯೇ ಇದೆ. ಎಂದು ನುಡಿದನು. ಇನ್ನೊಬ್ಬನು—ಈ ಯಾತ್ರೆಯು 'ಯಾರಿಗೆ ಬೇಕಾಗಿತ್ತಪ್ಪಾ? ಮನೆಯ ಜನರ ಉಪದ್ರವಕ್ಕಾಗಿ ಬಂದಿರುತ್ತೇನೆ. ಈ ಯಾತ್ರೆಗೆ ಬಂದದ್ದರಿಂದ ನಾಲ್ಕು ನೂರು ರೂಪಾಯಿಗಳು ಕೈಬಿಟ್ಟವು; ಮನೆಯಲ್ಲಿದ್ದರೆ ಈ

ನಾಲ್ಕು ನೂರು ರೂಪಾಯಿಗಳು ಉಳಿಯುತ್ತಿದ್ದವಲ್ಲದೆ ಈ ಹಂಗಾಮದಲ್ಲಿ ವ್ಯಾಪಾರ ಮಾಡಿದ್ದರೆ ಸಾವಿರಾರು ರೂಪಾಯಿಗಳ ಲಾಭವು ಸಿಕ್ಕುತ್ತಿತ್ತು. ಏನು ಮಾಡಬೇಕೆಂದು ಸರ್ವದಾ ಚಡಪಡಿಸುತ್ತಿರುವೆನು. ಎಲ್ಲೀ ವಿಶ್ವೇಶ್ವರ; ಎಲ್ಲೀಭಾಗೀರಥಿ; ಅದರ ಕಡೆಗೆ ನನ್ನ ಲಕ್ಷ್ಯವಿದ್ದರಲ್ಲವೇ ನನಗೆ ಪುಣ್ಯ ಬರುವದು ಎಂದು ಮಾತಾಡಿದನು.

ಈ ಮೇರೆಗೆ ಪ್ರತಿಯೊಬ್ಬನೂ ಒಂದೊಂದು ನೆವ ಹೇಳುತ್ತ ಅಲ್ಲಿಂದ ಕಾಲ್ದೆಗೆಯ ಹತ್ತಿದರು. ಯಾರು ಬಂದರೂ ಇದೇ ಮಾತು; ತಮಗೆ ಬಂದ ಪುಣ್ಯಾಂಶದ ಗುರುತು ಹಿಡಿಯುವವರೇ ಇಲ್ಲದಾಯಿತು. ಜನರೆಲ್ಲರೂ ಹೊರಟು ಹೋದರು. ಅಷ್ಟೊತ್ತಿಗೆ ಆರು ತಾಸು ರಾತ್ರಿಯಾಗಿತ್ತು. ಬೀದಿಗಳೆಲ್ಲ ಹಾಳು ಬಿದ್ದವು. ವಿಶ್ವೇಶ್ವರನ ಮಂದಿರವು ಜನರ ದಟ್ಟಣೆಯಿಂದ ಒಮ್ಮೆ ಮುಕ್ತವಾಯಿತು. ಮುನಸೀಪಾಲ್ಟಿಯ ಕುರುಡ ಕಂದೀಲದ ಬೆಳಕಿನ ಹೊರತು ಅಲ್ಲಿ ಬೇರೆ ಬೆಳಕಿಲ್ಲದಾಯಿತು. ಅಷ್ಟರಲ್ಲಿ ಮಧ್ಯಮವಯಸ್ಸಿನ ಸ್ತ್ರೀಯೊಬ್ಬಳು ಕೈಯಲ್ಲಿ ಗಂಗೋದಕ ತುಂಬಿದ ಪಂಚಪಾತ್ರೆಯನ್ನು ಹಿಡಿದುಕೊಂಡು ಅಲ್ಲಿಗೆ ಬಂದಳು. ಅವಳು ಕೊರಳಲ್ಲಿ ರುದ್ರಾಕ್ಷಿ ಮಾಲಿಕೆಯನ್ನು ಧರಿಸಿದ್ದಳು. ಬಾಯಿಂದ "ಭೋ ಶಂಕರ ಕೈಲಾಸ ನಾಥ" ಎಂದು ಉಚ್ಚರಿಸುತ್ತಿದ್ದಳು. ಆವಳು ನೆಟ್ಟಗೆ ವಿಶ್ವೇಶ್ವರನ ಗುಡಿಗೆ ಹೋಗಿ ವಿಶ್ವೇಶ್ವರನಿಗೆ ನಮಸ್ಕಾರ ಹಾಕಿ ಆತನ ತಲೆಯ ಮೇಲೆ ಪಂಚಪಾತ್ರೆಯಲ್ಲಿ ತಂದಿದ್ದ ಉದಕವನ್ನು ಸುರುವಿ ಬಿಲ್ವ-ಅಕ್ಷತೆಗಳನ್ನೇರಿಸಿ ಪುನಃ ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕಿ ಅಲ್ಲಿಂದ ಹೊರಹೊರಟಳು. ಅವಳು ಮಾರ್ಗದಲ್ಲಿ ಎಡ-ಬಲಕ್ಕೆ ಸಹ ಹೊರಳಿ ನೋಡದೆ ಕೇವಲ ವಿಶ್ವೇಶ್ವರನ ಧ್ಯಾನದಲ್ಲಿ ಆಸಕ್ತಳಾಗಿ ಸಾಗಿದ್ದಳು. ಆ ಸ್ತ್ರೀಯು ಗುಡಿಗೆ ಹೋಗುವಾಗ ಸುಮ್ಮನೆ ದುಃಖಿಸುತ್ತ ಕುಳಿತಿದ್ದ ಆ ತರುಣಿಯು ಬರುವಾಗ ಸುಮ್ಮನೆ ಇರದೆ ಪ್ರದೋಷಕಾಲದಿಂದ ಬೇಡಿಕೊಳ್ಳುತ್ತ ಬಂದಂತೆ ಈಗಲೂ ಆ ಸ್ತ್ರೀಯನ್ನು ಕುರಿತು—ಬೇಡಿಕೊಂಡಳು. ತರುಣಿಯ ಈ ಪ್ರಾರ್ಥನೆಯನ್ನು ಕೇಳಿ ಯಾತ್ರಸ್ಥ ಸ್ತ್ರೀಯು ಎಚ್ಚತ್ತಳು. ಮತ್ತು ಮೇಲಕ್ಕೆ ಮೋರೆಯನ್ನೆತ್ತಿ ನೋಡಿದಳು. ಆಗ ಅವಳಿಗೆ ಆ ತರುಣಿಯ ಕಷ್ಟಮಯ ಸ್ಥಿತಿಯು ಸ್ಪಷ್ಟವಾಗಿ ಕಂಡು ಬಂದಿತು. ಆಗ ಆವಳು ನಿರಾಲೋಚನೆಯಿಂದ ಆ ತರುಣಿಯ ಪ್ರಾರ್ಥನೆಯಂತೆ ಆಕೆಯ ಮುಂದಿರುವ ಶವವನ್ನು ಮುಟ್ಟಿದಳು. ಕೂಡಲೆ ಶವವು ಚೇತರಿಸಿಕೊಂಡು ಶಿವ-ಶಿವ ಎಂದು ಎದ್ದು ಕುಳಿತುಕೊಂಡಿತು. ಆಗ ಆ ಯಾತ್ರಸ್ಥ ಸ್ತ್ರೀಯು ಮತ್ತೆ ಧ್ಯಾನಾಸಕ್ತಳಾಗಿ ಇನ್ನು ತನ್ನ ಸ್ಥಳಕ್ಕೆ ಹೊರಡುವ ಯೋಚನೆ

ಯಲ್ಲಿದ್ದಳು. ಅಷ್ಟರಲ್ಲಿ ಅಲ್ಲಿಯ ಸ್ಥಿತಿಯು ಒಮ್ಮೆಲೆ ರೂಪಾಂತರವನ್ನು ಹೊಂದಿತು; ತರುಣಿಯೂ ಆಕೆಯ ಪತಿಯೂ ಮಾಯವಾಗಿ ಅವರ ಸ್ಥಳದಲ್ಲಿ ಕೈಲಾಸಪತಿಯಾದ ಶಂಕರನು ಉಮೆಯೊಡನೆ ನಿಂತುಕೊಂಡಿದ್ದನು. ಆತನ ಪಂಚವಕ್ತ್ರಗಳೂ ಪ್ರಸನ್ನತೆಯನ್ನು ವ್ಯಕ್ತಗೊಳಿಸುತ್ತಿದ್ದವು. ತ್ರಿಶೂಲ-ಡಮರುಗಳು ಕೈಯಲ್ಲಿ ಒಪ್ಪುತ್ತಿದ್ದವು. ಆತನ ಪ್ರತಿಭೆಯಿಂದ ಆ ಪ್ರದೇಶವೆಲ್ಲವೂ ಬೆಳಗಹತ್ತಿತು.

ಯಾತ್ರಸ್ಥ ಸ್ತ್ರೀಯು ಇಂಥ ದಿವ್ಯ ರೂಪವನ್ನು ಕಂಡಕೂಡಲೆ ಒಮ್ಮೆಲೆ ಕಣ್ಣು ಮುಚ್ಚಿದಳು; ತನ್ನ ಹೃದಯಸ್ಥನಾದ ಪರಮೇಶ್ವರನೇ ಇಂದು ತನ್ನ ಸಗುಣರೂಪದಿಂದ ದರ್ಶನಕೊಟ್ಟನೆಂದು ತಿಳಿದಳು. ಆಕೆಯು ಕಣ್ಣುಮುಚ್ಚಿಕೊಂಡೇ ಆ ಕೈಲಾಸನಾಥನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದಳು. ಬಳಿಕ ಶಂಕರನು ಆಕೆಯನ್ನು ಹಿಡಿದೆಬ್ಬಿಸಿ ಅವಳಿಗೆ ತನ್ನನ್ನು ನೋಡುವ ಸಾಮರ್ಥ್ಯವನ್ನು ಕೊಟ್ಟನು. ಆ ಸ್ತ್ರೀಯು ಪರಮಾತ್ಮನ ಆ ದಿವ್ಯರೂಪವನ್ನು ಮನದಣೇ ನೋಡಿದಳು. ಹೀಗೆ ಅವಳು ಪರಮೇಶ್ವರನ ದಿವ್ಯರೂಪವನ್ನು ನೋಡುತ್ತ ದೇಹಭಾನವಿಲ್ಲದೆ ನಿಂತಿರಲು ಶಂಕರನು ಉಮೆಯನ್ನು ಕುರಿತು—ಪ್ರಿಯೇ, ನೋಡಿದೆಯಾ ಈ ಸ್ತ್ರೀಯನ್ನು ! ಇಷ್ಟು ಜನ ಪ್ರಚಂಡ ಪರಿಸೆಯಲ್ಲಿ ಇವಳೊಬ್ಬಳು ಮಾತ್ರ ಕೈಲಾಸಕ್ಕೆ ಬಂದು ಸರೂಪತಾ ಮುಕ್ತಿಯನ್ನು ಹೊಂದಲಿಕ್ಕೆ ಯೋಗ್ಯಳಿರುತ್ತಾಳೆ. ಇವಳು ಗರ್ಭಶ್ರೀಮಂತಳು; ಒಳ್ಳೇ ಪ್ರಾಯದಲ್ಲಿ ಪತಿಯು ಮರಣ ಹೊಂದಲು ಅಂದಿನಿಂದ ಇವಳು ವಿರಕ್ತಳಾಗಿ ನನ್ನ ಭಜನೆಯಲ್ಲಿ ನಿರತಳಾಗಿರುವಳು. ನನ್ನ ಹೊರತು ಈಕೆಗೆ ಅನ್ಯ ವಿಷಯಗಳ ಮೇಲೆ ಅಭಿಲಾಷೆಯಿಲ್ಲ. ಇಂಥ ಭಕ್ತಶ್ರೇಷ್ಠಳೊಬ್ಬಳು ಮಾತ್ರ ಈ ದಿನ ನಿನ್ನ ಪರೀಕ್ಷೆಯಲ್ಲಿ ಪಾಸಾದಳು. ಉಳಿದವರು ಗಾಳೀಪಟದಂತೆ ಹಾರಿಹೋದರು. ಯಾರು ಯಾರು ಎಷ್ಟೆಷ್ಟು ವಿಶ್ವಾಸದಿಂದ ಯಾತ್ರೆಗೆ ಬಂದಿರುವರೆಂಬದು ಈಗ ನಿನಗೆ ತಿಳಿಯಬಂತಲ್ಲವೇ! ಎಂದು ನುಡಿದನು. ಅದಕ್ಕೆ ಉಮೆಯು ಏನೋ ಮಾತಾಡಬೇಕೆನ್ನುವಷ್ಟರಲ್ಲಿ ಒಂದು ಸುಂದರವಾದ ವಿಮಾನವು ಬಂದಿತು. ಆ ಯಾತ್ರಸ್ಥ ಸ್ತ್ರೀಯು ಶಿವರೂಪವನ್ನು ತಾಳಿ ಅದರಲ್ಲಿ ಕುಳಿತುಕೊಂಡಳು; ಶಂಕರನು ಆಕೆಯನ್ನು ಕೈಲಾಸಗಿರಿಗೆ ಕಳುಹಿಸಿ ತಾನು ಉಮೆಯೊಡನೆ ನಂದಿವಾಹನನಾಗಿ ಉದ್ದಿಷ್ಟ ಸ್ಥಳಕ್ಕೆ ಹೊರಟು ಹೋದನು.

ಈ ಸುಂದರವಾದ ಕಥೆಯಿಂದ ನಮ್ಮ ವಾಚಕರಿಗೆ ತೀರ್ಥಾಟನದ ವಿಷಯಕ್ಕಿರುವ ಪಾತ್ರಾಪಾತ್ರತೆಯ ವಿಚಾರವು ಹೊಳೆದಿರಬಹುದು. ಮೀನಗಳು ತೀರ್ಥಗಳಲ್ಲಿ ದಿನಾಲು ಸ್ನಾನ ಮಾಡುತ್ತವೆ. ಕಾಗೆಗಳು ಮೈತೊಳೆಯುತ್ತವೆ. ಆದರೆ

ಅವೆಲ್ಲ ಸದ್ಗತಿಯನ್ನು ಯಾಕೆ ಹೊಂದುವದಿಲ್ಲ? ಕೇವಲ ಅಜ್ಞಾನದಿಂದಲ್ಲವೇ? ಆದ್ದರಿಂದ ಮನುಷ್ಯನೂ ಅಜ್ಞಾನದಿಂದ ಹಾಗೆ ಮಾಡಿದರೆ ಇವನಿಗಾದರೂ ಅದೇ ಫಲವಲ್ಲವೇ?

.. ಮನುಷ್ಯನಿಗೆ ಮೊದಲು ಈ ನರಜನ್ಮವು ದುರ್ಲಭವೆಂಬ ಜ್ಞಾನವಾಗಬೇಕು. ಯಾಕಂದರೆ ೮೪ ಲಕ್ಷ ಜೀವಯೋನಿಗಳಿರುವವು, ಅವನ್ನೆಲ್ಲ ತಿರುಗಿ ತಿರುಗಿ ಪಾಪ-ಪುಣ್ಯಗಳು ಸಮಾನಸ್ಥಿತಿಗೆ ಬಂದಾಗ ನಮಗೆ ಮಾನವಜನ್ಮ ಬರುವದು. ಇಷ್ಟು ತಿಳುವಳಿಕೆ ಹುಟ್ಟಿತೆಂದರೆ ಅವನು ಈ ನರಜನ್ಮ ಸಿಕ್ಕಾಗ ಏನು ಲಾಭ ಮಾಡಿಕೊಳ್ಳಬೇಕೆಂಬ ಯೋಚನೆಗೆ ಸಹಜವಾಗಿ ಹತ್ತುವನು. ಪಶುಪಕ್ಷಿಗಳಂತೆ ಬರೇ ಆಹಾರ-ನಿದ್ರಾದಿಗಳಲ್ಲಿ ಕಾಲಕಳೆಯುವದು ಘಾತುಕವೆಂದು ಅವನಿಗೆ ತೋರುವದು. ಆದ್ದರಿಂದ ಅವನು ಮನುಷ್ಯಜನ್ಮದ ಇತಿಕರ್ತವ್ಯವೇನೆಂಬದನ್ನು ಶೋಧ ಮಾಡಹತ್ತುವನು. ಈ ಜನ್ಮವೇ ಕಡೆಯದಾಗುವಂತೆ ಯತ್ನಿಸುವದೇ ಮುಖ್ಯ ಕರ್ತವ್ಯವೆಂದು ತಿಳಿಯುವನು. ಆದಕ್ಕಾಗಿ ಅವನು ಅನೇಕ ಕ್ಷೇತ್ರ ತೀರ್ಥಗಳನ್ನು ತಿರುಗುವನು. ಅಲ್ಲಿರತಕ್ಕಂಥ ಸಾಧುಸಜ್ಜನರ ಸಂದರ್ಶನಹೊಂದಿ ಜನ್ಮವು ಹ್ಯಾಗಾದರೆ ಕಡೆಯದಾಗುವದೆಂಬದನ್ನು ಕುರಿತು ಕೇಳುವನು. ಅವರು ಹೇಳುವ ಮಾರ್ಗವನ್ನು ತಿಳಿದುಕೊಳ್ಳುವನು. ಮುಂದೆ ಅದರಂತೆ ನಡೆದು ಸದ್ಗತಿಯನ್ನು ಹೊಂದುವನು.

ವಾಸ್ತವವಾಗಿ ನೋಡಿದರೆ ತೀರ್ಥಾಟನದ ಅಧಿಕಾರವು ಇಂಥ ಮಹಾನುಭಾವರೊಬ್ಬರಿಗೆ ಮಾತ್ರ ಇರುವದು. ಇವರ ತರುವಾಯ ಮಂದಾಧಿಕಾರಿಗಳೆಂದರೆ ದೇವರಲ್ಲಿಯೂ ತೀರ್ಥಕ್ಷೇತ್ರಗಳಲ್ಲಿಯೂ ಅತ್ಯಂತ ಶ್ರದ್ಧೆಯನ್ನಿಟ್ಟವರು, ಇವರಿಬ್ಬರ ಹೊರತು ಮೂರನೆಯವರಿಗೆ ತೀರ್ಥಯಾತ್ರೆಗಳನ್ನು ಮಾಡುವದಕ್ಕೆ ಪಾತ್ರತೆಯೇ ಇರುವದಿಲ್ಲ. ಮೇಲೆ ಉದಹರಿಸಿದ ಕಥೆಯಲ್ಲಿ ಯಾತ್ರಿಕರು ಯಾವ ಪ್ರಕಾರ ತಾವು ಯಾತ್ರೆಗೆ ಬಂದಿರುವೆವೆಂಬದನ್ನು ಆಡಿ ತೋರಿಸಿದರೋ ಆ ರೀತಿ ಮಾತಾಡಿ ತೋರಿಸುವ ಪ್ರಸಂಗವು ಆ ಅಪಾತ್ರರಿಗೆ ಬರುವದು; ಯಾತ್ರೆಗಳನ್ನು ಮಾಡಹವಣಿಸುವ ನಮ್ಮ ನಮ್ಮ ಅನುಭವಗಳನ್ನೇ ನಾವು ನೋಡಿಕೊಂಡರೆ ಸಾಕು. ಜಗತ್ತಿನ ಅನುಭವವು ನಮಗೆ ಬಂದು ಹೋಗುವದು. ಎಲ್ಲಿಯವರೆಗೆ ದೇಹ ಸಾರ್ಥಕವಾಗಬೇಕೆಂಬ ಪಶ್ಚಾತ್ತಾಪವು ನಮಗಿಲ್ಲವೋ ಮತ್ತು ಎಲ್ಲಿಯವರೆಗೆ ವಿಷಯಸೇವನೇಚ್ಛೆಯನ್ನು ನಾವು ಬಿಡುವದಿಲ್ಲವೋ ಅಲ್ಲಿಯವರೆಗೆ ನಮಗಿನ್ನೂ ಪಾತ್ರತೆಯು ಬಂದಿಲ್ಲವೆಂದು ತಿಳಿಯಬೇಕಾಗುವದು.

ಇಂಥ ಪಾತ್ರತೆಯನ್ನು ಪಡೆದುಕೊಂಡು ಈಗ ಯಾರು ಯಾತ್ರೆಗೆ ಹೊರಡುವರು? ಹ್ಯಾಗಾದರೂ ಆಗಲಿ ಒಮ್ಮೆ ಯಾತ್ರೆಯನ್ನು ಮಾಡಿಕೊಂಡು ಬಂದರಾಯಿತೆಂದು ಎಷ್ಟೋ ಜನ ವಾಚಕರು ಪ್ರಶ್ನ ಮಾಡಬಹುದು. ಆದರೆ ಇದಕ್ಕೆ ಉತ್ತರವೇನಂದರೆ ಜಗತ್ತು ಕುಣಿದಂತೆ ಕುಣಿಯ ಹೋಗುವದು ವಿವೇಕಿಗಳ ಲಕ್ಷಣವಲ್ಲ. ಜಗತ್ತಿನಲ್ಲಿ ಅವಮಾರ್ಗದಿಂದ ನಡೆವ ಜನರ ಉದಾಹರಣವು ನಮ್ಮ ಕಣ್ಣಮುಂದೆ ಕಟ್ಟಿದಂತೆ ಸನ್ಮಾರ್ಗದಿಂದ ನಡೆದವರ ಉದಾಹರಣವು ಕಟ್ಟುವದಿಲ್ಲ. ಇದಕ್ಕೆ ಕಾರಣವೇನಿರಬಹುದು? ಸನ್ಮಾರ್ಗದಿಂದ ನಡೆಯುವದು ಕಠಿಣವಿದ್ದು, ಅವಮಾರ್ಗದಿಂದ ನಡೆಯುವದು ಸುಲಭವಿರುವದು. ಇದೇ ಅದರ ಕಾರಣವು. ಅದರಂತೆ ಅಪಾತ್ರರು ಮಾಡಿದ ಯಾತ್ರೆಯ ಉದಾಹರಣೆಯೇ ನಮ್ಮ ಕಣ್ಣಿಗೆ ಬೀಳುತ್ತದೆ. ಆದರೆ ಪಶ್ಚಾತ್ತಾಪಯುಕ್ತರಾಗಿ ಸದ್ಬುದ್ಧಿಯಿಂದ ಯಾತ್ರೆ ಮಾಡಿಬಂದವರ ನೆನಪು ಸಹ ನಮಗೆ ಆಗುವದಿಲ್ಲ. ಆದ್ದರಿಂದ ವಿಚಾರವಂತರು ಸಾರಾಸಾರ ವಿಚಾರಮಾಡಿ ನೋಡಬೇಕಲ್ಲದೆ ಕಂಡವರನ್ನು ಕಂಡು ಕೌದೀ ಹೊಲಿದಂತೆ ಮಾಡಬಾರದು.

ಒಟ್ಟಿಗೆ ಹೇಳತಕ್ಕ ಮುಖ್ಯಾಂಶವೇನಂದರೆ—ಪಾತ್ರತೆಯನ್ನು ಸಂಪಾದಿಸಿ ಯಾತ್ರೆಗೆ ಹೋಗುವದು ಆಧ್ಯಾತ್ಮದೃಷ್ಟಿಯಿಂದ ಶ್ರೇಯಸ್ಕರವಿರುವದು. ಈಗ ಯಾತ್ರಾರ್ಥವಾಗಿ ಹೊರಡುವ ಲಕ್ಷಾಂತರ ಜನರೆಲ್ಲರೂ ನಿಜವಾದ ಪಶ್ಚಾತ್ತಾಪಯುಳ್ಳವರಾಗಿರುವರೆಂದು ತಿಳಿಯಲಿಕ್ಕಾಗದು. ಯಾರು ಯಾವ ಉದ್ದೇಶದಿಂದ ಯಾತ್ರೆಗೆ ಹೊರಟಿರುವರೆಂಬದನ್ನು ಯಾರಿಗೂ ಹೇಳಲಿಕ್ಕೆ ಶಕ್ಯವಿರುವದಿಲ್ಲ; ಆದ್ದರಿಂದ ಒಬ್ಬರ ಉದಾಹರಣೆಯನ್ನು ಈಗ ತಕ್ಕೊಂಡು ಪ್ರಯೋಜನವಿಲ್ಲ. ಯಾರಿಗೆ ತಮ್ಮ ತಮ್ಮ ಆತ್ಮೋನ್ನತಿಯ ವಿಷಯವಾಗಿ ನಿಜವಾದ ಕಳಕಳಿಯಿರುವದೋ ಅವರು ಮಾತ್ರ ತಮ್ಮ ಧ್ಯೇಯವನ್ನು ನಿಶ್ಚಯಿಸಿಕೊಳ್ಳಬೇಕು. ಯಾತ್ರೆಗೆ ಯಾಕೆ ಹೋಗಬೇಕು, ಅಲ್ಲಿ ಹೋಗುವದರಿಂದ ನಮ್ಮ ಆತ್ಮೋನ್ನತಿಗೆ ಹ್ಯಾಗೆ ಸಾಧನವಾಗುವದು. ಪುಣ್ಯಬರುವದೆಂದರೇನು? ಪುಣ್ಯ ಬಂದಿರುವದ್ದೆಂದು ತಿಳಿದುಕೊಳ್ಳುವ ಲಕ್ಷಣಗಳಾವವು? ಇತ್ಯಾದಿ ವಿಷಯಗಳನ್ನು ವಿವೇಕದಿಂದ ವಿಚಾರಿಸಿ ತಿಳಿದುಕೊಳ್ಳಬೇಕು. ಬಳಿಕ ತೀರ್ಥಯಾತ್ರೆಗಳನ್ನು ಮಾಡಿ ಧನ್ಯತೆಯನ್ನು ಸಂಪಾದಿಸಿಕೊಳ್ಳಬೇಕು.

ಶ್ರೀ ಸಮರ್ಥ ರಾಮದಾಸರು ತೀರ್ಥಯಾತ್ರೆಗಳನ್ನು ಮಾಡುವ ಜನರ ವಿಷಯವಾಗಿ ಒಳ್ಳೇ ಆದರದಿಂದ ಅನೇಕ ಬಗೆಯ ಹಿತೋಕ್ತಿಗಳನ್ನು ಹೇಳಿರುವರು. ಅವರ ಹಿತೋಕ್ತಿಯಂತೆ ನಡೆದರೆ ಮನುಷ್ಯನಿಗೆ ಘನತರವಾದ ಯೋಗ್ಯತೆಯುಂಟಾಗುವದೆಂಬದರಲ್ಲಿ ಸಂಶಯವಿಲ್ಲ; ಯಾತ್ರಸ್ಥರಲ್ಲಿ ಅವರು ಎರಡು ವರ್ಗಗಳನ್ನು ಕಲ್ಪಿಸಿರುವರು. ಒಂದನೆಯ ವರ್ಗವು ತನ್ನಷ್ಟಕ್ಕೆ ತಾನೇ ಉದ್ಧೃತವಾಗಿ ಹೋಗುವದು. ಎರಡನೆಯ ವರ್ಗವು ಜಗತ್ತನ್ನು ಉದ್ಧರಿಸಲಿಕ್ಕೆ ಪ್ರಯತ್ನ ಮಾಡುವದು. ಇವೆರಡು ವರ್ಗಗಳಲ್ಲಿ ಬಾರದ ಯಾತ್ರಸ್ಥರು ಅಧಮವರ್ಗದವರೆಂದು ಹೇಳಿರುವರು. ಲೋಕೋದ್ಧಾರವನ್ನು ಮಾಡುವದು ಮಹಂತರ ಲಕ್ಷಣವು; ಅವರು ತೀರ್ಥಯಾತ್ರೆಗಳ ನಿಮಿತ್ತದಿಂದ ಲೋಕದಲ್ಲಿ ಸಂಚರಿಸಿ ಜಗತ್ತಿನ ನಡೆನುಡಿಗಳನ್ನು ತಿಳಕೊಳ್ಳುವರು. ಬಳಿಕ ಯಾವ ದೇಶವು ಹೆಚ್ಚು ಅನಾಚಾರಕ್ಕೆ ಬಿದ್ದಿರುವದು. ಯಾವ ದೇಶದಲ್ಲಿಯ ಜನರನ್ನು ಸನ್ಮಾರ್ಗಕ್ಕೆ ತರುವದು ಅವಶ್ಯವಿರುವದು ಎಂಬ ಸಂಗತಿಗಳನ್ನು ವಿಚಾರಿಸಿ ನೋಡುವರು. ಅನಂತರ ಅವರು ತಮ್ಮ ಸದಾಚರಣೆಯ ಪ್ರಭಾವದಿಂದ ಜನರ ಚಿತ್ತಹರಣ ಮಾಡಿ ಜನರಿಗೆ ಸತ್ಕರ್ಮದ ಅಭಿರುಚಿಯನ್ನು ಹಚ್ಚಿಕೊಡುವರು. ಹೀಗೆ ಲೋಕೋಪಕಾರ ಮಾಡುವದರಿಂದ ಜಗತ್ತಿನಲ್ಲಿ ಸದ್ಧರ್ಮವು ನೆಲೆಗೊಂಡು ಎಲ್ಲಕಡೆಗೂ ಆನಂದವೇ ಆನಂದವಾಗುವದು. ಈ ದೊಡ್ಡ ಯೋಗ್ಯತೆಯನ್ನು ಸಂಪಾದಿಸಲಿಕ್ಕೆ ಪ್ರಯತ್ನಪಡುವವರು ನಿಜವಾಗಿಯೂ ಸ್ತುತ್ಯರೆಂದು ಶ್ರೀ ಸಮರ್ಥರು ಅಂದಿರುವರು; ಇಂಥ ಮಹಂತವೃತ್ತಿಯು ಸಾಧಿಸದಿದ್ದರೂ ನಿದಾನ ತಮ್ಮ ಆತ್ಮೋನ್ನತಿಯನ್ನಾದರೂ ಯಾತ್ರಸ್ಥನು ಮಾಡಿಕೊಳ್ಳಲೇ ಬೇಕೆಂದು ಖಂಡಿತವಾಗಿ ನುಡಿದಿರುವರು. ತಾನು ಹೋದ ಕ್ಷೇತ್ರ-ತೀರ್ಥಗಳಲ್ಲಿ ಯಾವ ಯಾವ ಮಹನೀಯರಿರುವರು? ಅವರಿಂದ ತಾನು ಸಂಗ್ರಹಿಸಿಕೊಳ್ಳಬೇಕಾದ ಅಂಶವೇನು? ನೈಸರ್ಗಿಕ ಸೃಷ್ಟಿಸೌಂದರ್ಯದ ಲಾಭವನ್ನು ಹ್ಯಾಗೆ ಪಡೆಯಬೇಕು. ಲೋಕಾನುವರ್ತನವನ್ನು ಎಷ್ಟರಮಟ್ಟಿಗೆ ಮಾಡಬೇಕು ಇತ್ಯಾದಿ ವಿಷಯಗಳನ್ನು ಗ್ರಹಣ ಮಾಡಲಿಕ್ಕೆ ಯಾತ್ರಸ್ಥರಲ್ಲಿ ಪಾತ್ರತೆಯು ಬೇಕೆಂದು ಹೇಳಿರುವರು.

ಇಲ್ಲಿಯ ವರೆಗೆ ವಿವೇಚಿಸಿದ ಸಂಗತಿಗಳನ್ನು ಪ್ರತಿಯೊಬ್ಬರೂ ವಿವೇಚಿಸಿಕೊಳ್ಳಬೇಕು. ಮತ್ತು ಶ್ರೀ ಸಮರ್ಥರ ಹಿತೋಕ್ತಿಗಳಂತೆ ಪಾತ್ರತೆಯನ್ನುಂಟುಮಾಡಿಕೊಳ್ಳಬೇಕು. ಇದೇ ಆತ್ಮೋದ್ಧಾರದ ಲಕ್ಷಣವು.

## ಲೇಖಾಂಕ ೧೦

—[-o-]—

## ಉಪಸಂಹಾರ.

ಗತಿಸಿದ ಒಂಭತ್ತು ಲೇಖಾಂಕಗಳಲ್ಲಿ ಅಂದರೆ ೧ ವಿಷಯಪ್ರವೇಶ, ೨ ತೀರ್ಥೋತ್ಪತ್ತಿಯ ಸಾಮಾನ್ಯ ವಿಚಾರ, ೩ ತೀರ್ಥಕ್ಷೇತ್ರಗಳ ಮಹತ್ವ ೪ ತೀರ್ಥವಿಧಿಗಳ ವಿಚಾರ. ೫ ಫಲಕಾರಿಯಾದ ಯಾತ್ರಾಪದ್ಧತಿಯು, ೬ ಯಾತ್ರಾಪದ್ಧತಿಯ ಆಧುನಿಕ ರೂಪಾಂತರ ೭ ಕ್ಷೇತ್ರವರ್ಣನ ೮ ನಾನಾ ಕ್ಷೇತ್ರಗಳವರ್ಣನ ೯ ಪಾತ್ರಾಪಾತ್ರ ವಿಚಾರ ಎಂಬ ಲೇಖಗಳಲ್ಲಿ ತೀರ್ಥ-ಯಾತ್ರೆಗಳನ್ನು ಹ್ಯಾಗೆ ಮಾಡಬೇಕು? ಯಾಕೆ ಮಾಡಬೇಕು? ಇದಕ್ಕೆ ಸಜ್ಜನರ ಮತವೇನು? ಎಂಬ ವಿಷಯಗಳ ಊಹಾಪೋಹವಾಗಿರುತ್ತದೆ. ಆದರೆ ಪ್ರಸ್ತುತದ ಉಪಸಂಹಾರಾತ್ಮಕವಾದ ಈ ಲೇಖವನ್ನು ಬರೆದು ಈ ವಿಷಯವನ್ನು ಪೂರ್ತಿಗೊಳಿಸುವ ವಿಚಾರವಿರುತ್ತದೆ.

ಈ ಉಪಸಂಹಾರಾತ್ಮಕ ಲೇಖಾಂಕದಲ್ಲಿ ಮುಖ್ಯವಾಗಿ ಯಾತ್ರಸ್ಥರಿಗೆ ಮುಖ್ಯ ಮುಖ್ಯ ಕ್ಷೇತ್ರಗಳ ಮಾರ್ಗವನ್ನು ಗೊತ್ತುಮಾಡಿ ಕೊಡುವದು ಅವಶ್ಯವಾಗಿದೆ. ಇದನ್ನು ಹೇಳುವ ಮೊದಲು ಪ್ರಾಚೀನ-ಅರ್ವಾಚೀನ ಕಾಲಗಳಲ್ಲಿ ತೀರ್ಥಯಾತ್ರೆಗಳನ್ನು ತಿರುಗಿದ ಪ್ರಸಿದ್ಧ ಪುರುಷರ ಉದ್ದೇಶವನ್ನು ನಮ್ಮ ವಾಚಕವೃಂದದ ಅವಗಾಹನೆಗೆ ತಂದು ಕೊಡುವೆವು.

ಬಹುತರ ಎಲ್ಲ ವಾಚಕವೃಂದಕ್ಕೆ ಪರಿಚಯಸ್ಥರಾದ ಪೌರಾಣಿಕಪುರುಷರೆಂದರೆ ರಾಮ-ಕೃಷ್ಣ ಪಾಂಡವಾದಿಗಳೆಂದು ಹೇಳಬಹುದು. ಈ ಪ್ರಸಿದ್ಧ ಪುರುಷರನ್ನು ಅರಿಯದ ಭಾರತೀಯರು ವಿರಳವೇ ಸರಿ! ಪಾಂಡವರಲ್ಲಿ ಅರ್ಜುನನ ತೀರ್ಥಯಾತ್ರೆಯ ವಿಷಯವು ಪ್ರಸಿದ್ಧವಿರುವದು. ಆತನು ತನಗೆ ಬಂದ ಪಾಪದ ಪ್ರಾಯಶ್ಚಿತ್ತಕ್ಕಾಗಿ ತೀರ್ಥಯಾತ್ರಾಟನೆಯನ್ನು ಕೈಕೊಂಡನು. ಶ್ರೀ ಕೃಷ್ಣಪರಮಾತ್ಮನ ಅಣ್ಣನಾದ ಶ್ರೀ ಬಲರಾಮನು ಯುದ್ಧದಲ್ಲಿ ಕೌರವರಿಗೆ ಸಹಾಯಮಾಡಬೇಕಾಗುತ್ತದೆಂದು ತೀರ್ಥಾಟನಕ್ಕಾಗಿ ಹೊರಟುಹೋದನು. ಇದರಿಂದ ಬೋಧವಾಗತಕ್ಕ ಅಂಶವೇನಂದರೆ—ನಮ್ಮ ಪ್ರಾಚೀನರು ತೀರ್ಥಾಟನ ಕ್ರಮವನ್ನು ಪುಣ್ಯವರ್ಧನದ ಕಾರ್ಯಕ್ಕೂ ರಾಜಕಾರಣಕ್ಕೂ ಕೂಡಿಯೇ ಉಪಯೋಗಿಸಿಕೊಳ್ಳುತ್ತಿದ್ದರು. ಇದ

ರಂತೆ ಆಧುನಿಕ ಕಾಲದಲ್ಲಿ ಶ್ರೀ ಸಮರ್ಥರಾಮದಾಸರು ತಮ್ಮ ತೀರ್ಥಾಟನೆಯ ಕ್ರಮದಿಂದ ರಾಜಕಾರಣ ಹಾಗು ಪರಮಾರ್ಥಗಳೆರಡನ್ನೂ ಸಾಧಿಸಿದರು. ಅವರು ರಾಜಕಾರಣದೃಷ್ಟಿಯಿಂದ ತೀರ್ಥಾಟನ ಮಾಡದಿದ್ದರೆ ಎಲ್ಲೆಲ್ಲಿ ಯಾವ ಯಾವ ಜನರಿಗೆ ಯಾವ ಯಾವ ಬಗೆಯ ಹಿಂಸೆಯಾಗುವದೆಂಬದು ತಿಳಿಯಲಿಕ್ಕೆ ಅವಕಾಶವಿರುತ್ತಿರಲಿಲ್ಲ. ಶ್ರೀಸಮರ್ಥರು ತ್ರಿಕಾಲಜ್ಞರಿದ್ದು, ಅವರು ಕುಳಿತಲ್ಲಿಯೇ ಸಮಸ್ತವನ್ನೂ ತಿಳಿಯುತ್ತಿದ್ದರೆಂಬ ಅಂಶವು ಸ್ವತಂತ್ರವಿರುತ್ತದೆ. ನಮ್ಮ ಮಾನವೀದೃಷ್ಟಿಗೆ ಅವರ ರಾಜಕಾರಣದ ಅನುಭವವು ಬರಬೇಕಾದರೆ, ಅವರ ತೀರ್ಥಾಟನೆಯ ಕ್ರಮವೇ ಪ್ರಾಮುಖ್ಯವಾಗಿರುತ್ತದೆ. ಇರಲಿ; ಹೀಗೆ ತೀರ್ಥಾಟನದಿಂದ ಪ್ರಾಜ್ಞರಿಗೆ ಬೇಕಾದದ್ದನ್ನು ಸಾಧಿಸಿಕೊಳ್ಳಲಿಕ್ಕೆ ಬರುತ್ತದೆ. ತೀರ್ಥಾಟನೆಯು ಒಂದು ಬಗೆಯಿಂದ ಶಾರೀರಿಕ ತಪಸ್ಸಿರುತ್ತದೆ. ದೇಹದಂಡನೆಯು ಇದರಿಂದ ಚನ್ನಾಗಿ ಸಾಧಿಸುತ್ತದೆ. ಹಲವು ತರದ ನೀರು ಹವೆಗಳ ಪರಿಣಾಮವು ದೇಹದ ಮೇಲೆ ಬಗೆ ಬಗೆಯಿಂದಾಗಿ ಅದರ ಆಘಾತವನ್ನು ದೇಹವು ಸಹಿಸಬೇಕಾಗುವದು. ಶರೀರದಿಂದಾದ ಪಾಪಪರಿಹಾರಕ್ಕೆ ಶರೀರ ದಂಡನೆಯು ಶಾಸ್ತ್ರಸಮ್ಮತವಾದ ಶಿಕ್ಷೆಯಾಗಿರುತ್ತದೆ. ಯಾಕಂದರೆ ಪಾಪವು ಮನಸ್ಸಿನಲ್ಲಿ ಉದ್ಭವಿಸಿದರೂ ಅದನ್ನು ಕೃತಿಯಲ್ಲಿ ತರುವದು ದೇಹವಾಗಿರುತ್ತದೆ. ದೇಹವು ಅನುಕೂಲವಾಗದಿದ್ದರೆ ಬರಿಯ ಮನಸ್ಸಿನಿಂದ ಯಾವ ಪಾಪಕೃತಿಯೂ ಆಗುವ ಹಾಗಿಲ್ಲ. ಆದ್ದರಿಂದಲೇ ದೇಹಕ್ಕೆ ದಂಡನೆಯನ್ನು ಮಾಡಬೇಕಾಗುತ್ತದೆ. ಇದೇ ಉದ್ದೇಶದಿಂದಲೇ ಅರ್ಜುನಾದಿಗಳು ದೇಹದಂಡರೂಪೀ ತೀರ್ಥಾಟನೆಯನ್ನು ಆಚರಿಸಿದರು. ಮನುಷ್ಯನು ಜನ್ಮಕ್ಕೆ ಬಂದ ಬಳಿಕ ಅವನಿಂದ ತಿಳಿದಾಗಲಿ ತಿಳಿಯದಾಗಲಿ ಒಂದಿಲ್ಲೊಂದು ಬಗೆಯ ಪಾಪವು ಸಂಭವಿಸುವದು ಸ್ವಭಾವಸಿದ್ಧವಾಗಿದೆ. ಆದ್ದರಿಂದ ಅವನು ಪ್ರಾಯಶ್ಚಿತ್ತರೂಪವಾದ ತೀರ್ಥಾಟನವನ್ನು ಮಾಡಬೇಕು. ಇರಲಿ, ಇನ್ನು ಈ ತೀರ್ಥಾಟನಕ್ಕೆ ಆಧುನಿಕ ಕಾಲದಲ್ಲಾದ ಅನುಕೂಲತೆಗಳನ್ನು ಬರೆದು ಈ ಲೇಖಮಾಲೆಯನ್ನು ಉಪಸಂಹರಿಸುವಾ.

ಉತ್ತರ ಹಿಂದುಸ್ಥಾನದಲ್ಲಿ ಪ್ರಸಿದ್ಧ ಕ್ಷೇತ್ರಗಳೆಂದರೆ ಹಿಂದೆ ಹೇಳಿದಂತೆ ಕಾಶಿ, ಪ್ರಯಾಗ, ಗಯಾ, ಬದರೀಕೇದಾರ, ಒಡ್ಡೀಜಗನ್ನಾಥ ಇವೇ ಮೊದಲಾದವುಗಳಿರುತ್ತವೆ. ದಕ್ಷಿಣಹಿಂದುಸ್ಥಾನದಲ್ಲಿ ನಾಶಿಕ, ಗೋಕರ್ಣ, ಉಡಿಪಿ, ಶ್ರೀರಂಗನಾಥ, ರಾಮೇಶ್ವರ, ಹಂಪಿ ಮೊದಲಾದವುಗಳಿರುತ್ತವೆ. ಇವೆಲ್ಲವುಗಳಿಗೂ ಹೋಗಲಿಕ್ಕೆ ಈಗ ರೈಲುಬಂಡಿ, ಮೋಟರಬಂಡಿಗಳ ಅನುಕೂಲತೆಯಿರುತ್ತದೆ.

ನಮ್ಮ ಕರ್ನಾಟಕದಿಂದ ಉತ್ತರಹಿಂದುಸ್ಥಾನದ ಯಾತ್ರೆಗಳನ್ನು ಮಾಡಲಿಕ್ಕೆ ಅನೇಕ ಮಾರ್ಗಗಳಿರುತ್ತವೆ. ಪುಣೆಯ ಮಾರ್ಗವಾಗಿ ಹೋಗಬಹುದು. ಗುಂತಕಲ್ಲ ಮಾರ್ಗವಾಗಿ ಹೋಗಬಹುದು. ಹುಟಗಿ ಮಾರ್ಗವಾಗಿ ಹೋಗಬಹುದು. ಬೆಂಗಳೂರ ಮೊದಲಾದವುಗಳಕಡೆಯವರಿಗೆ ಗುಂತಕಲ್ಲ ಮಾರ್ಗವೇ ಸಮೀಪದ್ದಾಗುವದು. ಗುಂತಕಲ್ಲು ಸದರ್ನ ಮರಾಠಾ ರೇಲ್ವೆಯಲ್ಲಿ ಜಂಗಶನ್ನಿನ ಸ್ಥಳವಿದ್ದು ಹುಬ್ಬಳ್ಳಿಯಿಂದ ೧೬೦ ಮೈಲು ದೂರದಲ್ಲಿರುತ್ತದೆ. ಈ ಮಾರ್ಗದಿಂದ ಕಾಶಿ ಮೊದಲಾದ ಕ್ಷೇತ್ರಗಳಿಗೆ ಹೋಗುವ ನಮ್ಮ ಕರ್ನಾಟಕಸ್ಥರಿಗೆ ನಡುವೆ ಹತ್ತುವ ತೀರ್ಥಗಳನ್ನು ಹೇಳುವದು ಅವಶ್ಯವಾಗಿದೆ. ಗುಂತಕಲ್ಲಿನಿಂದ ೫೦ ಮೈಲು ದೂರ ಹೋದರೆ ತುಂಗಭದ್ರಾ ಎಂಬ ಸ್ಟೇಶನ್ನು ಹತ್ತುವದು. ಅಲ್ಲಿ ಯಾತ್ರಸ್ಥರು ಇಳಿದು ತುಂಗಾಸ್ನಾನವನ್ನು ಮಾಡಬಹುದು. ತುಂಗಭದ್ರೆಯ ಸ್ಟೇಶನ್ನಕ್ಕೆ ಸಮೀಪವಾಗಿ ಪ್ರಯಾಣಿಕರು ಇಳಿದುಕೊಳ್ಳಲು ಅನುಕೂಲವಾದ ಛತ್ರವಿದೆ. ಈ ತುಂಗ್ರಭದ್ರೆಯಲ್ಲಿಳಿದಂತೆ ಪ್ರಯಾಣಿಕರು ಮುಂದೆ ಕೃಷ್ಣಾ ಎಂಬಲ್ಲಿಯೂ ಇಳಿಯಬಹುದು. ಕೃಷ್ಣಾನದಿಗೆ ಸಮೀಪವಾಗಿ ಯಾತ್ರಸ್ಥರಿಗೆ ಇಳಿದುಕೊಳ್ಳಲು ಛತ್ರವಿದೆ. ಕೃಷ್ಣಾಸ್ನಾನವು ಅತ್ಯಂತ ಆರೋಗ್ಯಕರವಿರುವದು.

ಕೃಷ್ಣಾಸ್ನಾನಮಾಡಿ ಮುಂದೆ ಅದೇಮಾರ್ಗವಾಗಿ ಸಾಗಿದ ಪ್ರಯಾಣಿಕರಿಗೆ ಧೋಂಡ ಎಂಬ ಸ್ಟೇಶನ್ನು ಹತ್ತುವದು; ಇದು ಜಂಗಶನ್ನಿನ ಸ್ಥಳವು; ಮುಂಬೈ ಮಾರ್ಗವಾಗಿ ಹೋಗತಕ್ಕವರು ಇಲ್ಲಿ ಇಳಿಯುವ ಕಾರಣವಿಲ್ಲ; ಆದರೆ ಪುಲಿತಾಂಬಾ ಮಾರ್ಗವಾಗಿ ಹೋಗತಕ್ಕವರು ಇಳಿದು ಬೇರೆ ಬಂಡಿಯಲ್ಲಿ ಕೂಡ್ರಬೇಕಾಗುವದು. ಪುಲಿತಾಂಬಾ ಸ್ಟೇಶನ್ನವು ಗೋದಾವರೀ ತೀರವು; ಒಂದು ಮೈಲಿನ ಅಂತರದಲ್ಲಿಯೇ ಗೋದಾವರೀನದಿಯು ಹರಿಯುತ್ತದೆ. ಇಲ್ಲಿಯ ನದೀತೀರವು ಮನೋಹರವಿರುತ್ತದೆ. ನದಿಗೆ ಸಮೀಪವಾಗಿ ಮಂಟಪಗಳೂ ದೇವಸ್ಥಾನಗಳೂ ಇರುತ್ತವೆ. ಇಲ್ಲಿ ತೀರ್ಥಶ್ರಾದ್ಧವನ್ನು ಮಾಡುವರು. ಪುಲಿತಾಂಬಾದಿಂದ ಮನ್ಮಾಡಸ್ಟೇಶನ್ನದವರೆಗೆ ಹೋದಬಳಿಕ ಅಲ್ಲಿ ಪುನಃ ಬಂಡಿಯನ್ನು ಬದಲು ಮಾಡಬೇಕಾಗುತ್ತದೆ. ಸ್ಟೇಶನ್ನ ದೊಡ್ಡದಿದ್ದು, ಇಲ್ಲಿ ಯಾವಾಗಲೂ ಜನಗಳ ಗಲಾಟೆಯಿರುತ್ತದೆ. ಈ ಸ್ಟೇಶನ್ನದಲ್ಲಿ ಕಾಶೀ-ಗಯಾ-ಪ್ರಯಾಗ ಮೊದಲಾದ ಕ್ಷೇತ್ರಗಳಲ್ಲಿಯ ಕ್ಷೇತ್ರಸ್ಥ ಬ್ರಾಹ್ಮಣರು ಕಾದುಕೊಂಡಿರುತ್ತಾರೆ. ಅರಿಯದ ಯಾತ್ರಿಕರು ಆ ಕ್ಷೇತ್ರಸ್ಥರ ಕಡೆಯವರ ಮಾತಿನಂತೆ ನಡೆದು ಮುಂದೆ ದಕ್ಷಿಣೆ ದಾನಾದಿಗಳನ್ನು ಕೊಡುವ ಪ್ರಸಂಗದಲ್ಲಿ ಪೇಚಿಗೆ ಬೀಳುತ್ತಾರೆ. ಆದ್ದರಿಂದ ಯಾತ್ರಿಕರು ದಾರಿಯಲ್ಲಿಯೇ

ಕ್ಷೇತ್ರಸ್ಥರನ್ನು ಗಂಟಿಕ್ಕಿಕೊಳ್ಳದೆ ತಾವು ಉದ್ದಿಷ್ಟಪಡುವ ಕ್ಷೇತ್ರಗಳಿಗೆ ಹೋಗಿ ತಮಗೆ ಸರಿಕಂಡ ಸ್ಥಳಗಳಲ್ಲಿ ಇಳಿದುಕೊಂಡು ಯಾತ್ರಾವಿಧಿಗಳನ್ನು ನೆರವೇರಿಸಿ ಕೊಳ್ಳಬೇಕು.

ಮನ್ಮಾಡದಿಂದ ಭುಸಾವಳ- ಖಾಂಡವಾದಿಗಳಲ್ಲಿ ಪ್ರಯಾಣಿಕರು ಇಳಿಯ ಬಹುದು. ಇಲ್ಲಿ ಪ್ರಯಾಣಿಕರಿಗೆ ಇಳಿದುಕೊಳ್ಳಲು ಸರಿಯಾದ ಸ್ಥಳಗಳಿರುತ್ತವೆ. ಖಾಂಡ್ವಾದಿಂದ ಉಜ್ಜಯಿನಿಗೆ ಹೋಗುವಾಗ ನರ್ಮದಾನದಿಯು ಹತ್ತುತ್ತದೆ. ಇಲ್ಲಿ ಸುಂದರ ಬಾಣಲಿಂಗಗಳು ದೊರೆಯುತ್ತವೆ. ಖಾಂಡ್ವಾದಿಂದ ಮುಂದೆ ಇಟಾರ್ಸಿ-ಜಬ್ಬಲ್‌ಪುರಗಳನ್ನು ನೋಡಿಕೊಂಡು ಪ್ರಯಾಣಿಕರು ಪ್ರಯಾಗಕ್ಕೆ ತಲು ಪುವರು. ಪ್ರಯಾಗ ಸ್ಟೇಶನ್ನವು ಬಹು ದೊಡ್ಡದೂ, ರಮಣೀಯವಾದದ್ದೂ ಇರು ತ್ತದೆ. ಪ್ರಯಾಗದಿಂದ ಮುಂದೆ ಕಾಶೀ ಕ್ಷೇತ್ರವು; ಮೂರು ಮಾರ್ಗಗಳಿಂದ ಕಾಶಿಗೆ ಹೋಗಬಹುದು. ಪ್ರತಾಪಘುರ್, ಝುಂಸಿಲಾಯಿನ್, ಮೋಗಲ್‌ಸರಾಯಿ ಎಂಬ ಮೂರು ಮಾರ್ಗಗಳಿವೆ. ಈ ಮಾರ್ಗಗಳಲ್ಲಿ ಝುಂಸೀಮಾರ್ಗವು ಪ್ರಯಾಗ ದಲ್ಲಿ ತ್ರಿವೇಣಿಗೆ ಸಮೀಪವಾಗಿರುವ ದಾರಾಗಂಜಿನಿಂದಲೇ ಹೊರಡುವದು. ಆದ್ದ ರಿಂದ ಇದು ಪ್ರಯಾಣಿಕರಿಗೆ ತುಂಬಾ ಅನುಕೂಲವಾದದ್ದು. ಈ ಮಾರ್ಗದಿಂದ ಹೋಗುವವರು ಕಾಶಿಯ ಕ್ಯಾಂಟೋನ್ಮೆಂಟ ಸ್ಟೇಶನ್ನಿನಲ್ಲಿ ಇಳಿಯುವರು. ಪ್ರತಾಪ ಘುರ್ ಮಾರ್ಗದಿಂದ ಬಂದ ಬಂಡಿಯೂ ಇಲ್ಲಿಯೇ ನಿಲ್ಲುವದು; ಆದರೆ ಮೊಗಲ ಸರಾಯಿಯಿಂದ ಬಂದ ಬಂಡಿಯು ಕಾಶೀ ಸ್ಟೇಶನ್ನಿಗೆ ಹೋಗುವದು. ಕಾಶೀ ಸ್ಟೇಶನ್ನಿನಲ್ಲಿಳಿದರೆ, ಕಾಲುಮಾರ್ಗವಾಗಿಯೂ ಗಂಗಾನದಿಯ ಡೋಣಿಗಳ ಮಾರ್ಗ ವಾಗಿಯೂ ಇಳಿಯತಕ್ಕ ಸ್ಥಳಕ್ಕೆ ಹೋಗಲಿಕ್ಕೆ ಬರುತ್ತದೆ. ಈ ಕಾಶಿಯಲ್ಲಿ ನಮ್ಮ ಕರ್ನಾಟಕದವರು ಇಳಿಯತಕ್ಕ ಸ್ಥಳಗಳೆಂದರೆ,ಹನುಮಾನ್‌ಘಾಟ, ಕೇದಾರಘಾಟ, ಕ್ಷೇಮೇಶ್ವರಘಾಟ, ನಾರದಘಾಟ ಇವೇ ಮೊದಲಾದ ಘಾಟುಗಳಾಗಿರುತ್ತವೆ.

ಶ್ರೀ ಕಾಶೀ ಕ್ಷೇತ್ರದಿಂದ ಯಾತ್ರಸ್ಥರು ಮುಂದೆ ಗಯಾಕ್ಕೆ ಹೋಗುವರು. ಗಯಾದಿಂದ ಶ್ರೀ ಒಡ್ಡೀಜಗನ್ನಾಥ, ಶ್ರೀಶೈಲಗಳನ್ನು ನೋಡಿಕೊಂಡು ಕರ್ನಾಟ ಕಕ್ಕೆ ಬರಲು ರೇಲ್ವೆಯ ಅನುಕೂಲತೆಯಿರುತ್ತದೆ; ಆದರೆ ಕಾಶಿಯಿಂದ ಮುಂದೆ ಬದರೀ-ಕೇದಾರ ಮೊದಲಾದವುಗಳಿಗೆ ಹೋಗತಕ್ಕ ಯಾತ್ರಿಕರಿಗೆ ವಿಶೇಷ ರೇಲ್ವೆಯ ಅನುಕೂಲತೆಯಿಲ್ಲ. ಬದರಿಕಾಶ್ರಮವು ಹಿಮಾಲಯದಲ್ಲಿರುವದು; ಆದ್ದರಿಂದ ಹಿಮಾ ಲಯ ಪರ್ವತದ ಕಂದರಗಳನ್ನು ದಾಟುತ್ತ ಕಾಲುನಡಿಗೆಯಿಂದಲೇ ಹೋಗಬೇಕಾ ಗುತ್ತದೆ. ಆದ್ದರಿಂದ ಗಂಗೋತ್ರಿ- ಬದರೀಕೇದಾರ ಯಾತ್ರೆಗಳು ಸರ್ವಸಾಧಾ

ರಣ ಜನರಿಗೆ ಸಾಧಿಸತಕ್ಕ ಯಾತ್ರೆಗಳಲ್ಲವೆಂದು ಹೇಳಲಾಗುವದು. ಯಾರು ಜೀವದ ಮೇಲೆ ಉದಾರರಾಗಿರುವರೋ, ಯಾರಿಗೆ ಪ್ರಪಂಚದ ಹಂಬಲವು ಇರುವದಿಲ್ಲವೋ ಅಂಥವರು ಏನಾದರೂ ಆಗಿಕೊಳ್ಳಲಿ? ಎಂದು ಗಂಗೋತ್ರಿಯ ಮಾರ್ಗವನ್ನು ಹಿಡಿಯುವರು.

ಈ ಗಂಗೋತ್ರಿ ಬದರೀ ಕೇದಾರದಂಥ ಕಠಿಣ ಯಾತ್ರೆಗಳು ದಕ್ಷಿಣ ಹಿಂದುಸ್ಥಾನದಲ್ಲಿ ಯಾವವೂ ಇರುವದಿಲ್ಲ; ಎಲ್ಲವೂ ಸುಲಭ ಸಾಧ್ಯವಾದವುಗಳಿರುತ್ತವೆ; ಆದರೆ ಕೆಲವು ಕ್ಷೇತ್ರಗಳು ರೇಲ್ವೆಯಿಂದ ದೂರವಲ್ಲಿದ್ದರೂ, ಮೋಟರಿನ ದಾರಿಗೆ ಒಳಗಾಗಿರುತ್ತವೆ ಉಡಿಪಿ, ಸುಬ್ರಹ್ಮಣ್ಯಕ್ಷೇತ್ರಗಳು ರೇಲ್ವೆಗೆ ಸಮೀಪದಲ್ಲಿರುವದಿಲ್ಲ. ಆದರೂ ಮೋಟರಿನಿಂದ ಇವು ನಮ್ಮ ಉತ್ತರಕರ್ನಾಟಕಕ್ಕೆ ತೀರ ಹತ್ತರವಾಗಿರುತ್ತವೆ.

ಪ್ರಿಯವಾಚಕರೇ, ಭರತಖಂಡದಲ್ಲಿರುವ ಎಲ್ಲ ತೀರ್ಥಕ್ಷೇತ್ರಗಳನ್ನೂ ಅವುಗಳಿಗಿರುವ ಮಾರ್ಗಗಳನ್ನೂ ವರ್ಣಿಸುತ್ತ ಹೋದರೆ ಅದೊಂದು ಸ್ವತಂತ್ರ ದೊಡ್ಡ ಗ್ರಂಥವೇ ಆಗುವದು. ಆದ್ದರಿಂದ ಹಾಗೆ ಮಾಡಲು ನಮ್ಮ ಈ ಚಿಕ್ಕ ಪ್ರಬಂಧದಲ್ಲಿ ಸಾಧ್ಯವಿಲ್ಲ. ಪ್ರಸಿದ್ಧ ಕ್ಷೇತ್ರವೆನಿಸಿದ ಶ್ರೀ ವಾರಣಾಸಿಯ ಮಾರ್ಗವನ್ನೊಂದು ಕೊಟ್ಟಿರುತ್ತದೆ. ಇನ್ನು (ಅ) ಪರಿಶಿಷ್ಟದಲ್ಲಿ ಶ್ರೀ ಕಾಶೀಕ್ಷೇತ್ರದಲ್ಲಿರುವ ೬೪ ಘಾಟುಗಳ ಹೆಸರುಗಳನ್ನಷ್ಟು ಕೊಟ್ಟು ಈ ಪ್ರಬಂಧವನ್ನು ಮುಗಿಸುವೆವು.

## ಪರಿಶಿಷ್ಟ (ಅ)

### ಶ್ರೀ ಕಾಶೀಕ್ಷೇತ್ರದಲ್ಲಿರುವ ಘಾಟುಗಳ ಹೆಸರುಗಳು:—

೧ ಅಸೀಘಾಟ.
೨ ಸ್ವಪ್ನೇಶ್ವರಘಾಟ.
೩ ಕಕ್ಕುಟೇಶ್ವರಘಾಟ.
೪ ಲೋಲಾರ್ಕಘಾಟ.
೫ ಮದನೇಶ್ವರಘಾಟ.
೬ ಹನುಮಾನ್‌ಘಾಟ.
೭ ಸಿದ್ಧೇಶ್ವರಘಾಟ.
೮ ಲಂಬೋದರಘಾಟ.
೯ ಸ್ಮಶಾನ(ಹರಿಶ್ಚಂದ್ರ)ಘಾಟ.
೧೦ ಚಿಂತಾಮಣಿಘಾಟ.
೧೧ ಕೇದಾರಘಾಟ.
೧೨ ಧರ್ಮೇಶ್ವರಘಾಟ.
೧೩ ರುಕ್ಮಾಂಗದಘಾಟ.
೧೪ ಚಿತ್ರಾಂಗದಘಾಟ.
೧೫ ಕ್ಷೇಮೇಶ್ವರಘಾಟ.
೧೬ ಮಾನಸೇಶ್ವರಘಾಟ.
೧೭ ವೈದ್ಯನಾಥೇಶ್ವರಘಾಟ.
೧೮ ಪಾಂಡೇಘಾಟ.
೧೯ ಚತುಃಷಷ್ಠೀಘಾಟ.
೨೦ ಲಕ್ಷ್ಮಣಘಾಟ.
೨೧ ಶೂಲಟಂಕೇಶ್ವರಘಾಟ.
೨೨ ಪ್ರಯಾಗಘಾಟ.
೨೩ ದಶಾಶ್ವಮೇಧಘಾಟ.
೨೪ ಚಂದ್ರಾದಿತ್ಯೇಶ್ವರಘಾಟ.
೨೫ ತ್ರಿಪುರಾಂತಕೇಶ್ವರಘಾಟ.
೨೬ ಅನ್ನಪೂರ್ಣಾಘಾಟ.
೨೭ ಧುಂಡಿರಾಜಘಾಟ.
೨೮ ವಿಘ್ನೇಶ್ವರಘಾಟ.
೨೯ ವಿಶಾಲಾಕ್ಷೀಘಾಟ.
೩೦ ಜ್ಞಾನೇಶ್ವರಘಾಟ.
೩೧ ಲಲಿತಾಘಾಟ.
೩೨ ಶೀತಲಾಘಾಟ.
೩೩ ತಾರಕೇಶ್ವರಘಾಟ.
೩೪ ಆದಿವಿಶ್ವೇಶ್ವರಘಾಟ.
೩೫ ಸ್ವರ್ಗದ್ವಾರೇಶ್ವರಘಾಟ.
೩೬ ಮೋಕ್ಷದ್ವಾರೇಶ್ವರಘಾಟ.
೩೭ ರಾಜಸಂಧೇಶ್ವರಘಾಟ.
೩೮ ಸ್ಮಶಾನೇಶ್ವರಘಾಟ.
೩೯ ಮಣಿಕರ್ಣಿಕಾಘಾಟ.
೪೦ ಸಿದ್ಧೇಶ್ವರಘಾಟ.
೪೧ ಚಂದ್ರೇಶ್ವರಘಾಟ.
೪೨ ಯಮೇಶ್ವರಘಾಟ.
೪೩ ರಾಮೇಶ್ವರಘಾಟ.
೪೪ ಆತ್ಮೇಶ್ವರಘಾಟ.

## ಪರಿಶಿಷ್ಟ (ಅ) ಮುಂದೆ ಸಾಗಿದ್ದು.

೪೫ ಗಭಸ್ತೀಶ್ವರಘಾಟ.

೪೬ ಮಂಗಳಾಗೌರೀಘಾಟ.

೪೭ ದುರ್ಗಾಘಾಟ.

೪೮ ಕಾಲಭೈರವಘಾಟ.

೪೯ ದಂಡಪಾಣೀಘಾಟ.

೫೦ ಪಂಚಗಂಗಾಘಾಟ.

೫೧ ಬ್ರಹ್ಮಘಾಟ.

೫೨ ಪ್ರಹ್ಲಾದಘಾಟ.

೫೩ ಕಾಮೇಶ್ವರಘಾಟ.

೫೪ ರತ್ನೇಶ್ವರಘಾಟ.

೫೫ ಕೃತ್ತಿವಾಸೇಶ್ವರಘಾಟ.

೫೬ ವೃದ್ಧಕಾಳೇಶ್ವರಘಾಟ.

೫೭ ತ್ರಿಲೋಚನಘಾಟ.

೫೮ ಗಂಗೇಶ್ವರಘಾಟ.

೫೯ ವೃಷಭೇಶ್ವರಘಾಟ.

೬೦ ವ್ಯಾಘ್ರೇಶ್ವರಘಾಟ.

೬೧ ರಾಜಾಘಾಟ.

೬೨ ಆದಿಕೇಶ್ವರಘಾಟ.

೬೩ ವರುಣಾಘಾಟ.

೬೪ ಕಪಿಲಾಘಾಟ.

ಸಂಪೂರ್ಣ.